045

ಶಿವಾನುಭವ ಗ್ರಂಥಮಾಲಾ ನಂ॥ ೪೨

1935

# ಹರಿಹರನ ರಗಳೆಗಳು.

ಭಾಗ ೫

ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಎ. ಎಲ್. ಎಲ್. ಬಿ. ವಿಜಾಪುರ.

Acc. No
045

೧೯೩೫

ಬೆಲೆ ೮ ಆಣೆ.

[ಈ ಗ್ರಂಥದ ಎಲ್ಲ ಹಕ್ಕುಗಳನ್ನು ಸಂಪಾದಕರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ.]

ಗ್ರಂಥಾಲಯ

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ತಮ್ಮ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

# ಪ್ರಸ್ತಾವನೆ.

ಈ ಗ್ರಂಥದಲ್ಲಿ ನಾವು 'ಮಹಾಕವಿ' ಹರಿಹರನು ರಚಿಸಿದ ರಗಳೆಗಳಲ್ಲಿಯ ಆರು ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಇವುಗಳಲ್ಲಿ ನಾವು (೧) ಪುರಾತನರ ರಗಳೆಗಳು (೨) ವೀರಶೈವ ಶರಣರ ರಗಳೆಗಳು (೩) ಶಿವಶರಣರ ರಗಳೆಗಳು ಎಂದು ಮೂರು ಭಾಗಗಳನ್ನು ಮಾಡಬಹುದು. ಈ ವರೆಗೆ ನಾವು ಪ್ರಕಟಿಸಿದ ೪ ಭಾಗಗಳಲ್ಲಿ ೨೦ ರಗಳೆಗಳನ್ನು ಪ್ರಸಿದ್ಧಿಸಿದ್ದು ಈ ೫ ನೇ ಭಾಗದಲ್ಲಿ ೬ ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಈ ರಗಳೆಗಳು ಕನ್ನಡ ವಾಙ್ಮಯದಲ್ಲಿ ಅತ್ಯಂತ ಮಹತ್ವವಾದವುಗಳಿದ್ದು ಇವು ಲೋಕಾದರಕ್ಕೆ ಪಾತ್ರವಾಗುವವೆಂದು ನೆರೆನಂಬಿದ್ದೇವೆ.

ಈ ೫ ನೇ ಭಾಗವನ್ನು ನಾವು ಮೈಸೂರು ಓರಿಎಂಟಲ್ ಲೈಬ್ರರಿಯಿಂದ ದೊರೆತ ಪ್ರತಿ, ತುಮಕೂರು ಜಿಲ್ಹಾ ದಂಡಿನ ಶಿವರದಲ್ಲಿರುವ ಶಿ॥ ಮಾ॥ ಕಲ್ಲಯ್ಯನವರಲ್ಲಿ ದೊರೆದ ಪ್ರತಿ, ಮತ್ತು ಶಿ॥ ಮಾ॥ ಶಿವಮೂರ್ತಿ ಶಾಸ್ತ್ರಿಗಳು ಹುಲುಕುಂಟೆಮಠ ಕೀರ್ತನಕೇಸರಿ ಮು. ತುಮಕೂರ ಇವರು ಕಳಿಸಿದ ಪ್ರತಿ ಈ ಮೂರು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಪ್ರಕಟಿಸಿದ್ದೇವೆ. ಈ ಗ್ರಂಥಗಳನ್ನು ನಮಗೆ ಕಳಿಸಿಕೊಟ್ಟದ್ದಕ್ಕಾಗಿ ನಾವು ಮೇಲ್ಕಂಡ ಎಲ್ಲ ಮಹನೀಯರಿಗೆ ಕೃತಜ್ಞರಾಗಿದ್ದೇವೆ.

ವಿಜಾಪುರ — ಫ. ಗು. ಹಳಕಟ್ಟಿ.

ತಾ॥ ೧೩ – ೩ – ೩೫

## ಅನುಕ್ರಮಣಿಕೆ.


| | | ಪು |
|---|---|---|
| ೧ | ಬಾಣ. | ೧ |
| ೨ | ಉದ್ಭಟದೇವ. | ೬ |
| ೩ | ಹಲಾಯುಧ. | ೧೩ |
| ೪ | ಸಾಮವೇದಿ. | ೨೮ |
| ೫ | ಮಳೆಯರಾಜ. | ೩೬ |
| ೬ | ಓಹಿಲಯ್ಯ. | ೫೭ |


# ಹರಿಹರನ ರಗಳೆಗಳು.

ಭಾಗ ೫.

## ಬಾಣಶರಣರ ಮಹಾತ್ಮೆ.

ಕಂದ॥ ಕ್ಷೋಣೀತಳದೊಳ್ಮೆರೆದಂ
ಬಾಣ ನವಗದ್ಯ ಪದ್ಯ ಕಾವ್ಯಕಳಾಗೀ
ರ್ವಾಣನನವಿರ್ಗಸುಮನೋ
ಬಾಣನ ನೊಲವಿಂದ ಹಂಪೆಯ ವಿರೂಪಾಕ್ಷಂ ।

### ರಗಳೆ.

ಭೂಮಿಯೊಳು ಕಂಧಾರವೆಂಬ ಪಟ್ಟಣದಲ್ಲಿ
ಭೂಮಿ ಪತಿಯೊಪ್ಪುವಂ ನಂದನೆಂಬರಸಲ್ಲಿ
ಆತನಗ್ಗದ ಕವಿಗಳೆನಿಸಿಕೊಂಡೊಪ್ಪುವರ್
ನೂತನಕಳಾಲಸಿತ ವಾಕ್ಯಮುಮನೊಪ್ಪುವರ್
ಬಾಣನು ಮಯೂರನುಂ ಕಾಳಿದಾಸಂ ನೋಡ
ಜಾಣರೆನಿಪಾ ಮೂವರುಂ ಪ್ರಸಿದ್ಧರ್ನೋಡ
ಅವರೊಳಗೆ ಸಜ್ಜನರ್ಶಿವಭಕ್ತಿ ಕಾಮಿಗಳ್
ಶಿವಭಕ್ತರತ್ತಸುರ್ಸ್ಯಂಕರಪ್ರೇಮಿಗಳ್
ಎನಿಪ ಬಾಣಂ ಕಾಳಿದಾಸನುಂ ಸೈತಾಗಿ
ಮನದೊಳ್ಮಯೂರನೊಡತಣ ಮಚ್ಚರಂ ತಾಗಿ
ನಂದನೋಲಗದೊಳೊಂದು ದಿವಸಮಿರ್ಬರುಮಿರ್ದು
ನಂದ ಕವಿತೆಯು ಪುರುಡು ಮನದೊಳಗೆ ಮಿಗೆ ಸಾರ್ದು
ಎಂದರಾ ನಂದಂಗೆ ತಾವಿರ್ಬರುಂ ಕೂಡಿ
ಸಂದಣಿಸಿದೇಕಾಂತದೊಳ್ನುಡಿಗಳಂ ನೀಡಿ
ಕವಿ ಮಯೂರನನಿಲ್ಲಿ ಪುಗಿಸಲಾಗದು ದೇವ

ಅವಯವಂ ಸರ್ವ ದುರ್ವರ್ಣನಾದುದು ದೇವ
ಎನಲಲ್ಲಿ ನಂದರಾಜಂ ಕೌತುಕಮನಾಳ್ದು
ಮನದೊಳಗಿದಂ ಪರೀಕ್ಷಿಪೆನೆಂನು ಬಗೆದಾಳ್ದು
ಅನಿಮಿತ್ತಲೋಕುಳಿಯನೊಪ್ಪದಿಂ ಹಣ್ಣಿದಂ
ತನತನಗೆ ಪರಿಜನಕ್ಕೆಲ್ಲ ನೆರೆ ಸಾರಿದಂ
ನಾಳೆಯೋಕುಳಿ ಎಂದು ಪುರಜನಕೆ ಪೇಳುತಿರೆ
ಆಳೆದ್ದು ಜನವೆಲ್ಲ ನೆರೆದು ಸಂಭ್ರಮಿಸುತಿರೆ

ಆರಿದನಾಗಳೆ ಮಯೂರಂ ಜಲಕ್ರೀಡೆಯಂ
ನೆರೆ ಬಾಣಕಾಳಿದಾಸರ ಮನಸಿನೋಜೆಯಂ
ಅರಿದು ಚಿಂತಿಸುತಿರಲ್ಕಸ್ತಮಯವಾಯಿತ್ತು
ಮೆರೆವ ಸೂರ್ಯನ ಕಾಂತಿಯಂಬುನಿಧಿಯೊಳಗಾಯ್ತು
ಮೆಲ್ಲಮೆಲ್ಲನೆ ತಮಂ ತೀವಿತ್ತು ಗಗನಮಂ
ಅಲ್ಲಲ್ಲಿ ಮುಸುಕಿದುದು ಪಸರಿಸಿತು ಲೋಕಮಂ
ಭೋಂಕೆನೊಗೆದುದು ಮುಂದೆ ಬೆಳ್ದಿಂಗಳಂತಲ್ಲಿ
ಶಂಕಿಸುತ್ತಂ ಸತಿಸಮೂಹ ಓಡಿತ್ತಲ್ಲಿ
ಇಂದ್ರದಿಗ್ವಿವರದಿಂ ಪೊರಮಟ್ಟನೊಪ್ಪದಿಂ
ಚಂದ್ರಮಂ ಲೋಕಮಂ ಧವಳಿಸುತ್ತೊಪ್ಪದಿಂ
ಬರಲಲ್ಲಿ ಶಿವಕೀರ್ತಿ ರಾಯ ಬಾಲೆಯ ತೆರದಿ
ಗಿರಿಸುತೆಯ ದರಹಾಸಮಂ ರಂಜಿಸುವ ತೆರದಿ
ಬಂದ ಚಂದ್ರಮನಿಂದೆ ರಾತ್ರಿಯೊಪ್ಪುತ್ತಿರಲ್
ಇಂದುವಾರಾಶಿಯತ್ತತ್ತ ಸಾರುತ್ತಿರಲ್

ನಿದ್ರೆ ಇಲ್ಲದೆ ಮಯೂರಂ ಚಿಂತಿಸುತ್ತಿರ್ದು
ಭದ್ರಗುಣನೆಂತು ಮಾಡುವೆನೆಂದೆನುತ್ತಿರ್ದು
ಮನದೊಳಗೆ ನಿಶ್ಚಯಿಸಿದಂ ಭಾನುವಿಂದಿಂದೆ
ತನುವಿನ ವಿವರ್ಣಮಂ ತೀರ್ಚುವೆಂದಿಂದಿಂದೆ
ಎಂದು ಬೆಳಗಪ್ಪ ಜಾವದೊಳೆದ್ದು ನಡೆತಂದು
ಬಂದುದಕದೊಳಗೆ ಕಂಠಪ್ರಮಾಣಂ ನಿಂದು
ಸೂರ್ಯಾಭಿಮುಖನಾಗಿ ಕೈಯೆತ್ತಿ ಪೊಡಮಟ್ಟು



ಸಾರ ಮಂತ್ರಂಗಳಂ ಮನದ ತುದಿಯೊಳಗಿಟ್ಟು
ತ್ರಿಜಗಮಂ ಬೆಳಗುವ ಮಹಾಕಾಂತಿ ಸಂಪನ್ನ
ಭುಜಗಭೂಷಣ ಸರ್ವಕಾರುಣ್ಯ ಸಂಪನ್ನ
ಲೋಕಕ್ಕೆ ಕಣ್ಣಾಗಿ ಕಾಣಿಸುವ ಮಹಿಮನೇ
ಲೋಕಕ್ಕೆ ಬೆಳಗಾಗಿ ಬೆಳಗುವಾದಿತ್ಯನೇ
ಜೀವರಾಯುಷ್ಯ ರಾಶಿಯನಳಿವನಿಶ್ಚಳನೆ
ಭಾವಿಸಲು ತಮಕುಲವನೋಡಿಸುವ ನಿರ್ಮಳನೆ
ಎಂದಲ್ಲಿ ಸೂರ್ಯಶತಕವನೋದಿ ಮೆಚ್ಚುತಂ
ಬಂದು ಮೆಯ್ಯಂಗೊಟ್ಟನಾದಿತ್ಯನುನ್ನತಂ
ಪಡೆದು ಬಂದ ಮಯೂರಮೆಯ್ಯನಾನಂದದಿಂ
ಪಡೆದು ಬರೆ ಮೈ ಸುವರ್ಣಚ್ಛಾಯೆಯಂದದಿಂ
ಇರೆ ಮನೆಯೊಳಿರ್ದಂ ಸುಖಾಸ್ವಾದಮನನಾಗಿ

ಪರಿದುದಿತ್ತಂ ತಮಂ ಜನದ ಮನಕನುವಾಗಿ
ಬೆಳಗಾಗೆ ನಂದಭೂಪಂ ನಗರಿಯಂ ಬರಿಸಿ
ತೊಳತೊಳಗುವೋಕುಳಿಯ ಕುಪ್ಪಸಮುಮಂ ತರಿಸಿ
ಎಲ್ಲರ್ಗೆ ಕೊಡುತುಂ ಮಯೂರಂಗೆಯುಂ ಕೊಟ್ಟು
ಎಲ್ಲರಂ ಸಿಂಗರಂ ಮಾಡಲ್ಕೆ ಬೇಳ್ಕೊಟ್ಟು
ನಡುವಗಲ್ನಂದ ರಾಜಂ ಸಿಂಗರಂ ಮಾಡಿ
ನಡೆತಂದು ಕಡು ಚಪ್ಪೆಯರ ಮೊತ್ತದೊಡಗೂಡಿ
ನನೆಯ ಹರಿಗೆಗಳಿಂದೆ ಹೂವಿನ ಕಠಾರದಿಂ
ಮೊನೆಯ ಮೊಗ್ಗೆಗಳ ಪಿಲ್ಲಣಿಗೆಯೊಯ್ಯಾರದಿಂ
ಕೇದಗೆಯ ಸಣ್ಣೆಸಳ ಕೂರಲಗು ಒಪ್ಪುತಿರೆ
ಪಾದರಿಗಳಿಂ ಸಮೆದ ಕಂಚುಳಿಕೆಯೊಪ್ಪುತಿರೆ
ಬಿದಿರಂಡೆ ಕೊಂಬು ಹೊಯಿಸಿಪ್ಪನಾಳಿಗಳೆಸೆಯೆ
ಪದೆಗೊರಲ ಪದ್ಮವದನೆಯರ ಹಂಬಂ ಮಸೆಯೆ
ಮುಂದಿರ್ದ ಪರಿವಾರಕೆಲ್ಲ ಕೆಯ್ಯಂ ಬೀಸಿ
ಸಂದಣಿಸಿ ಬೆರಿಸುತ್ತ ಪರಿಮಳಜಳಂ ಸೂಸೆ
ತಿರುಗಿದೊಡೆ ತಿರುಗಿ ನಿಂದನುವಾಗಲನುವಾಗೆ
ಬೆರಿಸಿದೊಡೆ ಬೆರಿಸಿ ಕಟ್ಟಿದಿರಾಗಲಿದಿರಾಗೆ

ಆಡುವವರೊಳ್ನಿಂದನಾ ಮಯೂರನನರಿದು
ನೋಡಿ ಹೊಯ್ ಹೊಯ್ ಬೆನ್ನನೊಡ್ಡೆನುತ್ತಂ ಹೊಯ್ದು
ಹೊಯ್ಯೆ ಬೆನ್ನೊಡ್ಡಿದಂ ನಿಂದು ನೋಡದೆ ಮತ್ತೆ
ಕೆಯ್ಯಾರೆ ಹೊಯ್ದೊಡಂ ಕೆಲಕೆ ಸಾರದೆ ಮತ್ತೆ
ಇರೆ ನೊಂದೆ ಎಂದರಸನಲ್ಲಿ ಬೋಳೈಸುತ್ತೆ
ಹರುಷದಿ ಮಯೂರನಂ ನೋಡಿ ಸಂತೈಸುತ್ತೆ
ಬಾಸುಳಂ ನೋಳ್ಪ ನೆವದಿಂ ಕುಸ್ಪಸಂಗಳಿಯೆ
ಭಾಸುರ ಸುವರ್ಣ ಮಯವಾಗಿ ದೇಹಂ ಮೆರೆಯೆ
ತಿರುಗಿದಂ ಸರ್ವಸಂಭ್ರಮದೆ ತನ್ನರಮನೆಗೆ

ಕರೆ ಬಾಣ ಕಾಳಿದಾಸರನೆನುತ್ತಂ ತನಗೆ
ಕೋಪವೇರುತ್ತ ಹುಸಿಗಲಸಿ ನಂದಂ ನೊಂದು
ತಾವಿಸುತೆ ಕರೆಹೋಗೆನುತ್ತೋಲಗದೊಳಂದು
ಇರೆ ಬಂದನಾ ಬಾಣನಾಸ್ಥಾನದೊಳಗಿಂಗೆ
ಹರುಷದಿಂ ಮುಕುಟಕೋಟಿಗಳ ನುಣ್ಬೆಳಗಿಂಗೆ
ಬಂದು ನಿಂದಿರೆ ಕಂಡು ನುಡಿದನರಸಂ ನೊಂದು
ಸಂದಣಿಸ ಕೋಪದಿಂ ನೋಡಿ ನಡುಗುತ್ತಂದು
ಇಂತು ಹುಸಿಯಂ ಪೇಳ್ವರೆ ಮಯೂರನನರಿದು
ಸಂತತಂ ಹೊಂಬಣ್ಣವೆನಿಪ ದೇಹವನರಿದು

ಎನೆ ಬಾಣನೆಂದನೆಲೆ ನಂದನೆ ವಿಚಾರಿಪುದು
ತನುವಿನೊಳ್ಸುವರ್ಣ ಉಂಟು ಚಿತ್ತೈಸುವುದು
ತರಣಿಯಿಂ ಪೋದಿರಲ್ಪಡೆದನೀ ವರ್ಣಮಂ
ಅರಸ ಕೇಳ್ಪುಸಿನುಡಿವುದಿಲ್ಲ ದುರ್ವರ್ಣಮಂ
ಎಂದೊಡೆ ಮಯೂರನುಂಟೆಂದೊಡಂಬಡುತಮಿರೆ
ಮುಂದೆ ಬಾಣಂ ನಿಂದು ಮೂದಲಿಸಿಕೊಳುತಮಿರೆ

ಆದೊಡೇನಿಂತಿದಂ ಮಾಳ್ಪರಾರಿಂದೆನಲ್
ವಾದಕ್ಕೆ ಸೂರ್ಯನಿಂ ಪಡೆವುದೊಂದರಿದೆನಲ್
ಘುಡುಘುಡಿಸಿದಂ ಬಾಣನಾ ಸಭಾಪತಿಯೊಡನೆ
ನೃಪನ ಕರುಣವನಲ್ಲಿ ಬಳ್ಪಿಡಿದು ತೊಡಲೊಡನೆ



ಮುನ್ನಳ್ಕಿದಂ ಪಡೆದನಿಲ್ಲಿ ತಾಂ ಪೊಸತೇನು
ಬಿನ್ನಣಮದೇಕೆ ಎಂಗಿಲಂ ಪಡೆವೆನರಿದೇನು
ಸಡಿಫಡ ಇದೊಂದರಿದೆ ಕಡಿ ಕೆಯ್ಯನೊಂದಲ್ಲಿ
ತಡೆಯದಾಗಳ್ಕಡಿಯಿಸಿದನೊಂದನಂತಲ್ಲಿ
ಕಡಿದ ಕೈ ಇರ್ದುದಾ ಯೊಡ್ಡೋಲಗದ ನಡುವೆ
ನೃಪನಲ್ಲಿಗೆಯ್ತಂದನೊಲ್ದು ಭಕ್ತರ ನಡುವೆ
ಬಂದಲ್ಲಿ ರಂಗಮಂಟಪದೊಳಗೆ ಕುಳ್ಳಿರ್ದು
ಇಂದುಧರನತ್ತ ಮನದೊಳಗೆ ಹತ್ತಿರೆ ಸಾರ್ದು
ಹೃತ್ಕಮಳದೊಳಗಣ್ಮೆ ಶಿವಲಿಂಗಮಂ ತಂದು
ಸತ್ಯವೀಶ್ವರನೊಲ್ದು ಪೊಗಳತೊಡಗಿದನಂದು

ದೇವ ಓಂ ಜಯಜಯ ಮಹಾದೇವ ಕರುಣಿಸುದು
ದೇವ ಕಾಲಾಂತಕ ಮಹಾಕಾಲ ಕರುಣಿಪುದು
ದೇವ ಭೀಕರ ಮಹಾಕಾಳಗಳ ಕರುಣಿಪುದು
ದೇವ ಸುರರಾಪದ್ವಿನಾಶಕರ ಕರುಣಿಪುದು
ದೇವ ಚಂದ್ರಾಭರಣ ಭಾಳಾಕ್ಷ ಕರುಣಿಪುದು
ದೇವ ನಾರದಗೇಯ ಶುಭಚರಿತ ಕರುಣಿಪುದು
ದೇವ ನಾಗಾಜಿನ ಶುಭಾವರಣ ಕರುಣಿಪುದು
ದೇವ ತ್ರಿಲೋಕ ಜನ ತಿಮಿರಹರ ಕರುಣಿಪುದು
ದೇವ ಶರಣಾಬ್ಜ ಮುಖ ದಿನಮಣಿಯೆ ಕರುಣಿಪುದು
ದೇವ ಘಳಘಳಿಪ ತ್ರಿಶೂಲಧರ ಕರುಣಿಪುದು
ದೇವ ದುಸ್ತರತರ ತ್ರಿಪುರಹರ ಕರುಣಿಪುದು
ದೇವ ತ್ರಿಲೋಚನ ಮಹಾಗುರುವೆ ಕರುಣಿಪುದು
ದೇವ ಗಂಗಾವೃತ ಜಟಾಭಾರ ಕರುಣಿಪುದು
ದೇವ ಸದ್ಭಕ್ತಜನ ದಾನಕರ ಕರುಣಿಪುದು
ಎಂದು ಪೊಗಳಲ್ಶಂಕರಂ ಸುಮ್ಮನಿರುತಿರಲ್
ಒಂದುಮಂ ಕರುಣಿಸದೆ ಶಿವಲಿಂಗದೊಳಗಿರಲ್

ಅಂಬಿಕಾ ನೈತಂಬ ಬಿಂಬಲಂಪಟ ಹಸ್ತ
ಎಂಬ ನುಡಿಗೇಳ್ದು ನಸುನಗುತಭಯವರ ಹಸ್ತ

ಹೊಗಳದಿರು ಬಾಣ ಏನುಂ ಪೇಳಿಸುತ್ತಮಿರೆ
ನಾಗಭೂಷಣ ಕರುಣಿಸಿನುತ ಕೈ ಮುಗಿವುತಿರೆ
ಕೆಯ್ಯೊಡನೆ ಕೊಯ್ದು ಕೈ ಪಲ್ಲವಿಸಿತಾತಂಗೆ
ಕೆಯ್ಯೊಡನೆ ಕಲ್ಪತರುವೈತಂದುದಾತಂಗೆ
ಬಂದ ಕಯ್ಯೊಂದಲ್ಲ ಬೇಡಿದವನಾದಿಯುಂ
ಅಂದು ಕೈಯ್ಯಿಲ್ಲದವರೆಲ್ಲರ್ಗೆ ದಾರಿಯುಂ
ನಿಂದು ಬಂದೆಲ್ಲರ್ಗೆ ಕೈಗಳಂ ಕೊಡಿಸುತುಂ
ಬಂದ ಭಕ್ತರ್ಗೆಲ್ಲ ಭಕ್ತಿಯಿಂದೆರಗುತಂ
ಕಹಳೆ ಮದ್ದಳೆ ಶಂಖಪಟಹ ನಾದಂಗಳಿಂ
ಬಹು ವಿಧದ ಕಿರು ಘಟಿಯ ಬಹಳ ಸ್ವನಂಗಳಿಂ
ಶರಣರೊಡಗೂಡಿ ಶಿವನಂ ಕೇಳಿಸುತ್ತಮಿರೆ
ಪರಿಪರಿಯ ಸಂತಸದ ಸುಖದೊಳೋಲಾಡುತಿರೆ

ನಂದರಾಜಂ ಕೇಳ್ದು ಕೌತುಕಮನೆಡೆಗೊಂಡು
ಬಂದು ಸಯ್ಗಡೆದು ಬಾಣನನಾಗಳದಿರ್ಗೊಂಡು
ಗಜಮಸ್ತಕದ ಮೇಲೆ ಪುರದೊಳಗೆ ಮೆರೆಯಿಸುತೆ
ನಿಜ ರಾಜಧಾನಿಯೊಳ್ ನೇಹದಿಂ ಮೆರೆಯಿಸುತೆ
ಇರಲಂದು ತೊಡಗಿಪರ ಸೇವೆಯುಂ ಪಿಂಗಿದಂ
ಹರನ ನಿಷ್ಠೆಯ ಭಾವಭಕ್ತಿಯೊಳ್ ಹೊಂಗಿದಂ
ಇಂತು ಪಲವುಂ ಕಾಲವೀಶನಂ ಪೊಗಳುತಿರೆ
ಸಂತತಂ ಶಿವನ ಮೆಲ್ಲಡಿಗೆ ತೊತ್ತಾಗುತಿರೆ
ಬಂದುದೊಂದಗ್ಗದ ವಿಮಾನಮಾಕಾಶದಿಂ
ಅಂದು ನೋಳ್ಪರ ಕಣ್ಗೆ ಸೂರ್ಯ ಪ್ರಕಾಶದಿಂ
ಬರೆ ವಿಮಾನವನೇರಿ ರಜತಗಿರಿಗೆಯ್ತಂದು
ಪುರಹರನ ಚರಣಕ್ಕೆ ಸೈಗೆಡೆವುತುಂ ನಿಂದು
ಕಂಡು ಬಾಣಂಗೆ ಗಣಪದವಿಯುಂ ನಲಿದಿತ್ತು
ಖಂಡೇಂದುಮೌಳಿ ಪರಮ ಸ್ನೇಹಮಂ ಪೊತ್ತು
ಭಕ್ತ ಜನದಿಚ್ಛೆಯುಂ ಸಲಿಸುವ ಕೃಪಾಸಿಂಧು
ಭಕ್ತರೇನೆಂದುದಂ ಮಾಡುವ ದಯಾಬಂಧು
ಭಕ್ತ ಗುರುಭಕ್ತನಿಧಿ ಭಕ್ತರ ಮನೋಹರಂ



ಭಕ್ತಗತಿಭಕ್ತ ಮತಿಭಕ್ತ ಸಂಪತ್ಕರಂ
ಪಂಪಾಪುರಾಂಬೋಧಿ ಪೂರ್ಣೇಂದು ಒಪ್ಪಿದಂ
ಹಂಪೆಯ ವಿರೂಪಾಕ್ಷನನವರತವೊಪ್ಪಿದಂ

ಕಂದ॥ ವಾಣೀಪತಿಹರಿಯರಿಯದ
ಜಾಣಂ ಕಲ್ಯಾಣ ಸದನನೆನಗೊಲವಿಂದಂ
ಕ್ಷೀಣತರಪದವ ನೀವುದು
ಬಾಣನ ಸುತನೆಂದು ಹಂಪೆಯ ವಿರೂಪಾಕ್ಷಾ ॥

---

# ಉದ್ಭಟದೇವರ ಮಹಾತ್ಮೆ.

**ಕಂದ॥** ಪಟುತರದಿಂ ಪತಿ ನುಡಿದಾ।
ಘಟಿತಮನೆ ಘಟಿಯಿಸುವೆನೆನಲ್ಕೊಂಡೊಯ್ದಂ॥
ನಿಟಿಲಾಕ್ಷಂ ಪುರಸಹಿತು।
ದ್ಭಟದೇವನೆಮ್ಮ ಹಂಪೆಯ ವಿರೂಪಾಕ್ಷಂ॥

## ರಗಳೆ.

ಉರ್ವಿಯೊಳೊಂದು ಪುರಂ ರಂಜಿಸುವುದು
ಶರ್ವನ ಸದ್ಭಕ್ತಿಯನುದ್ಧರಿಪುದು
ಅಲ್ಲಿರ್ಪಂ ಶಿವಭಕ್ತಿ ಸದರ್ಥಂ
ಸಲ್ಲಲಿತಂ ಶಿವನೊಳಗೇಕಾರ್ಥಂ
ಆತನ ಪೆಸರೆಸೆವುದ್ಭಟದೇವಂ
ನೂತನ ಚಿತ್ತ ಸುಪೂಜಾಭಾವಂ
ಬಲವರ್ಪುದು ಕಾಲೊಳಗಿಡಿದಿರ್ಪುದು
ನಲಿವರ್ಪುದು ಮನದೊಳ್ನೆಲಸಿರ್ಪುದು
ಕರಣಂಗಳ್ ಶಿವನುಪಕರಣಂಗಳ್
ಪರಿಚಾರಕರಿಂದ್ರಿಯ ವರ್ಗಂಗಳ್
ಹೃದಯ ಸರೋಜಂ ಸೆಜ್ಜೆಯದಾಗಿರೆ
ಸದಮಳ ಮನವೇ ಕುಸುಮವದಾಗಿರೆ
ಹರಣಂ ಶಿವಲಿಂಗವೆ ತಾನಾಗಿರೆ
ಪರಿಣಾಮವೆಯಮೃತಾನ್ನವದಾಗಿರೆ
ಆರಾಧಿಪನಿರುಳುಂ ಪಗಲುಂ ಸಲೆ
ಪೂರೈಸುವ ಪೂಜೆಯೊಳೀಶಂ ನಿಲೆ
ಶಿವನೊಳ್ನೋಟಂ ಶಿವನೊಳ್ಕೂಟಂ
ಶಿವನೊಳ್ಮಾಟಂ ಶಿವನೊಳ್ಬೇಟಂ
ಹಾಡುವುದೆಲ್ಲಂ ಸಕಲಸ್ತೋತ್ರಂ
ಮಾಡುವುದೆಲ್ಲಂ ಪೂಜಾಸ್ತೋತ್ರಂ
ನೆನೆದುದೆ ಎಲ್ಲಂ ಪರಮಧ್ಯಾನಂ
ತನುಚೇಷ್ಟೆಗಳೀಶ್ವರನನುಮಾನಂ
ತಾನಾಗಿರೆ ಭಕ್ತಿಯ ಕರುಮಾಡಂ
ನಾನಾ ಸಾಮರ್ಥ್ಯದ ನಿಧಿಯಾದಂ
ತ್ರೈಕಾಲಜ್ಞಾನಮನೊಳಕೊಂಡಂ
ಲೋಕೈಕ ಪ್ರಭುವಂ ಕೆಳೆಗೊಂಡಂ

ಇಂತುದ್ಭಟದೇವಂ ನೆರೆ ಮೆರೆದಿರೆ
ಸಂತತ ಶಿವನಾಸಂದದೊಳೊಪ್ಪಿರೆ
ತನ್ನ ಮನೋವಲ್ಲಭೆ ಎನಿಸಿರ್ಪಳ್
ಉನ್ನತ ಶಿವಪೂಜಾ ಸುಖಿಯಪ್ಪಳ್
ಮನಕವಯವಮಾದಂತೆಸೆದಿರ್ಪಳ್
ತನುವೆರಡೊಂದೇ ಜೀವೆನಿಸಿರ್ಪಳ್
ಜೀವಕಳೆಗಳಂ ಕಲೆಯೊಳ್ತೋರ್ಪಳ್
ಭಾವದ ಬಳಕೆಯ ಬೆಳಸೆನಿಸಿರ್ಪಳ್
ಇಂತೆನಿಪಾ ವಲ್ಲಭೆಯುಂ ತಾನುಂ
ಸಂತ ಸುಖದೊಳೊಲಿದಿರ್ದುಂ ತಾನುಂ

ನೆತ್ತದ ಭರದಿಂದಾಡುತ್ತಿರೆಯಿರೆ
ಮುತ್ತುವದಾಯಕ್ಕುತ್ಸವಿಸುತ್ತಿರೆ
ಇರ್ದಿರ್ದುದ್ಭಟದೇವಂ ನಸುನಗೆ
ಸಾರ್ದು ಶಿವೈಕ್ಯ ಜ್ಞಾನಿ ಕರಂ ನಗೆ
ಸೆಡೆದುಳ್ಳಿಯ್ಯಳ್ಕಸದೊಳ್ಮನಿವಳ್
ಒಡವಾದಳ್ ಮಾನಿನಿ ಬಸವಳಿದಳ್
ಹಾಸಂಗಿಯನಿಳಿಪುತೆ ಹೊರೆಯಿಳಿದಳ್
ಲೇಸಾಯ್ತಾಟವೆನುತ್ತಂ ನುಡಿದಳ್
ಏಕಾಯ್ತೀಗಳ ಕಾರಣ ಹಾಸ್ಯಂ
ಏಕೆನ್ನಿಂದುಂಟೇಯಪಹಾಸ್ಯಂ
ಏತರ ಕುಂದಂ ಕಂಡಿರಿ ನೀವೆನೆ
ಏತಕ್ಕಾದುದು ನಸುನಗೆ ನಿಮಗೆನೆ

ನಿನ್ನಯ ಕಾರಣವಲ್ಲಂಬುಜಮುಖಿ
ಎನ್ನಯ ಶರಣರ ಸಂಗಂ ಶಶಿಮುಖಿ
ಸೌರಾಷ್ಟ್ರದೊಳಿರ್ದೋಹಿಲದೇವಂ
ತಾಂರಾದ್ರಿಗೆ ನೆಗೆಯುತೆ ಶಿವಭಾವಂ
ಪಶುಪತಿಯೊಲವೊಚ್ಚಿತವಾಗಿರ್ದಂ
ಶಶಿಧರನೊಳ್ಸಂಮತನಾಗಿರ್ದಂ
ಓರ್ವನೆ ಪೋದಂ ದೇಶಿಗರಂದದಿ
ಶರ್ವನ ಕರುಣಂಬಡೆಯುದರಂದದಿ
ಘಂಟೆಯ ಮೊಳಗಾಗೆಯೆ ತಾಂ ಬಿರ್ದುದು
ನಂಟರ್ನಲ್ಲರ್ನೋಡುತ್ತಿರ್ದುದು
ಇದು ಕಾರಣದಿಂ ನಸು ನಗುತಿರ್ದೆಂ
ಸದಮಳ ಭಕ್ತಂಗಾಂ ನಗುತಿರ್ದೆಂ

ಎನೆ ಕಟಕಿಯ ನುಡಿ ಆಡಲು ಕಾಮಿನಿ
ಮನದೊಳ್ನಸುನಗುತೆಂದಳ್ಮಾನಿನಿ
ನಗೆಯೊಪ್ಪುವುದೀ ಪುರ ಸಹಿತೊಯ್ವಡೆ
ನಗೆ ಸಫಲಂ ನಗುವಂದದೊಳೊಯ್ವಡೆ
ಕುಳ್ಳಿರ್ದೆಲ್ಲರನಾಡಲ್ಬಹುದೇ
ಒಳ್ಳೆಯರಂ ಹೊಲ್ಲಹವೆನಬಹುದೇ
ಮಾತ ನುಡಿಯೆ ಮಾತಿನೊಳೇನಪ್ಪುದು
ನೂತನ ಗುಣಮುಂ ತೋರಲ್ವೇಳ್ಪುದು

ಎಂದೊಡೆ ಮನದೊಳ್ ಘುಡಿಘುಡಿಸುತ್ತುಂ
ಇಂದುಧರನ ಶರಣಂ ನೋವುತ್ತುಂ
ಪುರಮುಂ ಕೊಂಡೊಯ್ವಪೆನರಿದಾವುದು
ಧರೆ ಚಿತ್ರವೆನಲ್ಕೊಯ್ವಪೆನೇವುದು
ನಾಡಿದು ಪೋಪೆಂ ಸೋಮನವಾರಂ
ಮಾಡುವುದುಂ ಮಾಡೆನುತುಂ ಧೀರಂ
ಇರೆ ಮಾನಿನಿಯುಣಕಕ್ಕಣಕಿಸುತಿರೆ
ಹರಭಕ್ತಂ ಕೊಂಡೊಯ್ವಪೆನೆನುತಿರೆ



ಕೊಂಡೊಯ್ವಂ ಕೊಂಡೊಯ್ವಂ ಪುರವಂ
ಕಂಡರಿಯವೆ ಕೇಳುದ್ಭಟನಿರವಂ
ಎನುತಂ ದೆಸೆಗೈಗಾವುದರಂ ತರೆ
ತನಗುಳ್ಳವರಂ ನೆರೆ ಬರಿಸುತ್ತಿರೆ
ಸಾರಿಸುತುಂ ದೆಸೆದೆಸೆಗಟ್ಟುತ್ತಿರೆ
ಮೀರಿದ ಮಾತಂ ನೆರೆ ಹರಿವುತ್ತಿರೆ
ಎನಿತೆನಿತುಂ ಸತಿ ಸಂಭ್ರಮಿಸುತ್ತಿರೆ
ಅನಿತನಿತುಂ ಭಕ್ತಂ ಮೀರುತ್ತಿರೆ
ಸರ್ವ ಜನಂ ಶಿವಪುರಮುಂ ತೀವುತೆ
ಶರ್ವನ ಗಣಪದಕೆಲ್ಲಂ ಬಯಸುತೆ
ಪಾಪಿಗಳುಂ ನಿಷ್ಪಾಪಿಗಳೆಲ್ಲಂ
ತಾಪತ್ರಯದಿಂ ಬೇವವರೆಲ್ಲಂ
ತಂಡದೊಳೆಯ್ತಂದೊಲವಿಂ ತೀವಿತು
ಕಂಡವರುಂ ಕೇಳ್ದವರುಂ ತೀಪಿತು
ಇನಿತು ಪುರಂ ನರರಂತಾಯ್ತುಂತಿರೆ

ಅನಿತಾ ಮಾನಿನಿ ನುಡಿಗಳ್ತೀವಿರೆ
ಕೊಂಡೊಯ್ವೊಡೆ ಕೈಲಾಸದೊಳಿರ್ಪೆಂ
ಅಂಡಲೆವ ದುರಿತಗಳ ನೀಗಿರ್ಪೆಂ
ಇಲ್ಲಾ ಭಕ್ತನನೇ ಭಂಗಿಸುವೆಂ
ಎಲ್ಲಾ ಪಿರಿಯರೊಳಂ ಪಿಂಗಿಸುವೆಂ
ಎರಡುಂ ಪರಿಯಿಂದೆನಗೇ ಕಾರ್ಯಂ
ಹರಭಕ್ತಂಗರಿದಘಟಿತ ಕಾರ್ಯಂ
ಎನುತುದ್ಭಟನಲ್ಲಿಗೆ ನಡೆತಂದಳ್
ಘನ ಮಹಿಮನ ಸನ್ನಿಧಿಗೆಯ್ತಂದಳ್
ಬಂದುದು ವಾರಂ ನಿಂದುದು ಜನವಿದೆ
ಇಂದವೆ ಕೊಂಡೊಯ್ವುದು ತಳ್ವಿಲ್ಲದೆ
ಎನಲುದ್ಭಟದೇವಂ ನಡೆತಂದಂ
ಮನದೊಳಗೆರಡಿಲ್ಲದನೆಯ್ತಂದಂ
ಬಂದು ಶಿವಾಲಯದೊಳಗಂ ಪುಗುತಂ

ನಿಂದುದ್ಧೂಳನದಿಂದಂ ಮಿಗುತಂ
ರುದ್ರಾಕ್ಷಿಗಳಂ ಮೇಳೈಸುತ್ತಂ
ರುದ್ರನನೊಳಗಳವಡಿಸುತೆ ಬರುತುಂ
ಶಿವಲಿಂಗಕ್ಕಭಿಷೇಕಂ ಮಾಡುತೆ
ನವ ಪರಿಮಳ ಪೂಜೆಗಳಂ ಮಾಡುತೆ
ಧೂಪಾರತಿಗಳ ನಲವಿಂದೆತ್ತುತೆ
ಭಾಪುರೆ ಶಿವ ಎಂದಭವನ ನೋಡುತೆ
ಆರೋಗಿಸಲಿತ್ತನುನಯದಿಂದಂ
ಧೀರಂ ತಾಂಬೂಲವನೊಲವಿಂದಂ
ಕುಡುತಂ ಸದಮಳ ಮತಿ ಕುಳ್ಳಿರ್ದಂ
ಕಡು ಸಲುಗೆಯ ಶರಣಂ ಕುಳ್ಳಿರ್ದಂ
ಉದ್ಭಟನದ್ಭುತ ಗುಣಿ ಕುಳ್ಳಿರ್ದಂ
ಸದ್ಭಕ್ತಂ ಯುಕ್ತಂ ಕುಳ್ಳಿರ್ದಂ
ಹರನಂ ಚಿತ್ತದೊಳಿರಿಸುತ್ತಿರ್ದಂ
ಹರಲೀಲೆಯನುದ್ಯೋಗಿಸುತಿರ್ದಂ
ಸ್ವೇದಂ ಗದ್ಗದಮುಣ್ಮುತ್ತಿರೆ ಇರೆ
ಸಾದರದಿಂ ಪುಳಕದಿ ನೆಗೆಯುತ್ತಿರೆ
ಆನಂದಜಲಂ ಕೋಡಿಗೊಳುತ್ತಿರೆ
ನಾನಾ ನೂತನ ರಸ ಒಸರುತ್ತಿರೆ
ಮೃಡ ಮೂರ್ತಿಯ ವರ್ಣನೆಯಂ ತೊಡಗಲ್

ಜಡೆಮುಡಿಗೊಂದೇ ಪದ್ಯಮನೆಸಗಲ್
ಪುರವೇಳ್ದುದು ಪುರವೇಳ್ದುದು ಶಿವ ಶಿವ
ನರಲೋಕಕ್ಕದ್ಭುತವೆನೆ ಶಿವ ಶಿವ
ಪದ್ಯಕ್ಕಂ ನೂರುಂ ಯೋಜನವಂ
ಚೋದ್ಯಂ ನೆಗೆವುತ್ತಿರ್ದುದು ನಭವಂ
ಪುರವಡರುತ್ತಿರೆ ಪುರಜನರರಿಯರು
ಧರಣಿಯ ಜನ ಬೆರಗಾಗುತ್ತಿರ್ದರು
ಪುರವಳಯಂ ಹರಿಗೋಲಂತಿರ್ದುದು
ಪುರಜನವೇರಿದ ಜನದಂತಿರ್ದುದು
ಗಗನಂ ಭವವಾರಿಧಿಯಂತಿರ್ದುದು



ಬಗೆ ಮಿಗೆ ಭರದಿಂ ಪಡರುತ್ತಿರ್ದುದು
ದಾಂಟಿಸುವುದ್ಭಟನಂಬಿಗನಂತಿರೆ
ದಾಂಟ ನೆಗೆವುತ್ತಿರ್ದುದು ಬಣ್ಣಿಸುತಿರೆ
ಜಡೆಯಂ ಶ್ರೀಚರಣಂಬರೆ ಬಣ್ಣಿಸೆ
ತಡೆಯದೆ ನೂರುಂ ಪದ್ಯಂ ರಚಯಿಸೆ

ಕಾಮಾರಿಯ ಸದ್ಭಕ್ತನನರಿಯದೆ
ಕಾಮಿನಿ ನುಡಿದಳ್ಪೋಪುದನರಿಯದೆ
ಆದುದು ಮಧ್ಯಾಹ್ನವಿದೇನುದ್ಭಟ
ಪೋದುದು ನಿನ್ನಯ ಬಾಷೆಯದುಕ್ಕಟ
ಎನೆ ನಸುನಗುತುಂ ಮೇಲುಂ ನೋಡೆನೆ
ದಿನಕರನೇರಿದ ಪೊಳ್ತಂ ನೋಡೆನೆ
ನೋಡಿದಳಂ ತಾ ಮಾನಿನಿ ಮೇಲಂ
ನೋಡಲ್ರಜತಾಚಲದ ವಿಶಾಲಂ
ಶಶಿರವಿಕೋಟಿಗಳಂ ಭಂಗಿಸುತಿರೆ
ಪೊಸ ಪೊಸ ಬೆಳಗಿಂ ಘುಳುಘುಳಿಸುತ್ತಿರೆ
ನೋಡಲ್ಕಮ್ಮದೆ ಕಣ್ಣಂ ಮುಚ್ಚುತೆ
ನೋಡಿದ ಭಯದಿಂ ಮನದೊಳ್ಬೆರ್ಚುತೆ
ಉದ್ಭಟದೇವಂಗಂ ಮೈಯ್ಯಿಕ್ಕುತೆ
ಅದ್ಭುತ ರಸದೊಳಗಾಳುತ್ತೇಳುತೆ
ಇರೆ ನೆಗೆದುದು ಪುರವಡರಿತು ನಭವಂ
ಸುರಗಿರಿಯಂ ಮೀರಿತ್ತತಿ ವಿಭವಂ

ಕೈಲಾಸಪುರ ದ್ವಾರದ ಮುಂದಂ
ಶೈಲಜೆಯರಸನ ಭವನದ ಮುಂದಂ
ನಿಂದಿರಲುದ್ಭಟದೇವಂ ಬಂದಂ
ಇಂದುಧರನ ಆಜ್ಞೆಗೆ ನಡೆತಂದಂ
ನಡೆತರುತಂ ಕಾರುಣ್ಯಾಂಬೋಧಿಗೆ
ಕಡು ಸಲಿಗೆಯ ಶರಣರ ಸಂತೋಷಿಗೆ
ನೆನೆವರ ಮನದಾನಂದ ಪ್ರತತಿಗೆ
ಅನುನಯದಿಂ ಬಣ್ಣಿಸುವರ ಸುಮತಿಗೆ

ಬ್ರಹ್ಮಾಂಡ ಪ್ರಕರಾವೃತ ಕೀರ್ತಿಗೆ
ಬ್ರಹ್ಮಂ ಪೆಸರಿಡಬಾರದ ಮೂರ್ತಿಗೆ
ನೆನೆಯದ ಮುನ್ನಂ ಕರುಣಿಪ ದಾನಿಗೆ
ನೆನೆವರನಘದಿಂದೆತ್ತುವ ಮಾನಿಗೆ
ಮೆಯ್ಯಿಕ್ಕಿದನುದ್ಭಟದೇವಂ ಸಲೆ
ಮೆಯೊಳ್ಪುಳಕಾವಳಿ ಕೀಲಿಸಿ ನಿಲೆ
ಕಂಡಾಗಳೆ ಶಂಕರನೊಲವಿಂದಂ
ಕಂಡಾ ನಂದೀಶ್ವರ ಧರೆಯಿಂದಂ
ಪುರ ಸಹಿತಂ ನಡೆತಂದವರುಂಟೇ
ತರುಣಿಯ ನುಡಿಯಂ ಸಲಿಸಿದರುಂಟೇ
ಹರಲೀಲೆಯ ನೆರೆ ತಾಳ್ದವರುಂಟೇ
ಧರೆ ಚಿತ್ರವೆನಲ್ಬಂದವರುಂಟೇ
ಎಂದುದ್ಭಟದೇವನನೆತ್ತುತ್ತಂ
ಕುಂದದ ಕೃಪೆಯಿಂ ಬಿಗಿದಪ್ಪುತ್ತಂ
ಗಣ ಪದವಿಯನಾನಂದದಲೀವುತೆ
ಗಣ ಸಂತತಿಗತಿಶಯದಿಂದೀವುತೆ
ಪುರಮಂ ಶಿವಲೋಕದೊಳೊಲ್ದಿರಿಸುತೆ
ಪುರಜನಕೆಲ್ಲಂ ಕರುಣವನೀವುತ
ಶಶಿರವಿ ಶಿಖಿಲೋಚನನೊಪ್ಪಿರ್ದಂ
ಪಶುಪತಿ ಗಿರಿಜಾಪತಿಯೊಪ್ಪಿರ್ದಂ
ನೀಲಗಳ ನಿರ್ಮಳನೊಪ್ಪಿರ್ದಂ
ಕಾಲಹರಂ ಪುರಹರನೊಪ್ಪಿರ್ದಂ
ಭೀಮಂ ಭರ್ಗಂ ಭವನೊಪ್ಪಿರ್ದಂ
ಸೋಮಂ ಶಾಂತಂ ಶಿವನೊಪ್ಪಿರ್ದಂ
ಹಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

**ಕಂದ**॥ ದೇವರ ದೇವಂ ದೇವರ
ಜೀವಂ ದಯೆಯಿಂದಲೆನಗೆ ಚಂದ್ರಾಭರಣಂ
ಭಾವಿಸಿ ಭಕ್ತಿಯನುದ್ಭಟ
ದೇವನ ಸುತನೆಂದು ಕುಡುಗೆ ಹಂಪೆಯರಾಯಂ॥

---

# ಹಲಾಯುಧದೇವರ ರಗಳೆ.

ಕಂದ॥ ಶ್ರೀ ವಿಶ್ವೇಶ್ವರನಭವಂ
ದೇವ ಕುಲಾರ್ಕಂ ಪುರಾರಿಮೆರದಂ ಶಿವಸ
ದ್ಭಾವಿ ಎನಿಪ್ಪ ಹಲಾಯುಧ
ದೇವನನೊಲವಿಂ ಹಂಪೆಯ ವಿರೂಪಾಕ್ಷಂ॥

## ರಗಳೆ.

ಉತ್ತರದಿಶಾಭಾಗದೊಳ್ಕೀರ್ತಿಯಂ ಪಡೆದು
ಒತ್ತರಿಪ ಮಾಯೆಯಂ ಸಚ್ಚರಿತದಿಂ ಗೆಲಿದು
ಇರ್ಪುದು ನವಗ್ರಾಮವೆಂಬ ಪುರವಂತಲ್ಲಿ
ಇರ್ಪನೋರ್ವಂ ಶಿವನ ಭಕ್ತನೊಲವಿಂದಲ್ಲಿ
ತನ್ನ ನಾಮಂ ಹಲಾಯುಧನೆಂಬುದಾಗಿರಲ್
ತನ್ನ ಕೆಯ್ಯಾರ್ಚನೆ ಶಿವಂಗೆ ಸವಿಯಾಗಿರಲ್
ನಡೆತಂದು ಶಿವನಿಳಯಮಂ ಪೊಕ್ಕು ಕೈಮುಗಿದು
ಮೃಡ ಮೂರ್ತಿ ಘನಕೀರ್ತಿ ಎನುತ ಕೆಯ್ಯಂ ಮುಗಿದು
ತೆಗೆವಪ್ಪಿ ಮುಂಡಾಡಿ ಮುದ್ದಾಡಿ ಮತ್ತಪ್ಪಿ
ನೆಗೆವ ಪುಳಕಂಗಳಂಗದೆ ಕೀಲಿಸುತ್ತಪ್ಪಿ
ಅಪ್ಪಳಿಯದಲ್ಲಿ ಮಜ್ಜನಕೆರೆದು ತಳ್ಕಿರಿದು
ತಪ್ಪಿ ತಡಬಡಿಸುತುಂ ಪೊಸಪೂಜೆಯಂ ಮೆರೆದು
ಕುಣಿಯುತ್ತೆ ಮಣಿಯುತ್ತೆ ಧೂಪಮಂ ನಲಿದಿತ್ತು
ತಣಿಯುತ್ತೆ ತೂಗುತ್ತೆಯಾರತಿಗಳಂ ಪೊತ್ತು
ಆರೋಗಣೆಯನಿತ್ತು ವೀಳೆಯಂಗಳನಿತ್ತು
ತಾರಾದ್ರಿಯರಸಂಗೆ ಸಕಳ ಸುಖಮುಮನಿತ್ತು
ಪೊಸಗಬ್ಬಮಂ ಗದ್ಯಪದ್ಯಂಗಳಂ ಪೇಳ್ದು
ಅಸಮಾಕ್ಷನೊಳ್ಸಂದ ಕಿಂಕರತೆಯಂ ತಾಳ್ದು
ಇರ್ಪನೊಪ್ಪುತ್ತಿರೆ ಹಲಾಯುಧಂ ಹರುಷದಿಂ
ಸರ್ಪಭೂಷಣನ ಸದ್ಭಕ್ತಿ ಸಂಸ್ಪರ್ಶದಿಂ

ಇರಲಾ ನವಗ್ರಾಮದ ಪ್ರಭುಗಳೆಲ್ಲರುಂ
ಹರುಷದಿಂ ಕೊಂಡಾಡುತಿರ್ಪರೊಲ್ದೆಲ್ಲರುಂ
ಆ ನವಗ್ರಾಮಕ್ಕೆ ತಾನೆ ಸಜ್ಜನನಾಗಿ
ಏನೆಂಬೆ ಶಂಕರಾರ್ಚನೆಗೆ ಸಿರಿಕರನಾಗಿ
ಎಲ್ಲರುಂ ಸದ್ಭಕ್ತರಂ ಯುಕ್ತರಂ ಮಾಡಿ
ಎಲ್ಲರುಂ ಸತತ ಪೂಜಾಸಕ್ತಿಯೊಳ್ಮಾಡಿ
ಭಾಳಕ್ಕೆ ಭೂತಿ ನಾಲಿಗೆಗೆ ಪಂಚಾಕ್ಷರಂ
ಗಳಭುಜಾದ್ಯಂಗಕೆ ರುದ್ರಾಕ್ಷಿ ವಿಸ್ತರಂ
ಕಿವಿಗೆ ಶಿವಕೀರ್ತಿ ಕಣ್ಗಳಿಗಚ್ಚ ಸುಖಜಳಂ
ತವಕಿಸುವ ಭಾವಕ್ಕೆ ಶಿವಮೂರ್ತಿಯುಜ್ವಳಂ
ಕೆಯ್ಗಳ್ಗೆ ಸುಖವೊಸರ್ವ ಸಂಪದದ ಕಂಪನಂ
ಮೆಯ್ಗೆ ಸಳನಳಿಸಿ ಬಳೆ ಬಳೆವ ಪುಳಕದ ಬನಂ
ತೊಡಿಗೆಯಾಗಿರೆ ಮಾಡಿದಂ ನವಗ್ರಾಮದೊಳ್
ಮೃಡನಲ್ಲದರಿಯದ ಹಲಾಯುಧಂ ಪ್ರೇಮದೊಳ್
ಇಂತು ನೋಡುತ್ತವಾಡುತ್ತ ಹಾಡುತ್ತಮಿರೆ
ಸಂತತಂ ಶಿವಭಕ್ತಿ ಪರ್ಬಿ ಪಲ್ಲವಿಸುತಿರೆ

ಒಂದು ದಿವಸಂ ನವಗ್ರಾಮದ ಪ್ರಭುಕುಳಂ
ಒಂದೂರ್ಗೆ ಬಂದೆಲ್ಲರುಂ ಭಕ್ತ ಸಂಕುಳಂ
ಪರಮ ಭಕ್ತಂ ಹಲಾಯುಧಗಣವರನ ಕೂಡೆ
ನೆರೆದು ಶಿವಗೋಷ್ಠಿಯಿಂದಾನಂದವಳ್ಕಾಡೆ
ಇರೆ ಮಾತುಮಾತಿಂಗೆ ಗೋಷ್ಠಿ ಮೀರುತ್ತಿರಲ್
ಹರಭಕ್ತರೊಳಧಿಕರ ಪ್ರಸಂಗಂ ಬರಲ್
ಓಹಿಲಯ್ಯಂ ಶರೀರಂ ಬೆರಸು ಪೋಗಲ್ಕೆ
ಸಾಹಸದೆ ನಸುನಗುತ ಪುರಸಹಿತ ಪೋಗಲ್ಕೆ
ಉದ್ಭಟಂಗಲ್ಲದಿನ್ನುಳಿದರ್ಗೆ ತೀರ್ವುದೇ
ಅದ್ಭುತ ರಸಂ ಮಿಕ್ಕ ಭಕ್ತರ್ಗೆ ಸಾರ್ವುದೇ

ಎನೆ ಹಲಾಯುಧದೇವನುಬ್ಬಸಂಗೊಂಡಲ್ಲಿ
ಮನದೊಳಗೆ ಶರಣನತಿ ಹುರುಡಿಸುತ್ತಂತಲ್ಲಿ



ಶಿವನೊಲ್ದೊಡರಿದೇನು ಪುರವನೊಯ್ವುದು ಪಿಂದೆ
ಭವನ ಕಾರುಣ್ಯ ಉಳ್ಳೊಡೆ ತಾನಿವೆಲ್ಲರಿದೆ

ಎಂದೊಡೆ ಹಲಾಯುಧಂಗೆಂದರಾ ಗೌಡಗಳ್
ಸಂದಣಿಪ ಕಟಿಕೆಗಳನಾಡಿದಪ್ರಭುವುಗಳ್
ಉದ್ಭಟನನಾಳಿಗೊಳ್ವಂ ಹಲಾಯುಧ ನಿನಗೆ
ಸದ್ಭಕ್ತನಪ್ಪ ನೆರೆ ಕೊರತೆಯುಂಟೇ ನಿನಗೆ
ಇಂತಾಳಿಗೊಳ್ವವರ್ಥನವಲ್ಲದಿರ್ಪರೇ
ಕಂತುಮದಹರನಲ್ಲಿಗೋರ್ವನೇ ಪೋಪರೇ
ಎಮ್ಮೀ ನವಗ್ರಾಮಮುಂ ಒಯ್ಯದಿರ್ಪರೇ
ಎಮ್ಮೆಲ್ಲರಂ ಶಿವನ ಮುಂದಿರಿಸದಿರ್ಪರೇ

ಎಂದ ಕಟಕಿಗಳಂ ಹಲಾಯುಧಂ ಕೇಳುತಂ
ನಿಂದು ಬಾಷೆಗಳನಿತ್ತಂ ಸಭೆಯೊಳುಬ್ಬುತಂ
ನಿಮ್ಮ ನುಡಿಯಲ್ಲ ಶಿವನ ಪ್ರೇರಣೆ ಎಂದೆನುತೆ
ನೀವೆಂದ ಮಾಳ್ಕೆಯಿಂ ಕೊಂಡು ಪೋದಪೆನೆನುತೆ
ಒಂದು ಪುರಮಂ ಕೊಂಡು ಪೋದನುದ್ಭಟನಲ್ಲಿ
ಸಂದಿಸಿ ನವಗ್ರಾಮ ಸಹಿತವೆಯ್ದುವೆನಿಲ್ಲಿ
ಉದ್ಭಟಂಗುಳ್ಳ ಚಂದ್ರಾಭರಣವೆನಗಿಲ್ಲ
ಅದ್ಭುತಂ ಮಾಳ್ಪೆನೀ ಕಟಕಿಗಳೆಮಗೆ ಸಲ್ಲ
ನಾಳೆ ಕೊಂಡೊಯ್ವೆಪೆಂ ಹೊಯ್ವಂಗುರವನೆಂದು
ಶೂಲಿಯಣುಗಂ ಹೊಯ್ಸಿದಂ ಧರೆ ನಡುಗಲಂದು
ಸಡಿಫಡ ನರೋರಗರೊಳಡ್ಡ ಜರ್ವನಾವ
ನಡೆಗೊಂಡು ಭಕ್ತಿಕಳೆಗಿದಿರಪ್ಪನಿನ್ನಾವ
ಎಂದು ಘರ್ಜಿಸಿ ಗಜರಿ ಶಿವರಾತ್ರೆಯಂ ಮಾಡಿ
ಮುಂದ ಬೆಳಗಾಗೆ ಭಸಿತೋದ್ಧೂಳನಂ ಮಾಡಿ
ನಡೆವೆಂ ನವಗ್ರಾಮ ಸಹಿತಾಗಿ ನೋಡೆನುತೆ
ಮೃಡನಾಲಯಕ್ಕೆ ಬಂದಂ ಸಾರು ಸಾರೆನುತೆ

ಬಂದು ಶಿವನಂ ನೋಡಿ ಶಂಕರಾ ಶಶಿಧರಾ
ಇಂದೆನಗೆ ಕರುಣಿಸುದು ಗಿರಿಜಾ ಮನೋಹರಾ

ದೇವ ನೀಂ ಕರುಣಿಸಿದೊಡೆನಗೆ ತೀರಮುಮುಂಟೆ
ದೇವ ನೀಂ ಕೃಪೆ ಮಾಡಲಾವುದೊಂದರಿದುಂಟೆ
ಕರುಣಿಸಲಿರುಂಪೆಯದು ಬ್ರಹ್ಮನಾಗದೆ ದೇವ
ಕರುಣಿಸಲ್ಕಸಕನುಂ ವಿಷ್ಣುವಾಗದೆ ದೇವ
ಭಕ್ತರಭಿಮಾನವೇ ಭಕ್ತರಾಧೀನವೇ
ಭಕ್ತರನುಕೂಲನೇ ಭಕ್ತರ ನಿಧಾನವೇ
ಜಯ ಸುರನದೀತರಂಗಾವೃತಜಟಾಭಾರ
ಜಯ ಸುಧಾಕರ ಕಳಾಧರ ಮಂಗಳಾಕಾರ
ಜಯ ಲೋಚನತ್ರಯ ವಿರಾಜಿತ ಮಹಾ ಪ್ರಭುವೆ
ಜಯ ಸರ್ಪರಾಜಕುಂಡಲಮಂಡಿತ ಪ್ರಭುವೆ
ಜಯ ವಿಮಳಪಂಚಮುಖರಂಜಿತಸದಾಶಿವನೆ
ಜಯ ನೀಲಕಂಠ ಭವಹರ ಭವಾನೀ ಧವನೆ
ಜಯ ದಶಭುಜಾದಂಡ ಜಯ ಗಜಾಜಿನಗಾತ್ರ
ಜಯ ಪುಂಡರೀಕ ಚರ್ಮಾವರಣಕಟಿಸೂತ್ರ
ಜಯ ಕಮಳನೇತ್ರಪೂಜಿತಪಾದಸರಸಿರುಹ
ಜಯ ಸಕಳಭಕ್ತಕಾಮಿತಕಲ್ಪಭೂಮಿರುಹ
ಜಯ ನಿತ್ಯ ಜಯ ಸತ್ಯ ಜಯ ಭರ್ಗ ಜಯ ಭೀಮ
ಜಯ ರುದ್ರ ಜಯ ಭದ್ರ ಜಯ ರಾಮ ಜಯ ಸೋಮ

ಎಂದು ಪೊಗಳ್ವನಿತಕ್ಕೆ ಪುರವೇಳ್ದುವಮ್ಮಮ್ಮ
ಚಂದದ ನವಗ್ರಾಮವಾಗಸದೊಳಮ್ಮಮ್ಮ
ನೆಗೆಯೆ ಪೂಮಳೆಗರೆಯೆ ಧರಾತಳದೊಳಗೆ
ಜಗವರಿಯೆ ದುಂದುಭಿನಾದಂಗಳ್ಮೊಳಮೊಳಗೆ
ಗಗನದೊಳ್ಪೋಗುತಿರೆ ಲೋಕವೆಲ್ಲಂ ಕಂಡು
ಬಗೆಗಗೋಚರವಾಯ್ತೆನಲ್ ಕೌತುಕಂಗೊಂಡು
ಸುಖ ಗೋಷ್ಠಿ[illegible]ತ್ತ ಮಾತಿನ ಮಾತು ತಾನೆತ್ತ
ಸಿಖಿಳವರಿಯಲ್ ನವಗ್ರಾಮವೇರುವುದೆತ್ತ
ಒಂದು ಪುರ ಒಂದುದ್ಘಟನ ಕೂಡೆ ನೆರೆ ಪೋಯ್ತು
ಒಂದೆಂದೊಡೊಂಬತ್ತೆನಿಪ್ಪದಿವರಿಂದಾಯ್ತು
ಆಹಾ ಹಲಾಯುಧನ ಭಾಷೆ ಕೇಳ್ವರ್ಗಾಸೆ



ಆಹಾ ಹಲಾಯುಧನ ಭಾಷೆ ಭಕ್ತಿಗೆ ಲೇಸೆ
ಎಂದಿಂತು ಜನವೆಲ್ಲ ತಲೆದೂಗಿ ಕೊಂಡಾಡೆ

ಬಂದೇರಿದವು ನವಗ್ರಾಮವಮರರ್ನೋಡೆ
ಇಂದ್ರಾದಿದಿಕ್ಪಾಲ ಪುರವೆಲ್ಲಮಂ ದಾಂಟಿ
ಚಂದ್ರ ಮಾರ್ತಾಂಡ ತಾರಾಲೋಕಮಂ ದಾಂಟಿ
ಸತ್ಯಲೋಕಕ್ಕೆ ನೆಗೆದುವು ನವಗ್ರಾಮವಿದು
ಸತ್ಯಶರಣನ ಹಲಾಯುಧನ ಸಾಮರ್ಥ್ಯವಿದು
ದೇವಲೋಕಕ್ಕೆ ಪೊಸತಾಗುತಿರೆ ನಡೆತಂದು
ದೇವ ನಂದೀಶ್ವರನ ಬಾಗಿಲ್ವರಂ ಬಂದು
ನಿಂದಿರಲ್ ಭರದಿಂದಲಿಳಿದಂ ಹಲಾಯುಧಂ

ಇಂದುಮೌಳಿಯನೀಕ್ಷಿಸುತ್ತೆ ನಾ ನಾ ವಿಧಂ
ಪೊಗಳುತುಂ ಪೊಂಗುತುಂ ಮೆಯ್ಯಿಕ್ಕಿ ಪಟ್ಟಿರಲ್
ಬಗೆ ಸದಾಶಿವನ ಮೆಲ್ಲಡಿಗಳಂ ಮುಟ್ಟಿರಲ್
ಕಂಡು ಶಂಕರನಲ್ಲಿ ಗಣಕುಲಕೆ ತೋರುತುಂ
ತಂಡತಂಡದ ಮುಕುಕ ದಿಂಡೆಗೊಳಲುರ್ಬುತುಂ
ನೋಡಯ್ಯ ನಂದೀಶ ಇಂತಪ್ಪ ಭಕ್ತನಂ
ನೋಡೇಕನಿಷ್ಠೆಗೂಡಿದ ಭಕ್ತಿಯುಕ್ತನಂ
ಮಾತುಮಾತಿಂಗಿಲ್ಲಿಗೆಯ್ದು ಬಂದವರುಂಟೆ
ಜಾತಿಸೂತಕವಳಿದು ನೀತಿಗೆಟ್ಟವರುಂಟೆ
ಒಂಬತ್ತು ಪುರವರ್ಗ ಸಹಿತ ಬಂದವರುಂಟೆ
ಅಂಬರದ ಬಟ್ಟೆಯೊಳ್ ನಂಬಿ ಬಂದವರುಂಟೆ
ಎನ್ನ ಭಕ್ತರ್ಗೆ ಮೂದಲೆ ಮಾತು ಸೈರಿಸುದೆ
ಎನ್ನ ಭಕ್ತರ್ಗೆ ಕಪಟಂಗಳುಂ ಸೈರಿಸುದೆ
ಎನ್ನ ಭಕ್ತರ್ಗೆ ಹಿಂದೊಂದು ಮುಂದೊಂದುಂಟೆ
ಎನ್ನ ಭಕ್ತರ್ಗೆ ಮುಸಿಗಳ ಪಸರವೇನುಂಟೆ
ನವವಿಧಂ ನವಪೂಜೆ ನವನವ ಪ್ರೇಮವಿವೆ
ನವರಸಾನ್ನವು ಭಕ್ತಿ ನವನವ ಗ್ರಾಮವಿವೆ
ಎನುತುಂ ಹಲಾಯುಧನನೆತ್ತಿ ತಳ್ಕೈಸುತುಂ

ಮನವಾರೆ ಗಣಪದವನೊಪ್ಪದಿಂದೀಯುತುಂ
ಆ ನವಗ್ರಾಮಮಂ ರುದ್ರಲೋಕದೊಳಿರಿಸಿ
ನಾನಾ ಸುಖಂಗಳಂ ಚಿತ್ತದೊಳಗಾದರಿಸಿ
ದುರಿತಹರನಂತಕಹರಂ ಪಂಚಶರಹರಂ
ಪುರಹರಂ ಜನನಹರನಗಜಾಮನೋಹರಂ
ಶಶಿಧರಂ ಫಣಿಧರಂ ಸುರುಚಿರ ಜಟಾಧರಂ
ವಿಷಧರಂ ಗಜಚರ್ಮಧರನತುಳಧರಂ
ಸುರ ಶಿರೋಮಾಲಾಧರಂ ದಕ್ಷಮುಖಹರಂ
ಸರಸಿಜಾಸನ ಶಿರಃಕಮಳಮಂಡಿತಕರಂ
ಸದಮಳಂ ಸುಖಮಯಂ ಸಕಳಗುಣನೊಪ್ಪಿದಂ
ಮದನಾರಿ ಹಂಪೆಯ ವಿರೂಪಾಕ್ಷನೊಪ್ಪಿದಂ ॥

**ಕಂದ॥** ಶ್ರೀವಾಣೀಪತಿಗಳ ಗುರು
ದೇವಂ ದಯೆಯಿಂದಲೆನಗೆ ಭಕ್ತಿಯನೊಲವಿಂ
ದೀವುತ್ತಿರ್ಕೆ ಹಲಾಯುಧ
ದೇವನ ಸುತನೆಂದು ಹಂಪೆಯ ವಿರೂಪಾಕ್ಷಂ ॥

## ಸಾಮವೇದಿಗಳ ಮಹಾತ್ಮೆ.

**ಕಂದ॥** ಧರಣೀ ತಳದೊಳ್ಮೆರೆದಂ ।
ಸರಾಗದಿಂ ಸಾಮವೇದಿಗಳ ನಹಿಕಟಕಂ ॥
ಕರುಣಾಕರನಪ್ರತಿಮಂ ।
ಪುರಮಥನಂ ದೇವ ಹಂಪೆಯ ವಿರೂಪಾಕ್ಷಂ ॥

### ರಗಳೆ.

ಉತ್ತರದಿಶಾಭಾಗದೊಳಗೆ ಭಾಸುರವೆನಿಸಿ
ಛತ್ತೀಸಪುರವಿರ್ಪುದೀ ಧರೆಗೆ ತೊಡವೆನಿಸಿ
ಆ ಪುರಂಗಳೊಳೊಂದು ಪುರದೊಳಿರ್ಪಂ ನೋಡ
ಪಾಪರಹಿತಂ ಸಾಮವೇದಿ ಎಂಬಂ ನೋಡ
ಸಾಮವೇದಂ ಒಂದು ರೂಪಾಗಿ ನೆಲಸಿರ್ಪ
ಭೂಮಿಯೊಳಗುಳ್ಳ ಶಾಸ್ತ್ರಂ ಜಿಹ್ವೆಯೊಳಗಿರ್ಪ
ಸಕಲ ಕಾವ್ಯಂ ನಾಟಕಂ ತನ್ನ ಮುಖವಪ್ಪ
ಸಕಲ ವೇದಾಂತ ಸಿದ್ಧಾಂತದಿಂದ ದೃಢವಪ್ಪ
ತರ್ಕ ತಂತ್ರಂ ವ್ಯಾಕರಣ ಕಳಾವಿದನಪ್ಪ
ಮಾರ್ಕೊಳಲ್ಬಾರದ ಮಹಾವಾಗ್ಮಿ ಎನಿಸಿಪ್ಪ
ಎಂತಪ್ಪ ಪಿರಿಯರುಂ ಬಂದು ಮೆಯ್ಯಿಕ್ಕುವರ್
ಎಂತಪ್ಪ ವಿದ್ವಾಂಸರುಂ ತನಗೆ ತೆಕ್ಕುವರ್
ವೇದಮಯಮಾಚರಣೆ ನುಡಿ ಎಲ್ಲ ಶಾಸ್ತ್ರಮಯ
ವಾದುದೇನೆಂಬೆನಾತನ ಮನಂ ಕಾಂತಿಮಯ
ಎರಗನಾರ್ಗಂ ನೋಡ ತನಗೆರಗುವದು ಜಗಂ
ನೆರೆ ಹೊಗಳ ಹೊಗಳುವುದು ತನ್ನ ಧರೆ ಸೋಜಿಗಂ
ಶಿಷ್ಯರಾ ಮೂರು ಸಾಸಿರದ ಮೇಲೈನೂರು
ಪೋಷ್ಯ ವರ್ಗಂ ಧರೆಯ ಜನವೆಲ್ಲ ಸಲೆ ನಾರು
ವಾಮ ಹಸ್ತದೊಳಲ್ಲದಿಕ್ಕನಕ್ಷತೆಗಳಂ
ವಾಮೇತರದೊಳಗ್ನಿ ನೆಲಸಿರ್ಪುದಗ್ಗಳಂ

ಇಂತಪ್ಪ ಪುಣ್ಯಕೀರ್ತಿಯನೊಪ್ಪದಿಂ ಸಾರ್ದು
ಸಂತತಂ ಭಕ್ತೀಶಪುರದೊಳಗೆ ಸುಖಮಿರ್ದು

ಒಂದು ದಿವಸಂ ಸಾಮವೇದಿಗಳ್ ಶಿಷ್ಯರುಂ
ಮುಂದು ಜಾವದೊಳೆದ್ದು ಕೂಡಿಕೊಂಡೆಲ್ಲರುಂ
ಅರಣವನೋದಲಾರಣ್ಯಕ್ಕೆ ನಡೆತಂದು
ಧಾರಣೆಯ ವಿದ್ವಾಂಸರೊಡಗೂಡಿ ಬರುತಂದು
ಅಶ್ವತ್ಥ ಮೂಲವೇದಿಕೆಯಲ್ಲಿ ಕುಳ್ಳಿರ್ದು
ವಿಶ್ವ ಜನವಾರುವರಿಯದ ಕಾನನದೊಳಿರ್ದು
ಋಚವರ್ಧ ಋಚವೆಂಬವಂ ನಲಿದು ಪೇಳುತುಂ
ರುಚಿಯುಸಲ್ವಾದವರೆ ಪಾದವಂ ಪೇಳುತುಂ
ಪದಪಾಳಿ ವರ್ಗ ಕ್ರಮಂಗಳಂ ತಿಳಿಪುತುಂ
ಪದುಳದಿಂದಂ ಇರ್ದು ಹಸನಿದೆಂದರಿಪುತುಂ
ಬೆರಲಿಂದುದಾತ್ತಾನುದಾತ್ತಂಗಳಂ ತೋರಿ
ಸ್ವರಿತ ಪ್ರಚಯ ಮುಖ ಸ್ವರ ಭೇದಮಂ ತೋರಿ
ಛಂದಸ್ಸು ಋಷಿ ದೇವತೆಗಳೆಂಬಿವಂ ಪೇಳ್ದು
ನಿಂದ ಮಧ್ಯಾಹ್ನ ಪರಿಯಂತರಂ ಮಿಗೆ ಪೇಳ್ದು
ನಡೆತಂದರಾ ಸಾಮವೇದಿಗಳ್ನಲವಿಂದೆ
ನಡೆತಂದರಾಕಾಶಗಮನದೊಳ್ನಲವಿಂದೆ
ಕೆಳಗೆ ಶಿಷ್ಯಪ್ರತತಿ ಕೈ ಮುಗಿದು ಬರುತಮಿರೆ
ಇಳೆಗೆ ಪೊಸತೆನೆ ಸೋಲೆ ಭೋವತಿಗಳಾರುತಿರೆ
ತಳಿರ್ಗಾಸೆ ಬೆಳಬೆಳಗೆ ಸುಲಿಪಲ್ ತೋಱತೊಳಗೆ
ನೞನಳಿಪ ಮೆಯ್ವೆಳಗು ಬನವೆಲ್ಲಮಂ ಬೆಳಗೆ
ನಡೆತಂದರಿಟ್ಟ ಮಟ್ಟೆಗಳಿಂ ಪವಿತ್ರದಿಂ
ನಡೆತಂದರಿಕ್ಕಿರ್ದ ಯಜ್ಞೋಪವೀತದಿಂ
ಬರುತಿರ್ದರಾ ಸಾಮವೇದಿಗಳ್ ಗಗನದೊಳ್
ಬರುತಿರ್ದರಾ ಶಿಷ್ಯರೆಲ್ಲ ಭೂವಳಯದೊಳ್

ಇತ್ತಲಾ ಭಕ್ತೀಶಪುರದಿಂದೆ ನಡೆತಂದು
ಉತ್ತಮ ಶಿವಾರ್ಚಕರ್ಶ್ವಪಚ ದೇವರ್ಬಂದು



ಭವಿಗಳಾರುಂ ಸುಳಿಯಬಾರದಟ್ಟಡವಿಯೊಳ್
ಭವನನರ್ಚಿಸಲೆಂದು ಸರ್ವ ಸುಖವೃತ್ತಿಯೊಳ್
ಕಾಡ ಮೊಲ್ಲೆಯ ಮಲ್ಲಿಗೆಯ ಹೊದರ ತಳದೊಳಗೆ
ಕೂಡೆ ತಣ್ಪಿನ ಚಂದ್ರಕಾಂತ ಭೂಮಿಕೆಯೊಳಗೆ
ಕದಳೀದಳಂಗಳಿಂ ಕಮಲಪತ್ರಂಗಳಿಂ
ಮುದದಿಂದಶೋಕೆಪಾವುಗಳ ಕೆಂದಳಿರ್ಗಳಿಂ
ನಯವಪ್ಪ ಮೃದುವಪ್ಪ ಸಿಂಹಾಸನವನಿಕ್ಕಿ
ಭಯಭಕ್ತಿಯಿಂ ಹಿಗ್ಗುತುಂ ಪ್ರೇಮರಸ ಉಕ್ಕಿ
ನದಿಯುಗ್ಗವಣೆಗಳಂ ಕುಣಿಕುಣಿದು ತಂದಿಳಿಪಿ
ಪದುಳದಿಂ ಬರ್ದುಕಿದೆಂ ಬರ್ದುಕಿದೆನೆನುತ್ತಿಳುಪಿ
ಸಂಪಿಗೆಯ ಮಲ್ಲಿಗೆಯ ಮೊಲ್ಲೆಯಚ್ಚಲರ್ಗಳಂ
ಕಂಪಿಸುತೆ ಪುಳುಕಿಸುತೆ ಪೊಚ್ಚ ಪೊಸಪೂಗಳಂ
ಕೊಂಡು ಬಂದೆನ್ನಯ್ಯ ಎನ್ನರಸ ಬಾರೆಂದು
ಖಂಡೇಂದು ಮೌಳಿ ಫಣಿಕುಂಡಲನೆ ಬಾರೆಂದು
ಭಕ್ತಜನ ಬಾಂಧವನೆ ಬಾರಯ್ಯಾ ಬಾರೆಂದು
ಮುಕ್ತಿಪ್ರದಾಯಕನೆ ಬಾರಯ್ಯಾ ಬಾರೆಂದು
ಸೆಜ್ಜೆಯಿಂ ಶಿವಲಿಂಗಮಂ ತೆಗೆದು ಬೋಳೈಸಿ
ಸಜ್ಜನ ಸ್ನೇಹಮಂ ಮನದೊಳಗೆ ಮೇಳೈಸಿ
ತಳಿರ ಸಿಂಹಾಸನದ ಮೇಲೆ ಬಿಜಯಂಗೈಸಿ
ದಳದಳನೆ ಸುರಿವಶ್ರುಧಾರೆಯಿಂ ಸಂತಯಿಸಿ
ಇರವಂತಿಯೊಂದರಲನುತ್ತಮಾಂಗದೊಳಿರಿಸಿ
ಹರುಷದಿಂ ನಲಿಯುತ್ತೆ ನೆರೆ ನೋಡುತಾದರಿಸಿ
ಮುಂಡಾಡಿ ಮುದ್ದಾಡಿ ಕಣ್ಣದೊಱಗೊತ್ತುತುಂ
ಕೊಂಡಾಡಿ ಕೊನೆದಾಡಿಯುರದೊಱಚ್ಚೊತ್ತುತುಂ
ಮತ್ತೆ ಬಿಜಯಂಗೆಯ್ಸಿ ನೋಡುತುಂ ತೂಗಾಡಿ
ಬಿತ್ತರಿಪ ಲಲ್ಲೆಯಿಂ ನೇಹದೊಳಗೋಲಾಡಿ
ಕೈ ಚಪ್ಪಳಿಕ್ಕುತುಂ ಬಿಕ್ಕುತುಂ ಬೀಗುತುಂ
ವೈಚಿತ್ರ ರಸದೊಳಗೆ ತೇಗಿ ತೂಗಾಡುತುಂ
ಕಂಪಿಸುತೆ ಕಳಲುತೆಂತಕ್ಕೆ ಮಜ್ಜನಕ್ಕೆರೆದು
ಜೊಂಪಿಸುತೆ ಜೋಲುತ್ತೆ ಒಸರ್ವ ಮೈಮರೆದು

ಕಳವಳಿಸಿ ಲಿಂಗ ಶಿವಲಿಂಗ ಕರುಣಿಪುದೆನುತೆ
ಅಳವಳಿದು ತಿಳಿ ಉಳಿದು ಲಿಂಗ ಕರುಣಿಪುದೆನುತೆ
ಮೆಲ್ಲನೆಚ್ಚತ್ತು ಪುಳುಕಿಸುತೆ ಪೂಜಿಸಲೆಂದು
ಸಲ್ಲಲಿತ ಕಯ್ಗಳಿಂ ಸಂತವಿಡುತುಂ ಬಂದು
ನೊಲ್ಲೆಯಚ್ಚರಲ್ಗಳಂ ಸಿರಿಮುಡಿಗೆ ಸಾರ್ಚುತುಂ
ಸಲ್ಲಲಿತ ಸಂಪಿಗೆಯರಲ್ಗಳಂ ತೀವುತುಂ
ಎಸಳೊಂದು ಮರೆಯಾಗಿ ಕಣ್ಗೆಟ್ಟು ಕರಗುತುಂ
ಎಸಳಂ ಸಿವಾರಿಸಲ್ಕಣ್ಬಂದು ನಲಿಯುತುಂ
ಕೆಯ್ಗೆ ಬಂದಂತೆ ಪೂಜಿಸುತಂ ನಮಸ್ಕರಿಸಿ
ಮೆಯ್ಗೆ ಬಂದಂತೆ ಪೊರಳುತ್ತಂ ನಮಸ್ಕರಿಸಿ
ನಾಲಿಗೆಗೆ ಬಂದಂತೆ ಸೊಗಳುತುಂ ಪಾಡುತುಂ
ಲೀಲೆ ಕಾಲಾದಂತೆ ತಿರುಗಿ ಬಂದಾಡುತುಂ
ದುಂಡಿಸಿ ಪಟಂ ನೆಗೆದು ಪೆರ್ಚಿ ಪೊರೆ ಏರುತುಂ
ತಂಡತಂಡವ ಪುಳುಕ ದಿಂಡೆಗೊಂಡುಬ್ಬರ್ತುಂ

ಇಂತು ಮಧ್ಯಾಹ್ನ ಪರ್ಯಂತವರ್ಚಿಸಿ ಬಳಿಕ
ಸಂತಸದ ಮಳೆಗರೆದು ಕಣ್ತೀವಿದಂ ಬಳಿಕ
ಪರಮಸಾರೋಗಣೆಗೆ ಹರುಷದಿಂದಂ ನೋಡಿ
ಸುರಚಿರಸ್ಥಾನದೊಳ್ ಮೂರುಕಲ್ಲಂ ಕೂಡಿ
ಮೇಲೊಂದು ಪಾತ್ರೆಯಂ ಪದುಳದಿಂ ತಂದಿರಿಸಿ
ಲೀಲೆಯಿಂ ತಳದೊಳಗ್ನಿಜ್ವಾಲೆಯಂ ಬರಿಸಿ
ಕಪಟರಹಿತಂ ಜಾತಿಧರ್ಮದೋಗರವಿರಲ್
ಶ್ವಪಚನಾಮಕ್ಕೆ ತಾನನುಕೂಲನಾಗಿರಲ್
ಆ ಕಪಾಲದನಡುವೆಯಾಯೋಗರವನಿಕ್ಕಿ
ಲೋಕವಂ ಸೋಂಕದ ಸಮರ್ಥ ಮನದೊಳಗುಕ್ಕಿ
ಭಸಿತದಿಂದೆಲ್ಲವಂ ನೆರೆ ಶುದ್ಧ ಮಾಡುತುಂ
ಶಶಿಧರ ಧ್ಯಾನಮಂ ಹೃದಯದೊಳ್ಮಾಡುತುಂ
ಪಾಕವಂ ಮಾಡುತುಂ ಶ್ವಪಚಯ್ಯನಿರುತಮಿರೆ
ಆಕಸ್ಮಿತಂ ಸಾಮವೇದಿಗಳ್ಬರುತುಮಿರೆ



ರಭಸವೆಲ್ಲಿಯದೆನುತ್ತುಂ ತಿರುಗಿ ನೋಡುತುಂ
ಅಭವಭಕ್ತಂ ಸಾಮವೇದಿಯಂ ಕಾಣುತುಂ
ಹರಹರನಮಃಶಿವಾಯೆಂದೆನುತೆ ಕಂಡಲ್ಲಿ
ಕೆರಹಿಂದೆ ಮುಚ್ಚಿದಂ ಭವಿ ಕಾಣದಂತಲ್ಲಿ
ಮುಚ್ಚುವದನಲ್ಲಿ ಕಂಡಸಾಮವೇದಿಗಳ್
ಅಚ್ಚರಿಯೆನುತ್ತೆ ಬೆರಗಾದರಾವಾದಿಗಳ್
ಇದು ಚಿತ್ರವಿದು ಚಿತ್ರವಿನ್ನೊಂದು ಪೊಸತುಂಟೆ
ಇದರಿಂದೆ ಮತ್ತೊಂದು ಕೌತುಕಂ ಇನ್ನುಂಟೆ
ಕುಲವಿಂತಡಿಗೆ ಇಂತು ಮುಚ್ಚುವುದು ತಾನಿಂತು
ನೆಲದೊಳಗೆ ಕಂಡರಿಯೆನಿಂತು ಮಾಡುವೆನಿಂತು
ಬೆಸಗೊಳ್ವೆನೀ ಭಕ್ತನಂ ಬಳಿಕ ನೋಡುವೆಂ
ವಶವಲ್ಲದಿರಲಿದಕೆ ತಕ್ಕುದಂ ಮಾಡುವೆಂ
ಹರಭಕ್ತರೆಂತಿರ್ಪುದೆಂದರಿಯಬಾರದಿದು
ಉರವಣಿಸಲಾಗದೆನುತುಂ ಚಿತ್ತದೊಳ್ತಿಳಿದು
ಮುಂದೆ ಶಿಷ್ಯರನೆಲ್ಲರಂ ಪುರಕೆ ಕಳಿಸುತುಂ

ಹಿಂದೆ ತಾನೋರ್ವನೇ ಗಗನದಿಂದಿಳಿಯುತುಂ
ಬಂದೆಲೆಲೆ ಭಕ್ತಯ್ಯ ಏಕೆ ಮುಚ್ಚಿದೆ ಇದಂ
ಬಂದವರ್ವಿಪ್ರಕುಲವೆಂದರಿಯದಿಂತಿದಂ
ಮಾಳ್ಪುದಕೆ ಕಾರಣವನರಿಪು ಎನಗೆಂದನಲ್
ನೋಳ್ಪೊಡುಬ್ಬಟೆಯ ಕಟ್ಟಾಚಾರವೇನೆನಲ್
ಮರುಮಾತುಗುಡದೆ ತೃಣದನಿತುಮಂ ಲೆಕ್ಕಿಸದೆ
ತೆರಹುಗೊಡದಿರ್ದನೇನೆಂಬುದಂ ಲೆಕ್ಕಿಸದೆ
ನುಡಿಯದಿರಲಲ್ಲಿ ಕಿರಿದುಂ ಪೊಳ್ತು ಬೆರಗಾಗಿ
ಕಡು ಚಿಂತೆಯಿಂ ಸಾಮವೇದಿಗಳ್ಸಿಗ್ಗಾಗಿ
ಹರಭಕ್ತನಿಪ್ಪಿರವು ತನ್ನ ಚಿತ್ತದೊಳಿರಲ್
ಪುರದತ್ತ ಪೋಗಲುದ್ಯುತನಾಗಿ ನಡೆಗೊಳಲ್

ಆ ದಿನಂ ನುಡಿಯದಿರೆ ಮರುದಿನಂ ನುಡಿಯದಿರೆ
ಪೋದವೆರಡುಂ ದಿನಂ ಪಾಪವರೆಯಾಗುತಿರೆ

ಮೂರನೆಯದಿನದಿರುಳ್ ಶಂಕರಂ ನಡೆತಂದು
ತೋರಿದಂ ಸ್ವಪ್ನದೊಳ್ ವಿಪ್ರನಲ್ಲಿಗೆ ಬಂದು

ಎಲೆ ಸಾಮವೇದಿ ನೀನೇಕೆ ಮರುಳಾದಪ್ಪೈ
ಕುಲದ ಗರ್ವದೊಳಿಂತು ಕೆಟ್ಟು ಹಾಳಾದಪ್ಪೈ
ಆನೆಂದೊಡಂ ಶ್ವಪಚದೇವರೆನೆ ಬೇರಿಲ್ಲ
ನೀನವಗರ್ಗಾಳಾಗೆ ನಿನಗೆ ತೀರದುದಿಲ್ಲ
ಎನುತೀಶ್ವರಂ ಶ್ವಪಚದೇವರಲ್ಲಿಗೆ ಬಂದು
ಕನಸಿನೊಳಗಲ್ತಿಯಿಂ ಲೀಲೆಯಿಂದಂ ನಿಂದು
ನಿನ್ನ ದರ್ಶನದಿಂದವನ ಭವಿತನಂ ಪೋಯ್ತು
ನಿನ್ನ ಕಾಣ್ಕೆಯಿಂದವನ ಕುಲವೆಲ್ಲ ಹಸನಾಯ್ತು
ಮಾಡವಂಗುಪದೇಶವಂ ನೀನೆ ಕರುಣದಿಂ
ಮಾಡೆಯ್ಯ ಎಲೆ ಭಕ್ತ ವಿಪ್ರಂಗೆ ಹರುಷದಿಂ
ಸಾಮವೇದಿಗಳನೀ ಧರೆಗೆ ಮೆರೆದಪೆನೆಂದು
ಕಾಮಹರನರಿಪುತಂ ಲಿಂಗದೊಳ್ಪುಗಲಂದು

ಎಚ್ಚತ್ತು ಪುಳಕದಿಂ ಶ್ವಪಚದೇವನ್ನೋಡಿ
ನಚ್ಚು ಮಚ್ಚಿನ ಲಿಂಗಮೂರ್ತಿಯೊಳಗೋಲಾಡಿ
ಎಂದಿನಂದದಿ ತೀವಿದಡವಿಯೊಳ್ನಡೆತಂದು
ಇಂದುಧರನಂ ಪೂಜಿಸುತಿರಲ್ಮನದಂದು
ಮತ್ತೆ ಬಂದರ್ಸಾಮವೇದಿಗಳ್ಬೆಳಗಾಗಿ
ಚಿತ್ತದೊಳ್ ಭಕ್ತನಂ ನುಡಿಸುವತಿ ಭರನಾಗಿ
ತರ್ಕಿಸುವೆನಾಂ ಸೋಲ್ತಡವರ್ಗಳೇ ಗುರುವೆನುತೆ
ಮರ್ಕಟಚರಿತ್ರಮಂ ಬಿಡುವೆಂ ಬಳಿಕೆನುತೆ
ಇದಿರುಂಟೆ ನೋಡುವೆನೆನುತ್ತಾಗಳೈತಂದು
ಸದಮಳಂ ಶ್ವಪಚದೇವರ ಮುಂದೆ ಮಿಗೆ ನಿಂದು
ಏಕೆ ನುಡಿಯಿರಿ ದೇವ ಎನ್ನ ಕೂಡೊಂದುವಂ
ಏಕೆ ಬಾಯ್ದೆರೆಯಲೊಲ್ಲಿರಿ ದೇವ ಒಂದುವಂ
ಎನೆ ವಿಭೂತಿಯನಿಟ್ಟುಕೊಳ್ನುಡಿವೆನಾನೆನಲ್
ಮನವಾರೆ ಇಟ್ಟುಕೊಂಡಂ ದ್ವಿಜಂ ಭೋಂಕೆನಲ್



ಇಡೆ ಕಾಣುತುಂ ಶ್ವಪಚದೇವನರಿದಂತಲ್ಲಿ
ನಡುವೊಂದು ತೃಣವನಿರಿಸುತೆ ನುಡಿದರಂತಲ್ಲಿ
ಎಲೆ ವಿಪ್ರ ಲಿಂಗಾರ್ಚನೆಯೊಳಿರುತ್ತೆಂದುವುಂ
ಎಲೆ ಭವಿಗಳೊಡನೆ ನುಡಿ ಇಲ್ಲ ಕೇಳೆಂದುವುಂ
ಮುಚ್ಚಿದೆಂ ಕೆರಹಿನಿಂ ಭವಿ ಕಾಣದಂತಿದಂ
ಮುಚ್ಚದಿರ್ದೊಡೆ ಶಂಭು ಕೆಯ್ಕೊಳ್ಳನಿಂತಿದಂ
ಎಂದೊಡೀ ಗಿಡುವೆಲ್ಲ ಮರವೆಲ್ಲ ಭಕ್ತರೇ
ಸಂದಣಿಸಿ ಬರುತಿರ್ಪ ಮೃಗವೆಲ್ಲ ಭಕ್ತರೇ
ಹಿಂದಟ್ಟಿ ಬರುತಿರ್ಪ ಬೇಡರುಂ ಭಕ್ತರೇ
ಸಂದಿಸುತ್ತಿರ್ಪ ಚಂಡಾಲರುಂ ಭಕ್ತರೇ
ಇಂತಿದಂ ನೋಡದೆನ್ನಂ ನೋಡಲಾಗದೇ
ಇಂತಿದಾವಾಗಮದೊಳುಂಟುಸುರಲಾಗದೇ

ಎನೆ ಕೇಳುತುಂ ಶ್ವಪಚದೇವರೆಂದರ್ನಗುತೆ
ನಿನಗೆ ಪೇಳ್ದಪ್ಪೆನೆಲೆ ವಿಪ್ರ ಕೇಳೆಂದೆನುತೆ
ಗಿಡುಮರದ ಹೂ ಪತ್ರೆ ಶಂಭುವಿಂಗೇರುವುದು
ನಡೆಪೆಣನೆ ನಿನ್ನ ತನು ಹೆಬ್ಬಡಿಕೆ ನಾರುವುದು
ಕಾಮ ಉಂಟೇ ಮರಕೆ ಕ್ರೋಧ ಉಂಟೇ ಲತೆಗೆ
ಕಾಮಾದಿ ಷಡ್ವರ್ಗವಿಡಿದು ತೀವಿತು ನಿನಗೆ
ಎಳೆ ಪುಲ್ಗಳಂ ಮೇದು ತಿಳಿನೀರ್ಗಳಂ ಕುಡಿದು
ಬೆಳೆವ ಮೃಗವಾರುವಂ ಬಾಧಿಸವು ತರವಿಡಿದು
ನಿನ್ನೂಟವೆಂಬುದತ್ಯಂತ ಕಾಳ್ಭೋಜನಂ
ಅನ್ನವೆಂಬುದು ಪಾರ್ವಣದ ಪಿಂಡಭೋಜನಂ
ಸತ್ತವರ ಮನೆಯೊಳೇಕಾಹ್ನದ ಕುಭೋಜನಂ
ಮತ್ತೆ ನೀನುಣ್ಬುದೆಲ್ಲಂ ಕಾಕಭೋಜನಂ
ಬೇಡರೊಂದುಂ ವೇದಶಾಸ್ತ್ರಮರಿಯರ್ದಿಟಂ
ಬೇಡರ್ಗೆ ನೀನೊಲ್ದು ಪೇಳ್ದುದೆಲ್ಲಟಮಟಂ
ಜಾತಿ ಧರ್ಮಂ ಬೇಂಟೆ ಎಂದಿರ್ಪರಂತವರ್
ಜಾತಿ ಚಾಂಡಾಲರೆಂದೆನಿಸಿರ್ಪರಂತವರ್
ಕರ್ಮಚಾಂಡಾಲನೆಂದೆನಿಸಿಕೊಳ್ವಂ ನೀನೆ

ದುರ್ಮುಖಂ ದುರ್ಗುಣಿ ದುರಾಚಾರಿಯುಂ ನೀನೆ
ಏಕಮೇವಾದ್ವಿತೀಯಂ ಬ್ರಹ್ಮನೆಂದರಿದು
ಲೋಕದೊಳ್ನಿಶ್ಚಾಧಿಕೋ ರುದ್ರ ಎಂದರಿದು
ಸರ್ವಮನ್ಯತ್ಪರಿತ್ಯಜ್ಯ ಎಂಬುದನರಿದು
ಸರ್ವಮುಂ ಭರ್ಗನಿಚ್ಚೆಯೊಳಿರ್ಪುದೆಂದರಿದು
ಸ ಶಿವ ಏಕೋ ದೇವನೆಂಬ ವೇದವನರಿದು
ಸ ಶಿವನೇ ಏಕನೆನಿಸಿರ್ಪ ವಾಕ್ಯವನರಿದು
ಹರಿಗುಂ ಹರಂತಿ ಎಂದೆಂಬ ವಾಕ್ಯವನರಿದು
ಹರನೆಲ್ಲವಂ ಶೀರ್ಘ ಕಳೆವೆನೆಂಬುದನರಿದು
ವೇದದೊಳ್ನೆಲೆಯಾದ ಶ್ರೀ ವಿಭೂತಿಯನರಿದು
ವೇದಕ್ಕೆ ತಾಯಪ್ಪ ಪಂಚಾಕ್ಷರಿಯನರಿದು
ಶೃತಿಯೊಳಗೆ ಸಲೆ ಸಂದ ರುದ್ರಾಕ್ಷಿಗಳನರಿದು
ಮತಿವಂತರೆನಿಸಿರ್ಪ ಭಕ್ತಚರಿತವನರಿದು
ಅರಿದು ಬರಿದೊರೆಯಾದ ನೀನಲ್ಲದಿನ್ನುಂಟೆ
ಅರಿದರಿದು ಕುರಿಯಾದ ನಿನ್ನಿಂದೆ ಮರುಳುಂಟೆ
ಅರಿದ ವೇದವ್ಯಾಸನೇನಾದನದನರಿಯ
ಅರಿವು ನಿನ್ನಳವೆ ಮುನಿಗಳ ಹವಣ ಕೇಳ್ದರಿಯ
ಗಗನದೊಳ್ಪರುತಿರ್ಪೆನೆಂದೆಂಬ ಗರ್ವವೇ
ಗಗನದೊಳ್ಪಕ್ಕಿ ಪಣ್ಣೆಲೆಗಳೆಲ್ಲಹಾರವೆ
ಪಂಚಮುಖನಂ ಪೂಜಿಸದ ಪಾತಕಂ ನೀನೆ
ಪಂಚವದನನ ಸ್ತುತಿಸದಿರ್ಪ ಪತಿತಂ ನೀನೆ
ಭಸಿತಮಂ ಭಾವಿಸದ ಭಾಗ್ಯಹೀನಂ ನೀನೆ
ಎಸೆವ ರುದ್ರಾಕ್ಷಿಯರಿಯದ ಪಾಪಿಯುಂ ನೀನೆ
ಕತ್ತೆ ಕರ್ಪುರದ ಹೇರಂ ಹೇರಿ ನಿಂದಂತೆ
ಹೊತ್ತ ವೇದಂಗಳರ್ಥವನರಿಯದಕಟಂತೆ
ಮರದಿಂದೆ ಗಿಡುವಿಂದೆ ವೃಗದಿಂದೆ ಪುಳುವಿಂದೆ
ಬರೆ ಬೇಡರಿಂದೆ ಚಾಂಡಾಲರಿಂ ನಾಯಿಂದೆ
ನೀನೆ ಕಷ್ಟಂ ಸುಡುಸುಡೆಲೆಲೆ ಭವಿ ಭವಿಯೆನೆನಿ
ನೀನೆ ಪತಿತಂ ಪಂಚಮಹಾಪಾತಕ ನೀನೆ
ನಿನ್ನನೀಕ್ಷಿಸುವರೇ ಶಿವಭಕ್ತರಪ್ಪವರ್



ನಿನ್ನೊಡನೆ ನುಡಿವರೇ ಶರಣರೆನಿಸಿರ್ಪವರ್
ಎಂದುಳ್ಳುದಂ ಶ್ವಪಚದೇವರುಬ್ಬಿಂ ನುಡಿಯೆ
ಮುಂದಿರ್ದ ಸಾಮವೇದಿಗಳನೊಲವಿಂ ಜರಿಯೆ

ನೆರೆ ಸತ್ಯ ಬೋಧೆ ಸಾತ್ವಿಕನ ಮನದೊಳ್ಪೊಕ್ಕು
ಮರಹಳಿದು ತಿಳಿಯುಳಿದು ಭಕ್ತಿಯೊಳ್ಮನ ಮಿಕ್ಕು
ಸಾಮವೇದಿಗಳೆಳ್ದು ಮೆಯ್ಯಿಕ್ಕಿ ಪೊಡಮಟ್ಟು
ಸೋಮಧರಮೂರ್ತಿ ಕರುಣಿಪುದೆಂದು ಮನನಟ್ಟು
ಸರ್ವಾಪರಾಧಿಗಜ್ಞಂಗೆ ಕರುಣಿಪುದಯ್ಯ
ಸರ್ವ ಪಾಪಂಗೆ ದುರ್ಮತಿಗೆ ಕರುಣಿಪುದಯ್ಯ
ಸತ್ಯವಂ ಬಿಟ್ಟಿರ್ದಸತ್ಯಂಗೆ ಕರುಣಿಪುದು
ನಿತ್ಯನಂ ಬಿಟ್ಟಿರ್ದನಿತ್ಯಂಗೆ ಕರುಣಿಪುದು
ಎಂದು ಬಿನ್ನವಿಸಿ ಕಿಂಕರ್ಮಾಣವಂ ಕೇಳ್ದು
ಇಂದುಧರನರುಪಿದಂ ಚಿತ್ತದೊಳ್ನೆರೆ ತಾಳ್ದು
ಕರುಣದಿಂ ಶ್ವಪಚದೇವ ವಿಪ್ರನಂ ನೋಡಿ
ಕರದಲ್ಲಿ ಶಂಕರನ ನಿಜಮೂರ್ತಿಯಂ ಕೂಡಿ

ಕರೆದು ಹತ್ತಿರೆ ನೋಡಿ ಪದ್ಮಾಸನದೊಳಿರಿಸಿ
ಹರನ ಶಶಿಧರನ ರೂಪಂ ಚಿತ್ತದೊಳಗಿರಿಸಿ
ಪಶುಪತಿಯ ಚರಣಮಂ ಮನದ ಕೆಯ್ಗೊಳ್ಗೊಟ್ಟು
ಅಸಿತಗಳಮೂರ್ತಿಯಂ ಜ್ಞಾನದಿಂ ಸ್ಥಿತಿಟ್ಟು
ಸಾಮವೇದಿಗಳ ಮಸ್ತಕದಲ್ಲಿ ಹಸ್ತಮಂ
ಪ್ರೇಮದಿಂ ಶ್ವಪಚದೇವರ್ತಮ್ಮ ಹಸ್ತಮಂ
ತಂದಿಟ್ಟು ಕರ್ಣದೊಳ್ಪಂಚಾಕ್ಷರಿಯನರುಪಿ
ಮುಂದಿರ್ದ ಶಿವಲಿಂಗನಿಜಮೂರ್ತಿಯಂ ತಿಳುಪಿ
ಉಪದೇಶಮಂ ಶ್ವಪಚದೇವರೊಲವಿಂ ಮಾಡೆ
ತಪನನಂತಿರೆ ತೊಳಗಿ ಬೆಳಗುತಿರ್ದಂ ನೋಡೆ
ಕುಲಛಲದ ಮದವಳಿದು ನೆಲಸಿತ್ತು ಶಿವಭಕ್ತಿ
ತೊಲಗಿತ್ತು ಭವಿತನಂ ಕಾಸಿ ಬೆಚ್ಚಿತು ಯುಕ್ತಿ
ಜ್ಯೋತಿಯಿಂ ಜ್ಯೋತಿಯಂ ಪೊತ್ತಿಸಿದ ತೆರನಾಯ್ತು

ಮಾತೇನು ಗುರುಶಿಷ್ಯರೆಂದರಿಯದಂತಾಯ್ತು
ಓರ್ವರೊಳಗೋರ್ವರಂ ತಂದಿಕ್ಕಿದಂತಾಯ್ತು
ಸರ್ವೇಶ್ವರನ ಭಕ್ತಿ ಬೇರ್ವರಿದ ತೆರನಾಯ್ತು
ಗುರುಚರಣಮಂ ನಂಬಿ ಲಘುವಳಿದು ಗುರುವಾಗೆ
ಗುರುನಿರೀಕ್ಷಣೆಯಿಂದೆ ಶಿವತತ್ವಮಯವಾಗೆ
ಹರಭಕ್ತ ಸಾಮವೇದಿಗಳ ಪಿತೃಕುಲವೆಲ್ಲ
ನರಕದಿಂ ರುದ್ರಲೋಕಕ್ಕೆ ನೆಗೆಯಿತ್ತೆಲ್ಲ

ಇಂತು ಕರುಣಂಬಡೆದು ತತ್ಪುರಕೆ ನಡೆತಂದು
ಸಂತಸದಿ ಛತ್ತ್ರೀಸಪುರಕೆ ಬರುತಿರಲಂದು
ಕಂಡ ಶಿಷ್ಯರಿದೇನಿದೇನೆನುತ್ತಿರಲಲ್ಲಿ
ತಂಡದಿಂ ಛತ್ತ್ರೀಸಪುರಜನಂ ಬರಲಲ್ಲಿ
ಎಲ್ಲರ್ಗೆ ವೇದದಿಂ ಶಾಸ್ತ್ರದಿಂದರಿಪುತುಂ
ಎಲ್ಲರ್ಗೆ ಶೈವಾಗಮೋಕ್ತಿಯಿಂದರಿಪುತುಂ
ಎಲ್ಲರಂ ತಿಳುಪಿ ಶಿವಭಕ್ತರಂ ಮಾಡಿದಂ
ಎಲ್ಲರಂ ಶಿವನ ಸದ್ಭಕ್ತಿಯೊಳ್ಕೂಡಿದಂ
ನೋಡೆ ಛತ್ತ್ರೀಸಪುರದೊಳಗೆಲ್ಲ ಶಿವಮಯಂ
ಕೂಡೆ ಮನೆಮನೆಗಳೊಳು ಲಿಂಗಾರ್ಚನೆಯ ಮಯಂ
ಎಲ್ಲೆಲ್ಲಿ ಕೇಳ್ವೊಡಂ ಘಂಟಾರವಂ ಕೂಡೆ
ಎಲ್ಲೆಲ್ಲಿ ಕಾಣ್ಬೊಡಂ ಭಸಿತಭಾಳಂ ಕೂಡೆ
ಹೂವಗ್ಗವಣೆಗಳಂ ತರುತಿರ್ಪ ಸಂಭ್ರಮಂ
ಆವಗಂ ಶಂಕರನನರ್ಚಿಸುವ ವಿಭ್ರಮಂ
ಶಿವಭಕ್ತಿ ಸಂಭ್ರಮಂ ಪುರದೊಳಗೆ ಮಿಗಿಲಾಗೆ
ಶಿವನೇಕ ನಿಷ್ಠೆಯಿಂದಂದಿಂಗೆ ಪಿರಿದಾಗೆ

ಇಂತಪ್ಪ ಸಂತೋಷದಿಂ ಸಾಮವೇದಿಗಳ್
ಕಂತುಹರಚರಣಕಮಲ ಮೋದವೇದಿಗಳ್
ಉದಯದೊಳ್ನವಕುಸುಮ ಸಂಕುಳಂಗಳ ತಿರಿದು
ಮದನಹರ ಮಜ್ಜನಕೆ ಗೋಕ್ಷೀರಮಂ ಕರೆದು
ಚಿಂತೆಯಡಗಿದ ದಂತಧಾವನ ಸ್ನಾನದಿಂ



ಸಂತತಂ ತನುಗುಣವ ತೊಡರದಿಹ ಮೌನದಿಂ
ಭಸಿತಮಂ ಧರಿಸಿ ರುದ್ರಾಕ್ಷಿಯಂದದಿ ತೊಟ್ಟು
ಅಸಮ ಗುರುಪದವ ನೆನೆನೆನೆದು ಮನಮುಂದಿಟ್ಟು
ಚಳೆಯ ಸಾರಣೆ ರಂಗವೋಲೆಯಂ ರಂಜಿಸುತೆ
ಒಳಗೆ ಬೆಳಗುವ ದೀಪಮಾಲೆಯಂ ಪೊತ್ತಿಸುತೆ
ಪಂಚಾಮೃತಂ ಮಾಡಿ ಪಂಚಮುಖನಂ ನೋಡಿ
ಪಂಚಮಹವಾದ್ಯವೆಸೆಯಲು ಸುಖದೊಳೋಲಾಡಿ
ಗಂಗಾಂಬುವಂ ಮಜ್ಜನಕ್ಕೆರೆದು ಕುಣಿಕುಣಿದು
ಗಂಗಾಧರಂಗೆ ಸಜ್ಜನದ ಮಜ್ಜನಕ್ಕೆರೆದು
ಗಂಧಮಂ ಕೈಗೊಳಿಸಿ ಯಕ್ಷತೆಯನೊಪ್ಪುತಿರೆ
ನಂದಿವಾಹನನ ಮೂರ್ತಿಯು ಮನವನಪ್ಪುತಿರೆ
ಕಮನೀಯವೆನಿಪ ಸಿಂಹಾಸನದೊಳೊಪ್ಪಿರಿಸಿ
ರಮಣಂಗೆ ಇಂಡೆ ದಂಡೆಗಳಿಂದೆ ಸಿಂಗರಿಸಿ
ಸಂಪಿಗೆ ದವನ ಮರುಗ ಮುಡಿವಾಳ ಇರುವಂತಿ
ಕಂಪೆಸವ ಪಚ್ಚೆ ಪಡ್ಡಳಿ ಮೊಲ್ಲೆ ಸೇವಂತಿ
ಮೊದಲಾದ ಪರಿಮಳ ಕದಂಬವಂ ನೆರೆ ತುರುಗಿ
ಇದಿರುಂಟೆ ನೋಡುವಡೆನಿತ್ತುವುಂ ನೆರೆ ತುರುಗಿ
ಅಹಹ ಇಂದಾನು ಪುಟ್ಟಿದುದು ಫಲವಾಯಿತ್ತು
ಆಹಹಾ ಮಹದ್ಗುರುವ ಮುಟ್ಟಿದ್ದು ಫಲವಾಯ್ತು
ಗುರುವಿಂದೆ ಬರ್ದುಕಿದೆಂ ಬರ್ದುಕಿದೆಂ ಕುಬುಬುಬುಬು
ಗುರವಿಂದೆ ಶುದ್ಧಾತ್ಮನಾದೆನೆಲೆ ಕುಬುಬುಬುಬು
ಎಂದಿಂತು ಕುಣಿದಾಡಿ ಮಣಿದಾಡಿ ಮೆಯ್ಮರೆದು
ಸಂದಣಸಿದಾನಂದ ಉರ್ಕೆ ತನುವಂ ಮರೆದು
ಮಂಗಳಮಹಾಮಹಿಮ ಗುರುವಿಂಗೆ ಪರಮಂಗೆ
ತುಂಗಗುಣ ನಿಳಯಂಗೆ ಧೂಪಾರತಿಯ ಬೆಳಗೆ
ದಿವ್ಯಾನ್ನವಮೃತಾನ್ನ ದೇವಾನ್ನಮಂ ಬಡಿಸಿ
ನವ್ಯರುಚಿಶಾಕದಿಂ ಸರ್ವಸಾಧನ ಮೆರಿಸಿ
ದೇವಗಣಕುಲಚಕ್ರವರ್ತಿಯೊಲ್ದಾರೈಸು
ದೇವದಾಕ್ಷಾಯಣಿಯ ರಮಣನೊಲಿದಾರೈಸು

ಎಂದು ದೇವಂಗೆ ಕರ್ಪೂರದ ವೀಳೆಯಮಿತ್ತು
ಇಂದುಮೌಳಿಗೆ ಅರ್ಘ್ಯಪಾದ್ಯತರ್ಪಣವಿತ್ತು
ದೇವಭಕ್ತಿಯನೀವುದೆಂದು ಪ್ರಣುತನಾಗಿ
ಆವಗಂ ಶಿವನ ಕಾರುಣ್ಯಸುಖಮುಖನಾಗಿ
ಕರುಣಾಪ್ರಸಾದಮುಂ ಹರುಷದಿಂ ಕೈಕೊಂಡು
ಗುರುಪದದ ಧ್ಯಾನಮಂ ಹೃದಯದೊಳಗೆಡೆಗೊಂಡು
ಈ ತೆರೆದೊಳೊಂದೆರಡು ಮಾಸವಾಗುತ್ತಮಿರೆ
ಭೂತೇಶ್ವರನ ಭಕ್ತಿ ಪರ್ಬಿ ಕುಡಿವರಿಯುತಿರೆ
ಸಾಮವೇದಿಗಳ ತಂದೆಯ ದಿನಂ ಬರಲಲ್ಲಿ

ಆ ಮಹಾ ಭಕ್ತರ್ಗೆ ಪೇಳುತ್ತ ಪುರವಲ್ಲಿ
ಅಲ್ಲಿ ವಿಶ್ವೇದೇವರಪ್ಪರೊಬ್ಬರುಮಿಲ್ಲ
ಅಲ್ಲಿ ತನ್ನಯ ಮನಕ್ಕೆರಗುವರ್ತರ್ಾವಿಲ್ಲ
ದಿರೆ ವಿಚಾರಿಸಿ ನೋಡಿ ನಿಶ್ಚಯಿಸುತುಂ ಕಂಡು
ಹರುಷದಿಂ ಶ್ವಪಚದೇವರ ಸಾರ್ಗೆ ನಡೆಗೊಂಡು
ಭರದಿಂದೆ ಬಂದರಣ್ಯದೊಳಿರ್ದ ಗುರುವಿಂಗೆ
ಹರನನೊಲ್ದಾರಾಧಿಸುವ ಪರಮ ಗುರುವಿಂಗೆ
ನರಕದೋಲ್ಬೀಳ್ವವನನೆತ್ತಿದ ಮಹಾತ್ಮಂಗೆ
ಪರಮ ಶಿವಲಿಂಗದೊಳ್ನಿರಪಿದ ಮಹಾತ್ಮಂಗೆ
ಪೂಜಿಸುತೆ ಪೂಜಿಸುತೆ ಶಿವನಾದ ಪರಮಂಗೆ
ರಾಜಿಸುತೆ ರಾಜಿಸುತೆ ಗುರುವಾದ ಪರಮಂಗೆ
ಮೆಯ್ಯಿಕ್ಕಿ ದೇವ ಬಿನ್ನಪವೆಂದು ಕೆಯ್ಮುಗಿದು
ಕೆಯ್ಸ್ರಿತ್ತಿ ಪೊಡಮಟ್ಟು ಭಕ್ತಿಯಿಂದೊಳಸುಗಿದು

ನಾಳೆನ್ನ ತಂದೆಯ ದಿನಕ್ಕೆ ಬಿಜಯಂಗೆಯ್ದು
ಶೂಲಿ ವಿಶ್ವೇದೇವರಾಗಿ ಬಿಜಯಂಗೆಯ್ದು
ಕರುಣಿಸುವುದೆನೆ ಕರಂ ಶ್ವಪಚದೇವರ್ನಗುತೆ
ಮರುಳೆ ಪಿತೃದಿವಸದೊಳ್ಪಾರೆವಾವೆಂದೆನುತೆ
ನಿನಗೆ ವಿಶ್ವೇದೇವರೇ ಹೋಗು ಬಂದಪಂ
ಮನಸಿಜಹರಂ ತಾನೆ ಕರುಣದಿಂ ಬಂದಪಂ



ಎನೆ ಶಿವಂ ಬರ್ಪ ಪರಿಯಂ ದೇವ ಬಲ್ಲೆನೇ
ಎನಗೆ ಕರುಣಿಪುದು ರೂಪಂ ದೇವ ಬಲ್ಲೆನೇ
ಎಂದೊಡೆಮ್ಮಯ ವೇಷದಿಂದ ಬಂದಪನಯ್ಯ
ಒಂದು ಕರುವಂ ಪೊತ್ತುಕೊಂಡು ಬಂದಪನಯ್ಯ
ಎಂದು ಕರುಣಿಸೆ ಹಸಾದವೆನುತ್ತೆ ತಾಂ ತಿರುಗಿ
ಬಂದನಾ ಭಕ್ತಿಸಮ್ಪುರ್ಕೆ ಮನಪೊಕ್ಕರಗಿ

ಬಂದು ಮರುದಿವಸದುದಯದೊಳೆ ಪಲ್ಲಂ ಸುಲಿದು
ಮಿಂದು ಭಸಿತಮನಿಟ್ಟು ರುದ್ರಾಕ್ಷಿಯಂ ತಳೆದು
ಮನೆಯ ಧವಳಿಸಿ ತೋರಣಂಗಟ್ಟಲಳವಡಿಸಿ
ತನತನಗೆ ಶಾಕಪಾಕಾದಿಗಳನಳವಡಿಸಿ
ಇದೆ ಬಂದು ನೆರೆಯುತ್ತು ಶಿಷ್ಯವರ್ಗಂ ಕೂಡೆ
ಹರಭಕ್ತರುಂ ಹಿರಿಯರುಂ ಶಾಂತರುಂ ಕೂಡೆ
ನೆರೆದಿರಲು ಸಾಮವೇದಿಗಳ್ಪುಳುಕಿಸುತಿರಲು
ಹರುಷದಿಂ ಮಂಡಲಂ ಮಾಡಿ ನೋಡುತ್ತಿರಲು
ಹರನ ಬರವಂ ಸಾರ್ದು ನೋಡುತ್ತಮಿರಲಲ್ಲಿ
ಪರಮ ಕರುಣಮನೊಲ್ದು ಪಾರುತ್ತಮಿರಲಲ್ಲಿ

ಬರುತಿರ್ದನೀಶ್ವರಂ ಪಿರಿಯ ವೇಷಂಗೊಂಡು
ಬರುತಿರ್ದನಾ ಭಕ್ತವತ್ಸಲಂ ನಡೆಗೊಂಡು
ಹೊತ್ತ ಕರುವಿಡಿದ ಸಂಬಳಿಗೋಲನೀಶ್ವರಂ
ಉತ್ತಮೋತ್ತಮ ಕರುಣಾವಾರುಧಿ ಸುಧಾಕರಂ
ಸಾಮವೇದಿಗಳ ಪಿತೃಕುಲವೆಲ್ಲ ಸಹಿತಾಗಿ
ಸೋಮಧರನೆಲ್ಲರಂ ಕೂಡಿಕೊಂಡೊಂದಾಗಿ
ದೂರದಿಂ ಬರುತಮಿರೆ ಕಂಡು ಪುಳುಕಿತನಾಗಿ
ಆರುತುಂ ಗುಡಿಗಟ್ಟಿ ಕುಣಿದಾಡುತುಂ ಬೇಗಿ
ಎನ್ನೊಡೆಯನಾ ಬಂದನಾಹಾ ಮಹಾದೇವ
ಎನ್ನೊಡೆಯನೈತಂದನಾಹಾ ಮಹಾದೇವ
ಕರುಣಾಬ್ಧಿ ಮೇರೆದಪ್ಪಿತು ಮೀರಿತಮ್ಮಮ್ಮ
ಪರಬೊಮ್ಮನೆನ್ನತ್ತಲೊಗ್ಗುಡಿಸಿತಮ್ಮಮ್ಮ

ಎಲೆಲೆ ಕುಣಿದಾಡಿರೇ ಹಾಡಿರೇ ಭಕ್ತರಿರ
ಎಲೆಲೆ ಸುಖಮಂ ಸೂರೆಗೊಳ್ಳಿರೇ ಶರಣರಿರ
ಎನಲೆನಲ್ಲುತ್ತೆ ಸಾರ್ದಂ ಹೆಗಲ ಕರು ಸಹಿತ
ತನತನಗೆ ಸಂವಣಿಸಿ ಬರ್ಪ ಪಿತೃಕುಲ ಸಹಿತ
ಬಂದು ಮಂಡಲವಲ್ಲಿ ಪಾದಮಂ ನೀಡುತಿರೆ
ನಿಂದಿರ್ದ ವಿಪ್ರಕುಲವೆಲ್ಲ ಪರಿದೋಡುತಿರೆ

ಸಾಮವೇದಿಗಳಲ್ಲಿ ಪುಳುಕಿಸುತೆ ಪರಿತಂದು
ಸೋಮಧರ ಕಾಮಹರ ಕರುಣಿಸಿದಿರೆನುತಂದು
ಪಾದಮಂ ತೊಳೆಯಲೆಂದನು ಮಾಡುವನಿತಕ್ಕೆ
ವೇಧಿಸಿದ ಕಡು ನೇಹದಿಂದುಕ್ಕುವನಿತಕ್ಕೆ
ಹೊತ್ತ ಕರುವಲ್ಲಿ ವಿಷ್ವಕ್ಸೇನ ತನುವಾಗೆ
ಬಿತ್ತರಿಸುವೊಂದು ಮುಖದೊಳಗೈಯ್ದು ಮುಖವಾಗೆ
ಉಟ್ಟ ಪೊಡೆದುವು ಪುಲಿದೊವಲ್ಗ ಜಾಜಿನವಾಗೆ
ಕಟ್ಟಿರ್ದ ಕಿವಿಗುಂಜಿ ನಾಗಕುಂಡಲವಾಗೆ
ಮೆಯ್ಯ ಕಡುಗಪ್ಪಳಿದು ಕರಗೊರಲ್ಕಪ್ಪಾಗೆ
ಕೆಯ್ಯ ಸಂಬಳಿಗೋಲು ಖಟ್ವಾಂಗಮಯವಾಗೆ
ದೆಸೆದೆಸೆಗೆ ವಿಸುಪ ಮೂರುಂ ಕಣ್ಗಳೀಶ್ವರಂ
ಶಶಿರವಿಗಳಂ ಬೆಳಗುತಿರ್ಪ ಕರುಣಾಕರಂ
ತಾನಾಗಿ ನಿಂದಿರಲ್ಪೂಮಳೆಗಳೆರಗಿದವು
ನಾನಾ ಮೃದಂಗ ದುಂದುಭಿನಾದಮುಣ್ಮಿದವು

ಆಗಳಾ ಸಾಮವೇದಿಗಳ ಭವನಂ ಕಂಡು
ರಾಗವಿರ್ಮಡಿಸಿ ನೂರ್ಮಡಿಸಿ ಹರುಷಂಗೊಂಡು
ಹರನ ಪದಕಮಲಮಂ ಬಿಗಿದಪ್ಪಿಕೊಂಡಿರಲ್
ಪರಮನಂಘ್ರಿಗಳೊಳಗೆ ಪರಮ ಸುಖದಿಂದಿರಲ್
ಪಿಡಿದೆತ್ತಿದಂ ಸಾಮವೇದಿಗಳನೀಶ್ವರಂ
ಕಡು ನೇಹದಿಂದೆ ತೆಗೆದಪ್ಪಿ ಕರುಣಾಕರಂ
ನಡೆ ವಿಮಾನವನೇರಿಕೊಳ್ಳಯ್ಯ ಕೊಳ್ಳೆನಲ್
ನುಡಿದರಾ ಸಾಮವೇದಿಗಳಲ್ಲಿ ಭೋಂಕೆನಲ್



ಎನ್ನ ಗುರು ಸಹಿತವಲ್ಲದೆ ಬಾರೆನೆಲೆ ದೇವ
ಚನ್ನಭತ್ತೀಸಪುರಸಹಿತವಲ್ಲದೆ ದೇವ

ಎನೆ ಶಿವಂ ಶ್ವಪಚದೇವರನಲ್ಲಿ ಕರಿಸಲ್ಕೆ
ತನತನಗೆ ಗಣಕುಲಕೆ ಪುರವನೆತ್ತಿರೆನಲ್ಕೆ
ಭತ್ತೀಸಪುರ ಸಹಿತ ಗುರು ಸಹಿತ ಗಗನಕ್ಕೆ
ಒತ್ತರಿಸಿ ಸಾಮವೇದಿಗಳೆಯ್ದಿ ನಿಮಿಷಕ್ಕೆ
ಬಂದು ನಂದೀಶ್ವರನ ಬಾಗಿಲೊಳ್ನಡೆತಂದು
ಇಂದುಧರನೋಲಗದೊಳತುಳಸುಖದಿಂ ಸಂದು
ಇರೆ ಶಿವಂ ಶ್ವಪಚದೇವರನಲ್ಲಿ ಕೊಂಡಾಡಿ
ಕರೆದಲ್ಲಿ ಸಾಮವೇದಿಗಳನೊಲವಿಂ ನೋಡಿ
ಗುರುವಿಂಗೆ ಶಿಷ್ಯಂಗೆ ಗಣಪದವಿಯಂ ಕೊಟ್ಟು
ಪರಮಗುರು ಪರಮಾನುರಾಗಮಂ ಮುಂದಿಟ್ಟು
ಭತ್ತೀಸಪುರವನಾ ರುದ್ರಲೋಕದೊಳಿರಿಸಿ
ಮುಂತಿರ್ದ ಗಣಕುಲದ ನಡುವೊಪ್ಪೆ ಸಿಂಗರಿಸಿ
ಸಕಲ ಶರಣರ ಮನೋರಥರೂಪನೊಪ್ಪಿದಂ
ಸಕಳ ಲೋಕೈಕ ಶಾಶ್ವತ ಮೂರ್ತಿಯೊಪ್ಪಿದಂ
ಅಮ್ಮಮ್ಮ ಶರಣಜನಸುರಧೇನು ಒಪ್ಪಿದಂ
ಎಮ್ಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ॥

**ಕಂದ**॥ ಧರೆ ಬಣ್ಣಿಸೆ ಸುಖವಿಡಿದಾ
ದರದಿಂದನೆ ಮೆರೆದ ಸಾಮವೇದಿಗಳವನೆಂ।
ದುರುತರ ಭಕ್ತಿಯ ನೀವುದು
ಕರುಣಾಕರ ದೇವ ಹಂಪೆಯ ವಿರೂಪಾಕ್ಷಾ॥

# ಮಳೆಯರಾಜ ಶರಣರ ಮಹಾತ್ಮೆ

ಕಂದ॥ ಧರೆಯೊಳಗೆ ಮಳೆಯರಾಜಂ
ಮೆರೆದಂ ಕರುಣಾಬ್ಧಿ ಹಂಪೆಯ ವಿರೂಪಾಕ್ಷಂ ।
ಪುರಮಥನಂ ಸ್ಮರಮಥನಂ
ಕರಿಮಥನಂ ದುರಿತಮಥನನಂತಕಮಥನಂ ॥

## ರಗಳೆ.

ಇಳೆಗೆ ತೊಳಗಿ ಬೆಳೆವ ತಿಳಕವೆನಿಪ ಮಳೆಯ ದೇಶದಲ್ಲಿ
ಮಳೆಯವತಿ ಎನಿಪ್ಪ ಪಟ್ಟಣಂ ವಿರಾಜಿಸಿರ್ಪುದಲ್ಲಿ
ದೇವರಾಜನೆನಿಪ ಭೂಪನಾ ಪುರಕ್ಕೆ ಕರ್ತುವಾಗಿ
ಭೂವಧೂವಿಳಾಸ ಭಾಸಮಾನ ಕಮಳ ರಮಣನಾಗಿ
ಇರ್ಪ ನೃಪತಿಗರಸಿ ಶಚಿ ಎನಿಪ್ಪ ನಾಮದಿಂದಲೆಸೆಯೆ
ಇರ್ಪನಲ್ಲಿ ಸಕಲ ಭೂಪರೆಲ್ಲ ತನಗೆ ಸೆಡೆದು ಕುಸಿಯೆ
ಧರೆಗೆ ದೇವರಾಜನೆಂಬ ಪೆಸರ ಪೇರ್ಮೆ ಜಸವನೀಯೆ
ಧರಣಿಗೆಲ್ಲ ತನ್ನ ಕೊಡೆಯ ನೆಳಲ ತಣ್ಪು ಸೊಂಪನೀಯೆ
ಮತ್ತ ಗಜದ ಹಯದ ರಥದ ಜನಪದಕ್ಕೆ ಲೆಕ್ಕವಿಲ್ಲ
ವಿತ್ತಪಂಗೆ ಮಿಗಿಲೆನಿಪ್ಪ ಸಂಪದಕ್ಕೆ ಸಂಖ್ಯೆ ಇಲ್ಲ
ಇಂತು ಮೆರೆವ ಸಕಲ ಶೌರ್ಯ ಧೈರ್ಯಭರಿತ ಚರಿತನಾಗಿ
ಕಂತುಹರನ ಪೂಜೆಗೋಷ್ಠಿಯಿಂದೆ ಬಹಳ ಹರುಷನಾಗಿ
ಪರಿಮಳೋದಕಂಗಳಿಂ ಶಿವಂಗೆ ಮಜ್ಜನಕ್ಕೆ ಕೊಟ್ಟು
ನೆರೆವ ನೂತನ ಪ್ರಸೂನದಿಂದೆ ನಲಿದು ಪೂಜೆಗೊಟ್ಟು
ಕಂಪುವೆತ್ತ ಸರಸ ಧೂಪ ಧೂಮ್ರವೆತ್ತಿ ಬೆಳಗನೆತ್ತಿ
ಇಂಪು ಪರ್ಬಿ ಪಲ್ಲವಿಪ್ಪ ಪುಳಕದಿಂದೆ ಸುತ್ತಿ ಮುತ್ತಿ
ದೇವರಾಜನಮೃತ ರಸವನಳ್ಕರಿಂದೆ ಹಿಂಗದೂಡಿ
ದೇವವೃಂದವಂದಿತಂಗೆ ವೀಳೆಯಂಗಳಿತ್ತು ನೋಡಿ
ದೇವದೇವದೇವ ರಾಜಮೌಳಿ ಕರುಣಿಸೆಂದು
ದೇವ ಗತಿಯೆ ದೇವ ಮತಿಯೆ ದೇವ ಪತಿಯೆ ಕರುಣಿಸೆಂದು



ಸುಖಿಯ ಸುಖವೆ ಸುಖದಮುಖವೆ ನಿಖಿಳ ಸ್ಥಿತಿಯೆ ಕರುಣಿಸೆಂದು
ಅಖಿಳ ವರನೆ ಕಲ್ಪತರುವೆ ಸಕಳ ಗುರುವೆ ಕರುಣಿಸೆಂದು
ಮುತ್ತು ಮಾಣಿಕಂಗಳಿಂದೆ ಮಕರತೋರಣಂಗಳೊಪ್ಪೆ
ಇತ್ತ ನೋಡಿ ಮತ್ತೆ ನೋಡಿ ಮರಳಿ ನೋಡಿ ನೇಹ ಒಪ್ಪೆ
ಶಿವನನರ್ಚಿಸುತ್ತಮಿರ್ಪನಮಮ ದೇವರಾಜನಿಂತು
ಭುವನವಂ ಪ್ರತಾಪದಿಂದೆ ಪಾಲಿಸುತ್ತಮಿರ್ಪನಿಂತು

ಒರ್ಮೆಯುಂ ವಸಂತಪೂರ್ವೆಯುಂ ಸುವೃಷ್ಟಿ ದೇಶದೊಳಗೆ
ಒರ್ವೆಯುಂ ವಿವಾಹಮಂಗಳಂಗಳಲ್ಲಿ ದೇಶದೊಳಗೆ
ಕುಜನರಿಲ್ಲ ಸುಜನರುಂಟು ಬಡವರಿಲ್ಲ ಒಡೆಯರುಂಟು
ರುಜೆಗಳಿಲ್ಲ ಭುಜಗಳುಂಟು ದೀನರಿಲ್ಲ ದಾನರುಂಟು
ಖೂಳರಿಲ್ಲ ಜಾಣರುಂಟಗಲ್ವರಿಲ್ಲ ಒಲ್ವರುಂಟು
ಥಾಳರಿಲ್ಲ ಶುಚಿಗಳುಂಟು ಹುಸಿವರಿಲ್ಲ ಸತ್ಯರುಂಟು
ಪಾಪವಿಲ್ಲ ಪುಣ್ಯ ಉಂಟು ಕೋಪವಿಲ್ಲ ಸಮತೆಯುಂಟು
ತಾಪವಿಲ್ಲ ತಣ್ಪು ಉಂಟು ಕೋಪವಿಲ್ಲ ಸಮತೆಯುಂಟು
ಭವಿಗಳಿಲ್ಲ ಭಕ್ತರುಂಟು ತರ್ಕವಿಲ್ಲ ಪೂಜೆಯುಂಟು
ತಸಕವಿಲ್ಲ ಹದುಳ ಉಂಟು ಬೇಳ್ಪರಿಲ್ಲ ಕೊಡುವರುಂಟು
ಇಂತು ತನ್ನ ದೇಶದೊಳಗೆ ಸಕಲ ಸುಖದ ಸುಕೃತನಾಗಿ
ಕಂತುವಿರೂರಲಣ್ಮದಿರ್ಪ ನಿರ್ವಿಕಾರ ಭರಿತನಾಗಿ
ಹರುಷದಿಂದನೇಕ ವತ್ಸರಂಗಳೊಳಗೆ ಸುಖದೊಳಿರ್ಪ

ಇರುತಲೊಂದು ದಿವಸದೊಳ್ಪುರಾಣಗೋಷ್ಠಿಯಿಂದ ಮಿರ್ದು
ಪುತ್ರರಿಲ್ಲದಿರ್ಪವಂಗೆ ಲೋಕವಿಲ್ಲ ತಪ್ಪದೆಂದು
ಪುತ್ರಕಾಮ್ಯವಂ ಕರಂ ಪುರಾಣ ವಿಪ್ರರೆಲ್ಲರಂದು
ಪೇಳಲರಿದು ಸುತನ ಬಯಕೆ ಭಾವದೊಳಗೆ ಸುಳಿದು ಬೆಳೆದು
ಭಾಳನಯನದಿಂದೆ ಪಡೆವೆನೆಂದು ಚಿತ್ತವೆಳೆದು ಸೆಳೆದು
ಶಿವಚತುರ್ದಶಿ ದಿನಂ ಬರಲ್ಕೆ ಶಿವನ ನಿಳಯದೊಳಗೆ
ತವಕಿಸುತ್ತೆ ದೇವರಾಜನೈದೆ ಬಂದು ಭವನದೊಳಗೆ
ತನ್ನ ಶಚಿ ಎನಿಪ್ಪ ಸತಿಯನಲ್ಲಿ ಬರಿಸಿ ಶುಚಿಗಳಾಗಿ
ಉನ್ನತ ಪ್ರಮೋದ ವಿಮಳ ಭಕ್ತಿಯುಕ್ತ ಚಿತ್ತರಾಗಿ

ಶಂಕರಂಗೆ ಸಕಲ ಮಜ್ಜನಾದಿ ಪೂಜೆಯಂ ನಿಮಿರ್ಚಿ
ಬಿಂಕದಿಂದೆ ಕನಕ ರತ್ನರಾಶಿಗಳನೆ ಹತ್ತೆ ಸಾರ್ಚಿ
ಭೂಮಿಯುಂ ಸುವಸ್ತುವಂ ಸಮಸ್ತ ಶರಣ ವಿತತಿಗಿತ್ತು
ಹೇಮಮುಂ ನವೀನ ರತ್ನ ನಿಕರದಿಂದೆ ತಣಿಯಲಿತ್ತು
ಇರ್ದರೇಕವಿಂಶತಿ ಪ್ರವಾಸರುಂ ನಿವಾಸರಾಗಿ
ಇರ್ದರಲ್ಲಿ ಚಂದ್ರಧರನ ಮುಂದೆ ಪುತ್ರಕಾಮ್ಯರಾಗಿ

ಇರೆ ಹರಂ ಪ್ರಸನ್ನನಾಗಿ ಲಿಂಗದೊಳಗೆ ತೋರುತಲ್ಲಿ
ಪರಮಮೂರ್ತಿ ಪಂಚವದನ ದಶಭುಜಂಗಳೊಪ್ಪುತಲ್ಲಿ
ದೇವರಾಜ ಬೇಡಿಕೊಳ್ಪದೇನನೇಸಿ ಬಂದು ನಿಂದೆ
ಆವ ಕೊರತೆ ನಿನಗೆ ಎನಗೆ ಪೇಳು ಮಗನೆ ಕೊಡುವೆನಿಂದೆ
ಎಂದು ಕರುಣಿಸಲ್ಕೆ ಭೋಂಕನೆಳ್ದು ಬಂದು ದೇವದೇವ
ಕಂದನೋರ್ವನಂ ವಿರಾಜಿಸಲ್ಕೆ ಕರುಣಿಸೆನಗೆ ದೇವ
ಎಂದೊಡರಸ ಕೇಳು ನಿನಗೆ ಪುತ್ರರಪ್ಪ ಭಾಗ್ಯವಿಲ್ಲ
ಕಂಡನೆಂತು ಬರ್ಪನಯ್ಯ ಮುನ್ನ ಕೊಟ್ಟ ಪುಣ್ಯವಿಲ್ಲ
ಎಂದು ಬೆಸಸೆ ದೇವರಾಜನಹಹ ಶಿವನೆ ಲೇಸು ಲೇಸು
ಇಂದು ಬೆಸಸಿತಕ್ಕೆ ಮೆಚ್ಚಿದೆಂ ಪುರಾರಿ ಲೇಸು ಲೇಸು
ನಿಮ್ಮ ಕಣ್ಗಳೆವೆಯ ಕೊನೆಯ ಮೊನೆಯ ಚಲನೆಯಿಂದೆ ಕೋ
ಬೊಮ್ಮ ವಿಷ್ಣು ಇಂದ್ರ ಚಂದ್ರರಾದಿಯಾದ ದೇವಕೋಟಿ
ಪುಟ್ಟುಗೆಂದೊಡೆನಗೆ ಮಾನಿಸಂಗೆ ಮಗನನಿಲ್ಲೆನಲ್ಕೆ
ದಿಟ್ಟ ಮೂರರೊಡೆಯ ನೀನೆ ಬಂದು ಪುತ್ರ ನಿಲ್ಲೆನಲ್ಕೆ
ಸಕಲ ಮುನಿಜನಂಗಳುಂ ಪುರಾಣಪುರುಷವಿತತಿ. ನಗವೆ
ಸಕಲವೇದ ಶಾಸ್ತ್ರವುಂ ಶಿವಾಗಮಂಗಳೆಲ್ಲ ನಗವೆ
ದೇವದೇವ ತೊಳ್ತಿನೊಡನಿದೇಕೆ ಸರಸವಿಂತು ಬೇಡ
ದೇವ ಸುಧೆಯ ಕರುಣೆ ಕರುಣಿಸೆನಗೆ ಬಾಲಚಂದ್ರಚೂಡ
ಎಂಬ ದಿಟದ ಬಿನ್ನಪಕ್ಕೆ ಶಂಭು ಕರುಣದಿಂದೆನೋಡಿ
ನಂಬಿ ದೇವರಾಜನೊಡನೆ ನುಡಿದ ನಕ್ಕು ರಿಂದೆ ಕೂಡಿ
ಧರಣಿಯೊಳ್ಶತಾಯುವೆನಿಸ ಮೂರ್ಖನಪ್ಪ ಕಂದನೋರ್ವ
ಅರಸ ಕೇಳು ಷೋಡಶಾಯುವೆನಿಪ ಸರ್ವ ಕುಶಲನೋರ್ವ
ಈರ್ವರೊಳಗದಾರನೀವೆನೊಲ್ದು ಬೇಡು ಬೇಡೆನಲ್ಕೆ



ಸರ್ವ ಗುರುವೆ ಷೋಡಶಾಯುವೆನಿಪ ಮಗನನೀಯೆನಲ್ಕೆ
ಎನೆ ಸದಾಶಿವಂ ಸುಪುತ್ರನಂ ಧರಾಧಿಪಂಗೆ ಕೊಟ್ಟು
ಮನಸಿಜಾರಿ ನಿಜನಿವಾಸಕ್ಕೆ ಪೋಗೆ ಸಂತವಿಟ್ಟು

ಇತ್ತಲೊಸೆದು ದೇವರಾಜನರಸಿವೆರಸು ಪುರಕೆ ಬಂದು
ಚಿತ್ತದೊಳಗೆ ಪುತ್ರನಳ್ತಿಯೊಲ್ಮೆಯಿಂದೆ ನೆಲಿಸಿ ನಿಂದು
ಚಿಂತೆಗೆಟ್ಟು ಸಂತಸಕ್ಕೆ ಮನವನಿತ್ತು ಮಹಿಮೆವೆತ್ತು
ಸಂತತಂ ವರಪ್ರಸಾದ ಸುಖವನಕ್ಕರಿಂದೆ ಪೊತ್ತು
ಇರಲಿರಲ್ಕೆ ಸಚ್ಚರಿತ್ರ ಶಚಿಗೆ ಗರ್ಭ ಉದಯಿಸಿತ್ತು

ಹರನ ಕರುಣವೆಯ್ದೆ ತರುಣಿಯುದರದೊಳಗೆ ರಂಜಿಸಿತ್ತು
ಹೊರಗೆ ನಳನಳಿಪ್ಪ ದೇಹದವಯವಂಗಳಲ್ಲಿ ಕೂಡಿ
ಮೆರೆವ ತನುಮರೀಚಿಗರ್ಭಸೂಚನೆಗಳನುಂಟುಮಾಡಿ
ನೀಳ ಕುಂತಳಂ ನಿಮಿರ್ಚಿ ತೀವಿ ತೆಕ್ಕೆಗೊಂಡು ನೆಗಳೆ
ತೋಳ ಮೊದಲ ಕರ್ಪು ಕುಸುಮಶರನ ಬಾಳ ಹೊಗರನುಗುಳೆ
ನಡೆಗಳಿಂ ಬಳಲ್ದು ಬೆಮರ ಬಿಂದು ಮುಖದೊಳೊತ್ತುಗೊಂಡು
ನುಡಿಗಳೆಲ್ಲ ಮೆಲ್ಪಿನತ್ತ ಹೊದ್ದಿ ಹೊಳೆದು ತೆಳ್ಪುಗೊಂಡು
ನಯನಕಾಂತಿ ನಸು ಬಳಲ್ದು ಕರುಣರಸವನೊಪ್ಪುಗೊಂಡು
ಬಯಕೆ ಫಲಿಸಿ ಮನವನೊಲಿಸಿ ಚಿತ್ತದೊಳಗೆ ಇಂಬುಗೊಂಡು
ಕನಕಕಳಶಮುಖವು ನೀಲದಚ್ಚ ಮುಚ್ಚುಳೊಪ್ಪುವಂತೆ
ಘನಪಯೋಧರಗ್ರಚೂಡ ಚೂಚಕಂಗಳೊಪ್ಪುವಂತೆ
ಬಾಸೆ ಕಮಳನಾಳದಂತೆ ನಡುವೆ ಸೂಸದಡರೆ
ಲೇಸೆನಿಪ್ಪ ಮಧ್ಯವಳಯವೆಸೆಯಲೋವಿ ತೀವಿ ಪೊಡರೆ
ಹೊಳೆವ ನಾಭಿ ಗುಣ್ಪನೊಕ್ಕು ಮಿಕ್ಕು ಹಿಂಗದೊಳಗುದೋರೆ
ತೊಳಪ ತ್ರಿವಳಿ ಸೀಮೆಗೆಟ್ಟು ಬಟ್ಟ ನಡುವಿನಿಂದೆ ಹಾರೆ
ಇಟ್ಟ ಮುತ್ತಿನೋಲೆ ಚಂದ್ರಬಿಂಬದಂತೆ ಬಳಸಿ ಹೊಳೆಯೆ
ತೊಟ್ಟ ತೊಡಿಗೆ ತಮ್ಮ ತಮ್ಮ ತಾಣದೊಳಗೆ ಬೆರಸಿ ಬೆಳೆಯೆ
ಕೆಂದಳಂಗಳೊಪ್ಪಿ ಘನನಿತಂಬಕಾಂತಿಯುಡಿಗೆ ಮೆರೆಯೆ
ಚಂದದೂರುದಂಡರೋಚಿ ಕಣ್ಗೆ ಸವಿಯ ಧಾಳವೀಯೆ
ಹಜ್ಜೆಯಿಂದೆ ಹಂಸೆ ಮುಂಚೆ ಮೆಲ್ಲಮೆಲ್ಲನಡಿಯನಿಡುತೆ

ಗುಜ್ಜುಗೊಂಡ ನಡೆಗಳಡಿಗೆ ತೊಡವೆನಲ್ಕೆ ನಡೆದು ನಿಲುತೆ
ಬಪ್ಪ ರೂಪು ದೇವರಾಜನೃಪನ ಕಣ್ಗೆ ನಯಮನುಗುಳೆ
ಒಪ್ಪುವಬಳೆಯುರ್ಕೆಳಿಂಬುಗೊಂಡು ನಡೆವ ಚೆಲ್ವು ನೆಗಳೆ

ಇಂತು ಶಚಿಗೆ ಸಾನುರಾಗದಿಂದೆ ಗರ್ಭ ಚಿಹ್ನವಾಗೆ
ಮುಂತೆ ಬರಬರಲ್ಕೆ ಪಕ್ಷ ಮುಖದ ನವಮ ಮಾಸವಾಗೆ
ಬೀಜದೊಳಗೆ ಕಲ್ಪತರುವಿನಂಕುರಂ ವಿರಾಜಿಪಂತೆ
ಓಜೆಯಿಂದೆ ಮೇಘದೊಳಗೆ ಚಂದ್ರಕಾಂತಿ ಬೆಳಗುವಂತೆ
ಚಂದ್ರಕಾಂತಘಟದ ನಡುವೆ ಬೆಳಗುತಿರ್ಪ ಪರುಸದಂತೆ
ಸಾಂದ್ರ ಭಕ್ತಿಯುದರದೊಳಗೆ ತೊಳಗುವರಿವಿನುಳುಮೆಯಂತೆ
ಕೊಳದ ಕಮಳದುದರದೊಳಗೆ ಬಳೆವ ಬಾಲಹಂಸನಂತೆ
ತಿಳಿದ ಗರ್ಭದೊಳ್ಸುವಾಂಸಾರ ಹೃದಯನೊಪ್ಪುತಿಂತೆ
ಉದಯವಾಗಲೊಂದು ನೆನೆದು ನೋಡಿ ಜನನಿಯುದರದೊಳಗೆ
ಉದಯಿಸುತ್ತುಮಿರ್ದನಖಿಳಸಂಪದಂ ಧರಿತ್ರಿಯೊಳಗೆ
ಸಕಲ ಕರಣ ಹೃದಯದಲ್ಲಿ ಭಕ್ತಿಯಲ್ಲಿಯುದಯವಾಗೆ
ಸಕಲ ಬುಧರ ತಿಳಿದ ಚಿತ್ತದಲ್ಲಿ ಪುಣ್ಯ ಉದಯವಾಗೆ
ಮಳೆಯ ದೇಶದೊಳಗೆ ಹಿಂಗದುತ್ಸವಂಗಳುದಯವಾಗೆ
ಇಳೆಗೆ ತಣ್ಪು ಸೊಂಪು ಕೆಂಪು ನುಣ್ಪು ಬಿಣ್ಪು ಉದಯವಾಗೆ

ಉದಯವಾದನಮಮ ವರಕುಮಾರಕಂ ಸುಗರ್ಭದಿಂದೆ
ಉದಯವಾದನರುಣ ತರುಣ ತರಣಿಯುದಯಿಪಂದದಿಂದೆ
ಆಗಳಲ್ಲಿ ಗುಡಿಯನೆತ್ತಿ ದಾದಿಯರ್ನೃಪಂಗೆ ಪೇಳೆ
ರಾಗ ಉಕ್ಕಿ ಮಿಕ್ಕು ತನುವನುಣ್ಮಿ ಪೊಣ್ಮಿ ಪುಳಕವೇಳೆ
ದೇವರಾಜನಲ್ಲಿ ಹೊದ್ದುದಂ ತೆರಲ್ಚಿ ಗುಡಿಯನೆತ್ತಿ
ಭಾವಕೀ ಜನಂಗಳುರ್ಬಿ ಕೊರ್ಬಿ ಮುಡಿಯ ಗುಡಿಯನೆತ್ತಿ
ಪುರಕೆ ಪರಕೆ ಗತಿಯೆನಿಪ್ಪ ಬಾಲಕಂಗೆ ಗುಡಿಯನೆತ್ತಿ
ದುಂದುಭಿಸ್ವನಂಗಳೊಳ್ಮೃದಂಗ ಶಂಖನಾದದೊಳಗೆ
ಬಂದು ನೆರೆವ ವಂದಿಜನದ ಜಯ ಜಯ ಪ್ರಣಾದದೊಳಗೆ
ಪುಂಜನಂಗಳೊಳಗೆ ಹಾಲು ತುಪ್ಪದೋಕುಳಿಗಳನಾಡಿ
ಪರಮಭಕ್ತನೆನಿಪ ಶಿಶುಗೆ ಜಾತಕರ್ಮವೆಸೆಯೆ ಮಾಡಿ



ಮಳೆಯ ದೇಶದರಸು ಮಳೆಯ ರಾಜನೆಂಬ ಪೆಸರನಿಟ್ಟು
ಇಳೆಯ ಸಕಲ ಭಕ್ತಜನಕೆ ರಾಗದಿಂದ ಪೂಜೆಗೊಟ್ಟು
ತನ್ನ ದೇಶವೆಲ್ಲಮಂ ಮನೋರಥಂಗಳಿಂದೆ ತಣಿಪಿ
ತನ್ನ ಪುರದ ಪರಿಜನಂಗಳಂ ವಿಳಾಸದೊಳಗೆ ನೆರಪಿ
ಮಗನ ಹೆಸರ ಕೆರೆಯನಾರವೆಗಳನೊಪ್ಪದಿಂದಮರ್ಚಿ
ಮಿಗಿಲೆನಿಪ್ಪ ಛತ್ರ ಶಿವಪುರಂಗಳಿಂದೆ ಹತ್ತೆ ಸಾರ್ಚಿ
ಊಟ ಮೀಹ ಓಲಗಂಗಳೊಳಗೆ ಮಿಗುವ ಮಗನ ಮಾತು
ನೋಟ ಕೂಟ ಮಾಟದೊಳಗೆ ಸೊಗಯಿಸಿರ್ಪ ಮಗನ ಮಾತು
ಎಸೆವ ಜಲಧಿ ಪರಿವೃತಾವನೀಶ ಮಕುಟ ಚರಣನಾಗಿ
ವಸುಮತೀ ತಳಕ್ಕೆ ತಾನೆ ರಕ್ಷೆ ಶಿಕ್ಷೆಗೊಡೆಯನಾಗಿ
ಪುತ್ರನಾದನೆಂಬ ಸಂತಸಕ್ಕೆ ಮೇರೆ ಇಲ್ಲದಿರ್ದು
ಮಿತ್ರನುದಯದಬ್ಜದಂತೆ ಚಿತ್ತವಲರ್ದು ಸುಖದೊಳಿರ್ದು
ತಿಳಿದು ಮನದೊಳುಳಿದು ಮೀರಿ ಕಳೆದು ಸುಖದೊಳೊಪ್ಪಿ ಸಂದು
ಮಳೆಯ ದೇಶದೊಳಗೆ ದೇವರಾಜನಿಂತು ಒಪ್ಪಿ ನಿಂದು

**ಪ್ರಥಮಸ್ಥಲ ಸಂಪೂರ್ಣ.**

## ದ್ವಿತೀಯಸ್ಥಲ.

ವೃತ್ತ॥ ಪಡೆದೆಂ ಶಂಕರನಿಂ ಸುಪುತ್ರನೆನುತ್ತುಂ ಚಿತ್ತದೊಂದಳ್ತಿನೊ
ವರ್ಣಿಸಲ್ಕಾಡಿಪ ತಾಡಿಸುತ್ತೆ ಪುಳಕಂ ಪೊಣ್ಮುತ್ತೆ ಸಂತೋಷದಿಂ
ಗುಡಿಗಟ್ಟುತ್ತವೆ ದೇವರಾಜ ಕುಲದೊಳ್ ಪುತ್ರೋತ್ಸವಪ್ರೀತಿಯಿಂ
ನುಡಿಯುತ್ತುಂ ಸಲೆ ದೇವರಾಜನೊಲವಿಂದೊಪ್ಪಿರ್ದನಾಸ್ಥಾನದೊಳ್

**ಗದ್ಯ॥**—ಇಂತು ಸಕಲ ರಾಜರಾಜೇಂದ್ರ ಮಕುಟಮಣಿ ನಿಕರ ವಿರಾಜಮಾನ ಘನ ಪಾದಪಯೋಜನಪ್ಪ ದೇವರಾಜಂ ಸಕಲಸಾಮಂತ ರಾಜಪುತ್ರ ದಂಡನಾಥ ಮಂಡಳಿಕ ಮಂತ್ರಿ ಮುಖ್ಯರ್ಗೆ ಬೀಳ್ಕೊಟ್ಟೋಲಗಮಂ ಪರಿಯಲೀಳ್ದು ಸಭಾಭವನದಿಂ ಪೊರಮಟ್ಟಂತಃಪುರಕ್ಕೆ ನಡೆತಂದು ಸಾಧ್ವಿಯಪ್ಪ ಶಚೀದೇವಿಯ ನಗೆಮೊಗಮಂ ದರಹಸಿತವದನದಿಂ ನೋಡುತ್ತೆ ಸಿಂಹಾಸನಾಸೀನನಾಗುತ್ತೆ ಮಳೆಯರಾಜ ದೇವರ ಸಮಯವೇನೆಂದು ಬೆಸಗೊಳ್ವುದುಂ ಕೇಳಿ ಕೆಳದಿಯರ್ಕೈಮುಗಿದು ದೇವದೇವ ಶಿವಪ್ರಸಾದ ನವನೀತಮಂ ಮೊಲೆವಾಲೊಡನಾರೋಗಿಸಿ ಶಿವಧ್ಯಾನ ನಿದ್ರಾಮುದ್ರೆಯಿಂ ತಾಯ ಮಗುಲೊಳ್ತಣ್ಣನಿರ್ದಪನೆಂದು ಬಿನ್ನವಿಸಿದ ಸವಿನುಡಿಗಳಂ ಕೇಳ್ದು ಕರ್ಣಕ್ಕಮೃತಮಂ ಚಲ್ಲಿದಂತಾಗೆ ತನುಗೆ ತಣ್ಪಂ ನೀಡಿದಂತೆ ಕಣ್ಗೆ ಚೆಲ್ವಂ ಸೂಸಿದಂತೆ ಉತ್ತರೋತ್ತರಸುಖತರಮನೀಯೆ ತಾನುಂ ಶಚೀದೇವಿಯುಂ ಪುತ್ರನಂ ಸ್ನೇಹರಸಂ ತೋರೆ ದೋರೆಗಣ್ಗಳಿಂ ನೋಡಿ ನೋಡಿ ಮುಂಡಾಡಿ ಮುದ್ದುಗೆಯ್ದು ಉರದೊಳೊತ್ತಿ ದಯಾರಸವನೆರೆದು ಸಲಹುವಂತೆ ಸತ್ಯಕ್ಕೆ ಶಾಂತಿಯನೂಡಿ ಸಾಗಿಸುವಂತೆ ಸಾಮರ್ಥ್ಯಕ್ಕೆ ತೇಜಮನಿತ್ತೋವುವಂತೆ ಸ ಖಕ್ಕೆ ಸವಿಯಂ ಸಲಿಸಿ ಬೆಳೆಯಿಪಂತೆ ಭಕ್ತಿಗೆ ಶಿವಜ್ಞಾನಮನಿತ್ತು ರಕ್ಷಿಸುವಂತೆ ಸುಕುಮಾರ ಕುಮಾರನಂ ಸಲಹುತ್ತಿರೆ

ಸುರತರುವಿನಂಕುರದಂತೆ ಪುಣ್ಯದ ಕೊನರಿನಂತೆ ಭಕ್ತಿಯ ಕುಸುಮದಂತೆ ಮುಕ್ತಿಯ ಫಲದಂತೆ ಬಾಲಚಂದ್ರನಂತೆ ಕಳಹಂಸನಂತೆ ಕಾಮಧೇನುವಿನ ವತ್ಸನಂತೆ ಪರುಷದ ಮರಿಯಂತೆ ನಳನಳಿಸಿ ಬೆಳೆಯುತಿರ್ಪ ಮಳೆಯರಾಜ ದೇವಂ ಶೈಶವಲೀಲೆಯೊಳ್ ಮುಂದೆ ತನಗೆ ಪ್ರತ್ಯಕ್ಷನಪ್ಪ ಶಿವನೇರಿ ಬರ್ಪ ನಂದಿಯ ನಿಲವಂ ತೋರುವಂತಂ



ಬಳಿಕ್ಕೆ ಪ್ರದಕ್ಷಿಣಕ್ಕೆ ಪಡಿಸಣಮಂ ನೋಡುವಂತೆ ಪಟ್ಟಡಿ ಇಟ್ಟು ಶಿವಸ್ತುತಿಯಂ ಶ್ರವಣಮಂ ಮಾಡುವಂತೆ ತೊದಳ್ನುಡಿಗಳಂ ನುಡಿದು ದೇಶಂಬೆರಸು ಕೈಲಾಸಕ್ಕೀ ತೆರದೊಳೆತ್ತಿಕೊಂಡೊಯ್ವೆನೆಂಬುದಂ ತೋರುವಂತೆ ಮುಂದಿರ್ದ ಹಾಲಹೊನ್ನ ಬಟ್ಟಲನೊಯ್ಯನೆತ್ತಿ ನಿಂದಿರುತ್ತುಂ ಜನನಮರಣ ಮಾಯೆಯನೀ ತೆರದೊಳೊದೆವೆನೆಂಬಂತೆ ಮುಂದಿರ್ದ ಜಲಪಾತ್ರೆಯ ನೊದೆವುತುಂ ತನಗೆ ಹದಿನಾರುಂ ವರುಷವೆಂದುಮ್ಮಳಿಸುವ ತಾಯ್ತಂದೆಗಳ ಮೊಗಮಂ ನೋಡಿ ನಗುವಂತೆ ಮುಗುಳ್ನಗೆಯಂ ನಗುತ್ತುಂ ಶಿವಾರ್ಚನೆಯಂ ಮಾಡಲ್ವೇಳ್ಪುದೆನ್ನಂ ಬೇಗಂ ಬಳೆಯಿಸೆಂದು ಶಿವಂಗೆ ಮುನಿದು ಮೊರೆಯಿಡುವಂತೆ ಅಳುತ್ತುಂ ಮುಂದೆ ಚಂದ್ರಧರನ ಬಲವಪ್ಪ ಚರಣಂಗಳಂ ಮುದ್ದಾಡಿಸಂತುಂಗುಟಮಂ ಸವಿಯುತ್ತುಂ ಮೆಲ್ಲಡಿಗಳ ವಲ್ಲಭಂ ಕಿರುದೊಡೆಗಳ ಕೌತುಕಂ ನುಣ್ದೊಡೆಗಳ ನವೀನಂ ಸುಳಿನಾಭಿಯೆಳೆಯಂ ನಳಿತೋಳ್ಗಳ ನಲಿವುಂ ತೆಕ್ಕಳಿಪ ಕವರುಂ ಮುದ್ದುಮೊಗದ ಮಾಣಿಕಂ ಮೊಲೆವಾಲ ಬಾಯಿಗಂ ಬೆಣ್ಣೆಯ ಬೆಳೆ ಸಿರಿಪಂತಂ ನುಣ್ಗುರುಳ ನೀರಂ ಅರಳೆಲೆಯ ಶರಮು ಹಂಸಂ ಮಾಗಾಯ್ಗಳ ಮಹಿಮಂ ಭಸಿತದ ರಕ್ಷೆಯಕ್ಷಯಂ ನೀಲ ಬೊಟ್ಟಿನ ನಿರ್ಭಯಂ ಅಂಜನದ ನಿರಂಜನಂ ಪುಲಿಯುಗುರ ಸುಲಲಿತಂ ನೇವಳದ ಭಾವಕಂ ಕರವಳಯದ ಪರಬೊಮ್ಮಂ ಮುದ್ರಿಕೆಯ ಭದ್ರಗುಣಂ ಉಡೆವಣಿಯ ಚಿಂತಾಮಣಿಯುಂ ಪೊಂಗೆಜ್ಜೆಗಳ ಪರುಷಂ ಅಂದುಗೆಯಾನಂದ ನಿಧಿ ಎನಿಪ ಮಳೆಯರಾಜಂ ಬಾಲ್ಯವನನುಕ್ರಮದಿಂದುಳಿದು ಪಲವು ದಿನಂಗಳಂ ಕಳೆದು ಪ್ರಾಯೋಚಿತ ದಿವ್ಯ ವಸ್ತ್ರಾಭರಣ ಯಕ್ಷಕರ್ದಮಾದಿ ಲೇಪನಂ ಮಾಡಿ ಸಕಳ ಭೋಗಂಗಳಂ ತಳೆದು ಶಸ್ತ್ರಶಾಸ್ತ್ರ ಸಂಗೀತ ಸಾಹಿತ್ಯ ಕಾವ್ಯ ನಾಟಕ ತುರಂಗಮಾತಂಗಾರೋಹಣಾದಿ ಸಕಲ ವಿದ್ಯಾಪರಿಣತನಾಗುತ್ತೈದಾರೇಳೆಂಟು ಪತ್ತು ಪದಿನೈದು ವತ್ಸರಂಬರಂ ನೆರೆದು ನಳನಳಿಪ ಸೌಕುಮಾರ್ಯದಿಂ ತೊಳ ತೊಳಿಪ ರೂಪಿಂ ಥಳಥಳಿಪ ತೇಜದಿಂದೊಪ್ಪುತ್ತಿರಲೊಂದು ದಿವಸಂ

ವಸಂತಮಾಸದೊಳ್ ಸಕಲರಾಜೇಂದ್ರನಪ್ಪ ದೇವರಾಜಂ ವೈಹಾಳಿವಿನೋದಕ್ಕೆ ಪೊರಮಡಲೆಂದು ಮಂತ್ರಿಗಳೆಲ್ಲರ್ಗಂ ಬೆಸಸುವಲ್ಲಿ ಕುಮಾರಕಂಠೀರವಂ ಸುಕುಮಾರ ಸಾರ್ವಭೌಮಂ ಶಿವಭಕ್ತಿಭೂಷಣಂ ಎನಿಪ್ಪ ಮಳೆಯರಾಜದೇವಂ ತಾನುಂ ಬಂದಪೆನೆಂಬ ಬಿನ್ನಪಮಂ ಮಂತ್ರಿಗಳಿಂದ

ರುಪೆ ದೇವರಾಜಂ ತನಯನಂ ತಳ್ಕೈಸಿ ಹರುಷ ಪುಳಕದಿಂ ಪೂರೈಸಿ ತನಿ
ನೇಹದಿಂ ಹಾರೈಸಿ ನೀನಿಲ್ಲದ ವಿನೋದಂ ತಾನೇವುದಯ್ಯ ನಡೆಯಯ್ಯ
ನಡೆ ಮಗನೆ ಮಳೆಯರಾಜದೇವ ಬಿಜಯಂ ಗೆಯ್ವುದೆಂದು ಗಲ್ಲಮಂ
ಪಿಡಿದು ತಂಬುಲಮನಿಕ್ಕಿ ಮೂರ್ಧ್ನಿ ಘ್ರಾಣಮಂ ಮಾಡಿ ಬರಲ್ವೇಳ್ದು
ಬೆಸಸೆ ನಲಿನಲಿದು ಕುಮಾರಕಂ ಕಠಾರಿಯ ಕೋಲಂ ತಿರುಹುತ್ತೊಂದೆ
ರಡು ಜಂಪೆಯ ಗತಿಯಂ ಸರಳಿಸಿ ನೋಡುತ್ತಂ ಸಿಂಗರದ ಮನೆಗೆ
ನಡೆತಂದಿಕ್ಕಿದ ಪಟ್ಟಗದ್ದುಗೆಯೊಳ್ ಬಿಜಯಂಗೆಯ್ದು ಕಮನೀಯ
ಕುಮಾರಂಗೆ ಸಚಿವರಾಜಪುತ್ರ ಕಸ್ತೂರಿ ತಿಲಕಮಂ ಲಲಾಟದೊಳ್ಕೈಗೊ
ಳಿಸಿ ಪರಿಮಳವನುಗುಳ್ವ ಇರುವಂತೆ ಸಂಪಿಗೆಯರಲ್ಗಳಂ ಸಿರಿ ಮುಡಿ
ಯೊಳ್ತುರುಂಬಿ ರತ್ನಾವತಂಸಮಂ ಕರ್ಣಯುಗಳಕ್ಕಳವಡಿಸಿ ದಿವ್ಯ ಚಂದ
ನಮನುದ್ವರ್ತನಮಂ ಮಾಡಿ ತೋರಹಾರಮಂ ಕೊರಳೊಳಿಕ್ಕಿ ಪದಕಮಂ
ಪೇರುರದೊಳಿರಿಸಿ ಬಾಹುಪೂರಯಮನಿಕ್ಕಿ ಸಪುರಮಂ ಬಿಳಿಯಂಬರಂ
ಬಿಗಿದುಡಿಸಿ ಸುವರ್ಣ ಪಳಿಯಂ ಹೊದೆಯಿಸಿ ಕುಮಾರ ಕುಸುಮಾಯು
ಧನೆಂಬ ಬಿರುದಿನ ತೊಡರನೆಡಗಾಲೊಳಿಟ್ಟು ಸಚಿವ ರಾಜಪುತ್ರರ್ಕೈ
ಗೊಟ್ಟು ಬರೆ ಪಡಿಯರರ್ನೆಲನುಘ್ಘಡಿಸೆ ವಿಳಾಸದಿಂ ನಡೆತಂದು ಮುಂದೆ
ರಾಜಾಂಗಣದೊಳ್ ಹೊನ್ನ ಹಲ್ಲಣದಿಂ ರನ್ನದ ಸಕ್ಕರಿಕೆಯಿಂ ನೆಲನಂ
ಚುಂಬಿಸುವ ಚಮರದಿಂ ಮಾಣಿಕ್ಯದ ಮೊಗವಾಡದಿಂ ಮುತ್ತಿನ ತೋರ
ದಂಡೆಯಿಂ ಹೊಕ್ಕಳ ಹೊನ್ನ ಗಂಟೆಯಿಂ ನಟ್ಟ ಕಿವಿಗಳಿಂ ಹಳಿಹಳಿಪ
ಕಣ್ಗಳಿಂ ಉಚ್ಚೈಃಶ್ರವಮಂ ಸೀಕ್ಕೈವ ತುರಂಗದೊಳ್ ಕುಳಿತು ಕಂಧರವ
ಬೋಳೈಸುತ್ತಿರಲಲ್ಲಿಗೆ ಬಿಜಯಂಗೆಯ್ದು ಹಂಕಣಿಯ ಹಂಗಿಲ್ಲದೆ ಭೋಂಕನೇ
ರಿಬರೆ ಪುರಜನಂ ಕೈಮುಗಿಯೆ ಕವಿಗಳ್ಕೈವಾರಿಸೆ ವಂದಿಗಳ್ಸಂದಣಿಸಿ ಪೊಗಳೆ
ಹರಭಕ್ತರ್ಪರಿಸೆ ಪಲ್ಲವ ಸತ್ತಿಗೆ ಮೇಲ್ಮುಸುಗೆ ನಿಸ್ಸಾಳಧ್ವನಿ ಪೊಣ್ಮೆ ಕಹ
ಳಾರವಮುಣ್ಮೆ ಉದಯಗಿರಿಯನೇರಿದ ಸದಮಳ ಸೂರ್ಯನಂತೆ ಬೆಳ
ಬೆಳಗುತುಂ ಗಳಗಳನೆ ನಡೆತಂದು ದೇವರಾಜನೇರಿದ ಚೌದಂತನ
ಮುಗ್ಗುಲೊಳೊಗ್ಗಿ ನಿಂದಿರೆ ಕುಮಾರನಂ ನೋಡಿ ಹರುಷಂ ಮಿಕ್ಕು ಮುಗು
ಳ್ನಗೆ ನಗುತ್ತಂ ನಡೆಯ ವೇಳೆನೆ ಸಿಂಧುರದ ಸಂದಣಿಯಿಂ ತುರಂಗ
ದೊತ್ತರದಿಂ ವರೂಥದ ವೀಥಿಯಿಂ ಪದಾತಿಬಲದೊತ್ತೊತ್ತೆಯಿಂ ಕ್ಷೀರ
ವಾರಾಶಿ ಮೇರೆದಪ್ಪಿದಂತೆ ಪುರಮಂ ಪೊರಮಟ್ಟು ವೈಹಾಳಿಯ ಬಯಲ್ಗೆ
ನಡೆತಂದು ದೇವರಾಜಂ ಮಗನೇರಾಟಮಂ ನೋಡುವಪ್ಪರಿಂ ಕರಿಘಟೆ
ಗಳಂ ಸುತ್ತಂ ನಿಲಿಸಿ ಮುಂದೆ ನಿಂದ ರಾಜಪುತ್ರರ್ಗೆ ಕೈವೀಸಲೊಡಂ



ಸಿಂಹದ ಜಂಗುಳಿ ಶರಭನಂ ಕೆಣಕುವಂತೆ ತನತನಗೆ ಕುಮಾರನಂ
ಮೂದಲಿಸಿ ಕಾಳಗಂಡೆಗೆಯೆ ಮುಳಿದು ನೋಡಿ ಮಳೆಯರಾಜಂ ಘೂಡು
ಘೂಡಿಸಿ ಪಿಡಿದ ವಾಘೆಯಂ ಬಲಿಗಯ್ಯ ಸಬಳದ ಪೊಟ್ಟೆಯಿಂ ಚಿಲ್ವ
ದಿಟ್ಟೆಯಿಂ ಮಾಯೆಯ ಕುದುರೆಯಂ ರೂಹುಗೊಳಿಸಿದ ವಿದ್ಯಾಧರನಂತೆ
ತುಡುಂಕದ ಮುನ್ನಂ ಮನದೊಡನೆ ಮಣಿವ ತಿರುಪದ ಮುನ್ನಂ ಕೆಯ್ಯೊ
ಡನೆ ಬರ್ಪ ಪುಬಿಂನ ಜರ್ಬಂ ಪರ್ವತಮನಡರ್ವ ಜಾತಿಹಯದೆರಸಿ
ಡಬೆಲಕ್ಕೆ ತಿರುಪಿ ನೂಂಕಿ ಸರಿಸಬೀದಿಯೊಳ್ಬಿನ್ನಟ್ಟಿ ಮುಟ್ಟಿ ಮಿಂಚನೇ
ರಿದ ಮೇಘವಾಹನನಂತೆ ರಾಯ ರಾಹುತರನಟ್ಟಿ ತಿವಿದು ರಾಜಪು
ತ್ರರಂ ಬೆಂಕೊಂಡು ಸುಳಿದ ಕುದುರೆಯಂ ಸೆಳೆದೀಡಾಡಿ ಮೂದಲಿಸಿ
ಬಂದ ಮನ್ನೆಯ ರಾವುತರಂ ಬಲ್ಲೆಯದ ಪಟ್ಟಸದೊಳುಂಡಿಗೆಯೊತ್ತಿ ಬಿಟ್ಟ
ನಿಚ್ಚಟದ ರಾವುತರಂ ಲಚ್ಚಣಂದೆಗೆದು ಮುಂಗುಡಿಯ ರಾವುತರಂ
ಭಂಗಿಸಿ ತಿವಿದು ತನಗಿದಿರಂ ಕಾಣದೆ ನಿಂದಿರ್ದು ತನ್ನೇರಾಟಕ್ಕೆ ದಿಟ್ಟ
ಯಾದಪುದೆಂದು ಭೂವನಿತೆ ತೂಪಿರಿದಂತೆ ಖುರಪುಟದಿಂ ನೆಗೆದ ಧೂಳೀ
ಜಳಂ ಮುಖದೋಳ್ಮೆರೆಯೆ ಮಾಸಿದ ಚಂದ್ರನಂತೆ ಬಳಲ್ದ ಬಾಲಾರ್ಕ
ನಂತೆ ತಿರುಗಿ ಬಂದು ಮಳೆಯರಾಜಂ ದೇವರಾಜಂಗೆರಗಿ ಮಗನಂ ನೋಡಿ
ಮನದೊಳ್ತೂಪಿರಿದು ಕಣ್ಣೊಳಪ್ಪಿ ಹೊದೆದ ಪಟ್ಟಾವಳಿಯಂ ನಿವಾಳಿಸಿ
ಬಿಸುಟು ವೈಹಾಳಿ ವಿನೋದ ಸುಖಸಮಾಪ್ತಿ ಚಿತ್ತಂ ತಿರುಗಿ ಸರ್ವಸಂ
ಭ್ರಮದಿಂ ಮಳಯಾವತಿಪುರಮಂ ಪೊಕ್ಕರಮನೆಗೆ ಬಂದು ಸಕಲ ಸಚಿವ
ಸಾಮಂತ ರಾಜಪುತ್ರ ದಂಡನಾಥಯೂಥಮಂಡಳಿಕಮಂತ್ರಿಮುಖ್ಯರ್ಗೆ
ಬೀಳ್ಕೊಟ್ಟು ಪಟ್ಟದಾನೆಯಿಂದಿಳಿದು ತಾನುಂ ಕುಮಾರನುಂ ಸಂತಸದೊ
ಳಂತಃಪುರಕ್ಕೆ ನಡೆತಂದಿಕ್ಕಿದ ಪಟ್ಟಗದ್ದುಗೆಯ ಮೇಲೆ ಕುಮಾರನಂ
ಬಿಜಯಂ ಗೈಸಿ ಕೋಮಳಾಂಗನೆಯರಿಂ ಮಂಗಳಾರತಿಯನೆತ್ತಿಸಿ ದೇವ
ರಾಜನುಂ ಶಚಿದೇವಿಯುಂ ಮಗನ ಯವ್ವನೋದಯಮಂ ಶೃಂಗಾರದೇ
ಳ್ತರಮಂ ಸೌಕುಮಾರ್ಯದ ಸಂದಣಿಯಂ ಕಂಡು ಹೊರೆಯೇರಿ

ಶಿವಂ ಕೊಟ್ಟಾಯುಮಂ ನೆನೆದು ಹೊರೆ ಇಳಿದು ಮನವಳಿದು
ಬೆಂಕಿಯೊಳ್ಬಿಸುಟ ಮಲ್ಲಿಕಾಮಾಲೆಯಂತೆ ಕಾಳ್ಗಿಚ್ಚಿನಿಂದರೆ ಬೆಂದ ಹಂಸ
ಮಿಥುನದಂತೆ ಕಕ್ರನೆ ಸುಯಿದು ಅಂತಸ್ಥ ಸಂತಾಪ ಶಿಖಿಯಿಂ ಕುಕ್ಕುಳಂ
ಕುದಿದು ಶೋಕರಸ ಉರ್ಕಿ ಪರಿದೀರ್ವರುಂ ಕಣ್ಣನೀರಿಂ ಮುಂಗಾಣದೆ
ಬರೆದಂತೆ ಶೋಕದಿಂ ಕರುವಿಟ್ಟಂತೆ ನಿಂದಿರೆ ಮಳೆಯರಾಜಂ ಕಂಡು

ಮನದೊಳ್ಮಿಂದು ಕೌತುಕಂ ಬಟ್ಟಿದೇನಿದೇನದ್ಭುತ ರಸದ ನಡುವೆ ಮನದೊಳ್ಕೊಂಡು ಕೌತುಕಂ ಬೆಟ್ಟಿದೇನಿವೇನವೃತ ರಸದ ನಡುವೆ ವಿಷಂ ಬೆಳಗಿನ ನಡುವೆ ಕತ್ತಲೆ ಬೆಳ್ದಿಂಗಳೊಳ್ಕೈಳ್ಪುರಿ ಶಿವಭಕ್ತರ ನುಡಿಯೊ ಳ್ಪುಸಿ ಪಟ್ಟವಂತೆ ಸಮಸ್ತರಾಜ್ಯಸಂಪದದೊಳೆನ್ನಂ ಮುಂದಿಟ್ಟುಕೊಂಡಿ ರ್ದ ಸುಖಸಮಯದೊಳ್ ಶೋಕಂ ಪುಟ್ಟುವುದಿದೇನು ಕಾರಣಂ ಅದಂ ಪೇಳ್ದಲ್ಲದೆ ಆರೋಗಣೆಯಂ ಮಾಡೆನೆಂದು ನುಡಿದ ಮಳೆಯದೇವಂಗೆ ತಂದೆ ತಾಯ್ಗಳ್ಕೆತ್ತೆ ಮತ್ತಳುತ್ತುಂ ಕಣ್ಣೀರನುಗುಳುತ್ತುಂ ಕೇಳೆಲೆ ಕುಮಾರ ನೀಂ ವರಪುತ್ರಂ ನಿನಗೆ ಶಿವಂ ಕೊಟ್ಟಾಯು ಪದಿನಾರುಂ ವರುಷಂದಿಂಗೆ ಪದಿನೈದು ವತ್ಸರಂ ಕೀವಿದುದಿನ್ನೊಂದು ವರುಷಕ್ಕೆ ನಿರ್ವಾಣಪದಂ ನಿನಗೆಂದೊಟ್ಟಯೊರಲುವ ಪಿತಮಾತೆಯರಂ ಅನುನ ಯದಿಂ ಸಂತೈಸಿ ಪಿರಿದಪ್ಪ ಕಾರ್ಯವೆಂದಿರ್ದೆ ನೋಡ ಇದಕ್ಕಿನಿತೇಕೆ ಕೊಟ್ಟ ಶಿವನಿರ್ದಪಂ ಪಡೆದವರ್ನೀವಿರ್ದಪಿರಿ ಪುಟ್ಟಿದವಂ ನಾನಿರ್ದಪೆಂ ಇನ್ನೊಂದು ವರುಷವಿರ್ದಪುದು ಶಿವಂ ಕರುಣಿ ಎನಗೆ ಸಾವಿಲ್ಲವೆಂದು ಸಂತೈಸಿ

ಧೈರ್ಯನಿಧಿ ಶಿವಜ್ಞಾನ ಸಂಪನ್ನಂ ಸಾಹಸಾಭರಣಂ ಸುಖ ಮಜ್ಜನಂ ಮಾಡಿ ತಾಯ್ತಂದೆಗಳೊಡನಮೃತಾನ್ನವನಾರೋಗಿಸಿ ಪಚ್ಚ ಕರ್ಪೂರದ ವೀಳೆಯಮಂ ಕೊಂಡು ಮಲ್ಲಮೇಷಮಹಿಷ ಕುಕ್ಕುಟಾದಿ ಸಕಲ ಯುದ್ಧಂಗಳಂ ನೋಡುತುಂ ಗೀತವಾದ್ಯನೃತ್ಯಂಗಳಂ ಕೇಳುತುಂ ದೇವರಾಜನಿಂ ಶೈವೋಪದೇಶಸಂಪನ್ನನಾಗಿ ಕೆಲವು ದಿನಂಗಳಂ ಕಳೆಯೆ ಪಿತಮಾತೆಯರೆಲೆ ಮಗನೆ ನಿನಗಿನ್ನರುದಿಂಗಳೆಂದಡರಿಯದಂತಿರ್ಪಂ ಮೂರು ತಿಂಗಳೆನೆ ಮೌನದಿಂದಿರ್ಪಂ ತಿಂಗಳೆನೆ ಪಿಂಗದೆ ಸುಮ್ಮನಿರ್ಪಂ ಏಳು ದಿನಮೆನೆ ಕೇಳದಂತಿರ್ಪ ನಾಳೆ ಮಗನೆ ತಪ್ಪದು ನೀಂ ಮಾಳ್ಪ ಮನೋರಥಂಗಳಂ ಮಾಡೆಂದು ದುಃಖಜಲಭರಿತನಯನ ಪುಟರಾಗುತುಂ ಪೇಳೆ

ಕೇಳ್ದಂದಿನಿರುಳ್ ಸಕಲ ಶಿವಭಕ್ತರಂ ಬಿಜಯಂಗೈಸಿ ತಂದು ಶಿವ ರಾತ್ರಿಯಂ ಮಾಡಿ ಮರುದಿನ ಉದಯ ಸಮಯದೊಳೇಳ್ದು ಶುದ್ಧಾಂಗ ನಾಗಿ ಭಸಿತೋದ್ಧೂಳನಂ ಮಾಡಿ ರುದ್ರಾಕ್ಷಿಗಳಂ ಧರಿಸಿ ಪರಿಚಾರಕರ ನೆಳವಡಿಸಿ ಪುರದ ಕೆಲದ ಕೇಳೀವನದ ಸ್ವಯಂಭುಲಿಂಗದ ಸಮೀಪಕ್ಕೆ ಬಂದು ತನ್ನ ಮನದನ್ನರಿರ್ಬರಂ ನಿರ್ಮಲ ಕಮಲ ಮುಕುಳದಳಂಗಳಂ ತರಲ್ಕೆ ನಿಯಾಮಿಸಿ ನದಿಯಗ್ಗವಣೆಯಂ ತಾನೆ ತಂದು ಸಹಸ್ರಾಭಿಷೇಕಮ



ನೇಕ ಚಿತ್ರದೊಳ್ಮಾಡಿ ಮಜ್ಜನಕ್ಕೆರೆದು ಕುಂಕುಮ ಚಂದನಾನುಲೇಪ ನಂಗಳಂ ಸುಖದೊಳಿತ್ತು ಮಘಮಘಿಪ ಧೂಪಮನಿಕ್ಕಿ ಥಳಥಳಿಸುವಾರತಿ ಎತ್ತಿ ಭಕ್ತಿ ಸಹಿತಮೃತಾನ್ನಮನಾರೋಗಿಸಲಿತ್ತು ಪಚ್ಚೆಕರ್ಪೂರ ತಾಂಬೂಲಮನಿತ್ತು ಪ್ರದಕ್ಷಿಣ ಸಹಿತಂ ಪ್ರಣುತನಾಗಿ ಪದ್ಮಾಸನನಾ ಗುತ್ತಂ ಕೇಳಬಲದೊಳೊಟ್ಟಿರ್ದ ಕಮಳಮುಕುಳಂಗಳೊಂದೊಂದ ಕೊಂಡು ಶಿವನಂ ನೆನೆದು ತನ್ನಂ ತಿಳಿದು ಮನಮಂ ಸ್ಥೈತಿಟ್ಟು ಬುದ್ಧಿಯಂ ಶುದ್ಧಯಿಸಿ ಚಿತ್ತಮಂ ತಿಳಿವಿಟ್ಟು ಅಹಂಕಾರಮನಗಲ್ಚಿಸಿ ಕಾಮಮಂ ಕಡೆಗೊತ್ತಿ ಕೋಪಮಂ ಕೆಲಕ್ಕೆ ಸಾರ್ಚಿ ಲೋಭಮಂ ಲಾಲಿಸದೆ ಮೋಹಮಂ ಮನ್ನಿಸದೆ ಮದಮಂ ಮುರಿದು ಮತ್ಸರಮಂ ನುಚ್ಚುಗುಟ್ಟಿ ತಾಪತ್ರಯಕ್ಕೆ ತೆರಹುಗೊಡದೆ ಹೃದಯ ಕಮಳಮನೆಡೆ ಮಾಡಿ ಜ್ಞಾನ ಕನ್ನಿಕೆಯ ಗದ್ದುಗೆ ಇಕ್ಕಿ ಮನದ ಬೆಳಗಂ ಪಚ್ಚಡಿಸಿ ಪರಂಜ್ಯೋತಿ ಯೊಳ್ನಿತ್ಯನಂ ನಿರ್ಮಳನಂ ಕಾರುಣ್ಯನಿಧಿಯಂ ಶಿವನಂ ಶಂಕರನಂ ಕಣ್ತೀವಿ ನೋಡಿ ಮನಂ ತೀವಿ ನೆನೆದು ಭಾವಂ ತೀವಿ ಬರಿಸಿ ಮೈತೀವಿ ಪುಳುಕವ ನಾಂತು ನಾಲಿಗೆ ತೀವಿ ಬಣ್ಣಿಸಲೆಂದು ಮಳೆಯರಾಜಂ ವಿರೂಪಾಕ್ಷವರ ಪುತ್ರಂ ಸ್ತೋತ್ರಾಮೃತದಿಂ ಬಣ್ಣಿಸುತ್ತಿರೆಯಿರೆ

ದ್ವಿತೀಯ ಸ್ಥಳ ಸಮಾಪ್ತಂ.

---

## ತೃತೀಯ ಸ್ಥಳ

ವೃತ್ತ॥ ದೇವ ಸಮಸ್ತ ಮಸ್ತಕದ ಭೂಷಣದೇವ ಕಿರೀಟಕೋಟಿಸಂ
ಸೇವಿತ ಪಾದದೇವ ಕುಲದೇಹ ವಿಮಂಡಿತಕಾಯದೇವವಿ ।
ದ್ರಾವಣ ದೇವ ಚಂದ್ರಧರ ದೇವಕೃಪಾಕರ ರಕ್ಷಿಸೆಂದು ತಾಂ
ದೇವರ ದೇವನಂ ಮಳೆಯರಾಜ ನೃಪಂ ಸ್ತುತಿಗೈದನಕ್ಕರಿಂ॥

### ರಗಳೆ.

ಇಂತು ಮಳೆಯರಾಜ ದೇವನಭವನಂ ಜಿಗಿಲ್ತು ನೋಡಿ
ಕಂತುಹರನ ಚಂದ್ರಧರನ ಮಹಿಮೆಯೊಳಗೆ ತಿಳಿದು ಕೂಡಿ
ತ್ರಿಣಯನಪ್ರಸಾದವರಿಕೆವಟ್ಟು ಭಕ್ತಿಯೊಳ್ಮನದಂದು
ತಣಿದು ತಣಿಯಲಾರದಲ್ಲಿ ಮತ್ತೆ ಮತ್ತೆ ಪೊಗಳಲೆಂದು
ದೇವ ತರಣಿಕೋಟಿಗುನ್ನತ ಪ್ರಭಾವತೇಜ
ದೇವ ಹರಿವಿರಿಂಚಿಸುರಪಮುನಿಗಳರಿಯದಾದಿ ಬೀಜ
ದೇವ ದುರಿತಮಥನಕಾಲ ಮಥನಪುಷ್ಪ ಬಾಣಮಥನ
ದೇವ ನಾಗಮಥನ ಪುಂಡರೀಕ ಮಥನ ಪುಣ್ಯ ಕಥನ
ದೇವ ಸಲಿಲಶಯನ ನಯನಮಂಡಿತ ಪ್ರಸಿದ್ಧ ಚರಣ
ದೇವ ಕಮಳಪುತ್ರ ಮಸ್ತಕಪ್ರಯುಕ್ತಹಸ್ತಕಿರಣ
ದೇವದೇವ ನಿಕರದೂರ ಪರಮ ಭಕ್ತಜನ ಸಮೀಪ
ದೇವ ನಿರ್ಮಳ ಪ್ರದೀಪ ಸಕಳ ನಿಃಕಳಸ್ವರೂಪ
ದೇವ ಭರ್ಗ ಭೀಮ ಸರ್ವಭುವನ ಭವನ ತಿಮಿರಹರಣ
ದೇವ ಘನ ಪುರಾತ ಗೀತ ನೂತನ ಪ್ರಸಂಗಕರಣ
ಕರುಣಿಸೆನಗೆ ಪುಣ್ಯಯೂಥ ಇಳೆಯ ಜನದ ನಾಥ ನಾಥ
ಕರುಣಿಸೆನಗೆ ಭಾಳನಯನ ಶೈಲಜಾಮನೋವರೂಥ

ಎಂದು ಪೊಗಳ್ವ ನುತಿಗಳೊಳಗೆ ಚಂದ್ರಮೌಳಿ ಸಿಲ್ಕಿ ನಿಂದು
ಮುಂದೆ ಲಿಂಗದಿಂದೆ ನಿಜದಿರೂಪವೆತ್ತು ತೋರಿ ಬಂದು
ಜಡೆಯ ನಡುವೆ ಮೆರೆವ ನದಿಯ ತಡೆಯೊಳೊಪ್ಪುತಿರ್ಪ ಶಶಿಯ
ಕಡು ಪೊಡರ್ಪಿನೊಳಗೆ ಸುಳಿದು ಘುಳುಘುಳಿಪ್ಪ ಭಾಳಶಿಖಿಯ
ಉರಗ ಕುಂಡಲಂಗಳೊಳಗೆ ಸೆಣಸಿ ಹೊಳೆವ ಗಳದ ವಿಷದ



ಸುರುಚಿರಪ್ರಕಾಶದಿಂದೆ ಶೊಳಿಪ ಭುಜದ ಪಂಚಮುಖದ
ಕರಿಯಸುಗಿದ ಹೊದಿಕೆಯೊಪ್ಪೆ ಪುಲಿಯ ಚರ್ಮದುಡಿಗೆ ಮೆರೆಯೆ
ಹರಿಯ ನಯನ ನವ ಮರೀಚಿಪದ ಶಳಾಗ್ರದಿಂದೆ ಮೆರೆಯೆ
ದೇವಗಿರಿಜೆಯರಸನಲ್ಲಿ ತನ್ನ ನಿಜವನೊಲಿದು ತೋರೆ

ಭಾವಿಸುತ್ತೆ ಭಕ್ತನಲ್ಲಿಗೆಯ್ದಿ ನಡೆದು ಬಂದು ಮೀರೆ
ಬೇಡು ಮಳೆಯರಾಜ ಬೇಡಿಕೊಳ್ಳು ನೆನೆದುದೀವೆ
ನೆನುತೆ ನೋಡಿ ಮೋಹದಿಂದೆ ಮಗನೆ ಬೇಡು ಬೇಡು ಈವೆನೆನುತೆ
ಮುಂದೆ ನಿಂದ ಚಂದ್ರಧರನನಂದು ಮಳೆಯರಾಜನರಿದು
ಮುಂದುಗೆಟ್ಟು ನುಡಿ ಸಡಿಲ್ದು ಸುಖದ ಮೂರ್ಛೆಯೊಳಗೆ ತಿಳಿದು
ಮೆಲ್ಲಮೆಲ್ಲನೆಚ್ಚರೊಳಗೆ ಸಂದು ತಿಳಿದು ನೋಡಿ ಕಂಡು
ಅಲ್ಲಿ ಬೇಡಿಕೊಂಡನಮಮ ಮಳೆಯರಾಜನಿಂಬುಗೊಂಡು
ದೇವ ಮಾತೃಪಿತರ ಮನದ ಮಾಯೆಯಂ ಸಡಿಲ್ಚಿ ಕಳೆದು
ದೇವ ಎನಗೆ ಕರುಣಿಪುದು ಶತಾಯುವಂ ದಯಾಳು ತಿಳಿದು
ಎಂದೊಡಾಯುವಿತ್ತೆ ಮತ್ತೆ ಬೇಡು ಮತ್ತೆ ಬೇಡೆನುತ್ತೆ
ಇಂದುಶೇಖರಂ ಪ್ರಮೋದದಿಂದೆ ಬೇಡಿಕೊಳ್ಳೆನುತ್ತೆ
ಇರೆ ಕುಮಾರನಲ್ಲಿ ಬೇಡುತಿರ್ದನಭವನಿಚ್ಛೆಯರಿದು
ಹರನ ಕರುಣವೆಯ್ದೆ ತನ್ನ ಮೇಲುವರಿವ ಭರವನಂದು
ದೇವ ಮಾತೃಪಿತರನಾಥ ಬಂಧು ವರ್ಗವೆಲ್ಲ ಸಹಿತ
ದೇವ ಬಾಲವೃದ್ಧರೆನ್ನದೆನ್ನ ದೇಶವೆಲ್ಲ ಸಹಿತ
ಈಶ ಕರುಣಿಸೆನ್ನ ರಥಪದಾತಿ ಸರ್ವ ರಾಜ್ಯ ಸಹಿತ
ದೇಶದೊಳಗೆ ಬಾಳುತಿರ್ಪ ಮೃಗಕುಲಂಗಳೆಲ್ಲ ಸಹಿತ
ಆನೆ ಮೊದಲಿರುಂಪೆ ಕಡೆ ಯೆನಿಪ್ಪ ಜೀವರಾಶಿ ಸಹಿತ
ದಾನನಿಧಿಯೆ ಕರುಣಿ ಕರುಣಿಸೆನ್ನ ಚನ್ನ ಭಕ್ತಿ ಸಹಿತ
ಮುಂದೆ ನೂರು ವತ್ಸರಂ ಬರ್ದುಂಕಿ ಪೂಜೆಗೈದ ಬಳಿಕ
ಇಂದುಮೌಳಿ ನಿಮ್ಮ ನಿಜದ ಭಕ್ತಿ ಕೊರ್ವಿ ಬೆಳೆದ ಬಳಿಕ
ಕೊಂಡು ಪೋಪುದಯ್ಯ ರಜತಗಿರಿಗೆ ವರವಿದೆಂದು ಬೇಡೆ
ದಂಡಧರ ತಮಾರ್ಕ ಕರುಣಿಸೆಂದು ನಿಷ್ಠೆಯಿಂದ ಬೇಡೆ
ಕೊಟ್ಟೆನಯ್ಯ ಕೊಟ್ಟೆನರಸ ಕೊಟ್ಟೆನೆನ್ನ ಭಕ್ತನಿಧಿಯೆ
ಕೊಟ್ಟೆನೆಲೆಲೆ ಮಳೆಯ ರಾಜ ಸುಖದೊಳಿರ್ಪುದೆನ್ನ ಸುಧೆಯೆ

ಎಂದು ವರವನಿತ್ತು ಶಂಭು ಮತ್ತೆ ಲಿಂಗದೊಳ್ಪುಗಲ್ಕೆ
ಇಂದುವದನೆ ಶೈಲಸುತೆಯೊಳೊಂದು ಗೂಡಿ ಸುಖಮಿರಲ್ಕೆ

ಇತ್ತಲಿಲ್ಲ ಮಳೆಯರಾಜನುತ್ಸವಕ್ಕೆ ಹೆಚ್ಚುಗೊಟ್ಟು
ಚಿತ್ತದೊಳ್ಸಮಸ್ತ ಸಂತಸಂಗಳಂ ತೆರಳ್ಚಿ ಇಟ್ಟು
ರಂಗಮಂಟಪಕ್ಕೆ ಬಂದು ಕುಣಿದು ತಣಿದು ತೇಗಿ ಕೂಗಿ
ಲಿಂಗವಿತ್ತ ವರಕೆ ಹರುಷವೇರಿ ಮೀರಿ ನಿತ್ಯನಾಗಿ
ದೇವರಾಜನಂಘ್ರಿಯೊಳ್ಪೊರಳ್ದು ಹೊಮ್ಮಿ ಭರದೊಳಪ್ಪಿ
ದೇವ ಕಟಿಯನಪ್ಪಿ ಮತ್ತೆ ಮತ್ತೆ ಕಾಯನಗಲದಪ್ಪಿ
ಭಕ್ತರಂ ಪ್ರಧಾನಿ ಮಂತ್ರಿ ಮುಖ್ಯರಂ ನಿರಂತರಪ್ಪಿ
ಭಕ್ತಿ ಮಿಕ್ಕು ಕಂಡರೆಲ್ಲರಂ ಸರಾಗದಿಂದಲಪ್ಪಿ
ಚಿಪ್ಪುಗಳೆದ ಮುತ್ತಿನಂತೆ ರಂಗವಿಟ್ಟ ರನ್ನದಂತೆ
ಒಪ್ಪವಿಟ್ಟ ನಿಷ್ಠೆಯಂತೆ ಬಣ್ಣವಿಟ್ಟ ಭಕ್ತಿಯಂತೆ
ಎಸೆದ ಪುಣ್ಯದಂತೆ ಭೂಮಿ ತಳೆದ ಕಲ್ಪತರುವಿನಂತೆ
ಮಿಸುಪ ಸೂರ್ಯನಂತೆ ಹೊಗರ ನೆತ್ತಿದ ತ್ರಿಶೂಲದಂತೆ
ತೊಳಗಿ ಬೆಳಗಿ ದೇವರಾಜನೊಡನೆ ಮತ್ತ ಗಜವನೇರಿ
ತಳೆಯ ನೆಳಲ ತಣ್ಪಿನೊಳಗೆ ಮೆಲ್ಲನಡಿಯನಿಟ್ಟು ಮೀರಿ
ಎಡಬಲಂಗಳೊಳಗೆ ಸಚಿವರಾಜಪುತ್ರರಿಡಿದು ನಡೆಯೆ
ಒಡನೆ ಗಜತುರಂಗ ರಥ ಪದಾತಿ ವೃಂದವೆದ್ದು ನಡೆಯೆ
ಮಳೆಯ ದೇಶದೊಳಗೆ ಸಂತಸಂಗಳಿಂದೆ ಗುಡಿಯನೆತ್ತಿ
ಮಳೆಯವತಿಯ ಸತಿಯರೆಲ್ಲ ನೆರೆದು ಮುಡಿಯ ಗುಡಿಯನೆತ್ತಿ
ಬಂದು ಮಳೆಯವತಿಯನತಿ ವಿಳಾಸದಿಂದ ನಲಿದು ಪೊಕ್ಕು
ನಿಂದು ಮೆರೆವ ನಿಜ ನಿವಾಸವಳಯದೊಳಗೆ ಭಕ್ತಿ ಮಿಕ್ಕು
ಆನೆಯಿಂದ ಮೆಲ್ಲನಿಳಿದು ಸಿಂಹಪೀಠಕಾಯನಾಗಿ
ಮಾನಿ ಮಳೆಯರಾಜನಲ್ಲಿ ಸಭೆಯ ನಡುವೆ ಹರುಷನಾಗಿ

ಪುರಜನಕ್ಕೆ ಪರಿಜನಕ್ಕೆ ಭಕ್ತಿಯುಕ್ತರಾಗವೇಳ್ದು
ಪುರಪುರಕ್ಕೆ ದೇಶದೇಶದತ್ತಲರ್ಚಿಸಲ್ಕೆ ಪೇಳ್ದು
ಶಿವನ ಪೂಜೆಗೆಯ್ವುದೆಂದು ತನ್ನ ದೇಶದೊಳಗೆ ಬೀರಿ
ಭವನನರ್ಚಿಸಲ್ಕೆ ತನ್ನ ಸಕಳ ದೇಶದೊಳಗೆ ಸಾರಿ



ನಿತ್ಯ ಪೂಜೆಗೆಂದು ಮಳೆಯರಾಜದೇವನುರ್ಬಿ ಕೊರ್ಬಿ
ಸತ್ಯಶರಣನೈದಿ ಶಿವನ ನಿಳಯದೊಳಗೆ ತೀವಿ ಪರ್ಬಿ
ಪಲ್ಲವಿಪ್ಪ ಪುಳಕದೊಳಗೆ ಬೆಮರ ಬಿಂದು ಬೀಡಬಿಟ್ಟು
ಲಲ್ಲೆಯೊಳಗೆ ಗದ್ಗದಂಗಳಡಸಿ ಮುಂದಣಡಿಯನಿಟ್ಟು
ಸುಖಜಲಂ ವಿಲೋಚನಂಗಳೆರ್ತಡಿಗಳನೊತ್ತಿ ಪರಿಯೆ
ಮುಖದ ಮುಸಿಸು ನೇಹ ಜಗಳದೊಳಗೆ ಶಿವನನಪ್ಪಿ ನೆರೆಯೆ
ಮಜ್ಜನಕ್ಕೆ ಮೆಲ್ಲಮೆಲ್ಲನೆರೆದು ಮತ್ತೆ ಪುಳಕಿಸುತ್ತೆ
ಪಜ್ಜಳಿಪ್ಪ ಶಿವನನೊಲಿದು ಮುಟ್ಟಿ ಮುಟ್ಟಿ ಕಂಪಿಸುತ್ತೆ
ಇಂದುಮೌಳಿಗಿತ್ತು ನೋಡಿ ಮತ್ತೆ ಮತ್ತೆ ಲಾಲಿಸುತ್ತೆ
ಚಂದನಕ್ಕೆ ಮೃಗಮದಕ್ಕೆ ಹದನನಿತ್ತು ಬಣ್ಣಿಸುತ್ತೆ
ಸೊಂಪು ಮಿಗುವ ಸಂಪಗೆಗಳ ಕಂಪಿನೆಸಳನೆತ್ತಿಕೊಂಡು
ಇಂಪನುಗುಳ್ವ ಜಡೆಯ ಮುಡಿಗೆ ತುರುಬಿ ಸುಖವನೊಪ್ಪುಗೊಂಡು
ನವ್ಯ ಕುಸುಮ ಸಂಕುಳಂಗಳಿಂದೆ ಒರ್ಮೆ ಪೂಜೆಗೆಯ್ದು
ದಿವ್ಯ ವಸ್ತ್ರದಿಂದೆ ಒರ್ಮೆ ಪೂಜೆಗೆಯ್ದು ಪೂಜೆಗೆಯ್ದು
ವಿಮಳ ಧೂಪವಿಕ್ಕಿ ಬೆಳಗನೆತ್ತಿ ಎತ್ತಿ ನೋಡಿ ನಲಿದು
ಅಮೃತರಸವನೂಡಿಯೂಡಿ ವೀಳೆಯಂಗಳತ್ತ ಮಣಿದು
ಶೃಂಗರಕ್ಕೆ ತನುವನಿತ್ತು ಮನವನಿತ್ತು ತನ್ನನಿತ್ತು
ಹಿಂಗದಪ್ಪಿ ಹಿಗ್ಗಿ ಹೆಚ್ಚಿ ಲಿಂಗದತ್ತ ಚಿತ್ತವಿತ್ತು
ಪೂಜೆ ಎಲ್ಲವಂ ಸಡಿಲ್ಚಿ ಮತ್ತೆ ಪೂಜೆಗೆಯ್ದು ನೋಡಿ
ಪೂಜೆಗೆಟ್ಟು ಸೀಮೆಗೆಟ್ಟು ಮಿಕ್ಕು ನುಡಿದು ಮೀರಿ ನೋಡಿ
ಎನಿತ್ತು ಪೂಜೆ ಮಾಡಿ ಮಾಡಿ ಮೆಚ್ಚದಚ್ಚುಗಂಗೊಳುತ್ತೆ
ನೆನೆದ ಪೂಜೆಯಳವಡಲ್ಕೆ ಮೆಚ್ಚಿ ಹೆಚ್ಚಿ ರಾಗಿಸುತ್ತೆ
ಅರಿದು ಮುಟ್ಟಿ ಮರೆದು ಮುಟ್ಟಿ ಮತ್ತೆ ಮುಟ್ಟಿ ಮುಟ್ಟಿ ಬಿಡದೆ
ತೊರೆಯಲಾರದೊರಹುಗೆಟ್ಟು ಚಿತ್ರವಿಟ್ಟು ತೆರಹುಗುಡದೆ
ಲಲ್ಲೆಗರೆದು ನಿಲ್ಲದಗಲದಪ್ಪಿಕೊಂಡು ಲಜ್ಜೆಗೆಟ್ಟು
ಗೆಲ್ಲವಳಿದು ಸಯ್ದು ಸೋತು ಮಾತು ಬೀತು ಧಾತುಗೆಟ್ಟು
ಚಿಂತೆಯೊಳಗೆ ಶಿವನನಿರಿಸಿ ನಯನಯುಗವನರೆ ಮುಗುಳ್ಚಿ
ಅಂತರಂಗದೊಳಗೆ ಕಂತುಹರನ ಪೂಜೆಯಂ ತೆರಳ್ಚಿ
ಭಾವಪೂಜೆ ಬಲಿದು ದೇಹದೊಳಗೆ ಹೊರಗೆ ನೆಮ್ಮಿ ಹೊಮ್ಮಿ

ಭಾವವಿಡಿದು ಶಿವ ದೇವನಂತಿರಿಪ್ಪನೊನ್ಮೆಯೊನ್ಮೆ
ಅರ್ಚಿಸುತ್ತೆ ತಿರುಗಿ ನೋಡಿ ಲಿಂಗದೊಳಗೆ ಪುಟ್ಟುವಂತೆ
ಬೆಚ್ಚಿ ಬೆರಸಿ ಪತ್ರಿ ಕೀಲಿಸುತ್ತೆ ಭೇದವಿಲ್ಲದಂತೆ
ಪಗಲನರಿಯದಿರುಳನರಿಯದಕ್ಕರಿಂದಲರ್ಚಿಸುತ್ತೆ
ಬಗೆಗೆ ಬಂದ ಪೂಜೆ ಕೈಗಳೊಳಗೆ ಹೆಚ್ಚಲರ್ಚಿಸುತ್ತೆ
ಪೂಜಿಸುತ್ತೆ ಪುಳಕಿಸುತ್ತೆ ಪೊರವಡಲ್ಕೆ ನೆನೆದು ನೋಡಿ
ಸೋಜಿಗಕ್ಕೆ ಸೊಗಸು ಶಿವಿಯಗಲಲಾರದಲ್ಲಿ ಕೂಡಿ
ದೇವ ದೇಶದೊಳಗಣರ್ಚನೆಗಳನರಿದು ಬರ್ಪೆನಯ್ಯ
ದೇವಲೋಕವಾದ ಪರಿಯನೊಪ್ಪಿ ನೋಡಿ ಬರ್ಪೆನಯ್ಯ

ಎಂಬ ಬಿನ್ನಪಕ್ಕೆ ಶಂಭು ಕರುಣಿಸಲ್ಕೆ ನಡೆದು ಬಂದು
ನಂಬಿ ಭಕ್ತಿ ಇಂಬುಗೊಂಡು ಬೆಂಬಲಕ್ಕೆ ನೆಲಸಿ ನಿಂದು
ನಿಂದ ತುರಂಗ ಭಾಳದೊಳಗೆ ಭಸಿತವಿಟ್ಟು ಭೋಂಕನೇರಿ
ಬಂದ ನನುವು ಮಳೆಯರಾಜದೇವನಲ್ಕರಿಂದೆ ಮೀರಿ
ಬರಬರಲ್ಕೆ ಕಂಡುದೆಲ್ಲ ನಿಂದುದೆಲ್ಲ ಶಿವನ ಪೂಜೆ
ನೆರೆವುದೆಲ್ಲ ನುಡಿವುದೆಲ್ಲ ನಡೆವುದೆಲ್ಲ ಶಿವನ ಪೂಜೆ
ಮನೆಗಳೊಳಗೆ ಶಿವನ ಪೂಜೆ ಕೇರಿಯೊಳಗೆ ಶಿವನ ಪೂಜೆ
ಘನ ಪುರಂಗಳೊಳಗೆ ಕೂಡೆ ನೋಡೆ ಚಂದ್ರಚೂಡ ಪೂಜೆ
ಪಟ್ಟಣಂಗಳೊಳಗೆ ನೋಡೆ ದಿಟ್ಟ ಮೂರರವನ ಪೂಜೆ
ಬಟ್ಟೆಯೂರೊಳೆಲ್ಲ ಶಿವನ ನಿಷ್ಠೆ ಬಲಿದ ಭಾವ ಪೂಜೆ
ನಗರಿ ನಗರಿಯಲ್ಲಿ ನಾಗಕುಂಡಲಪ್ರಸಿದ್ಧ ಪೂಜೆ
ಸೊಗಯಿಪಗ್ರಹಾರದಲ್ಲಿ ಕುಸುಮಶರ ವಿರುದ್ಧ ಪೂಜೆ
ನಾಡು ನಾಡೊಳೆಲ್ಲ ಚಂದ್ರಚೂಡ ಶಂಭುಲಿಂಗಪೂಜೆ
ಬೀಡುಬೀಡೊಳೆಲ್ಲ ಕೂಡಿ ಶಿವನ ಪೂಜೆ ಭವನ ಪೂಜೆ
ದೇಶದೇಶದಲ್ಲಿ ಪಂಚಮುಖನ ಪೂಜೆ ಸುಖದ ಪೂಜೆ
ಭಾಸುರ ಸ್ಥಳಂಗಳಲ್ಲಿ ಭೀಮಪೂಜೆ ಸೋಮಪೂಜೆ
ತರುಗಳಲ್ಲಿ ಶಂಕರಪ್ರಭಾವಪೂಜೆ ದೇವಪೂಜೆ
ಗಿರಿವನಂಗಳಲ್ಲಿ ಕೂಡೆ ಹರುಷಪೂಜೆ ಗಿರೀಶಪೂಜೆ
ನದಿಗಳೊತ್ತ ಟಾಕದೊಳ್ಕೊಳಂಗಳೊಳಗೆ ಲಿಂಗಪೂಜೆ
ಪುದಿದ ಶೋಕೆ ಮಾವುಮಲ್ಲಿಗರಳನೊಳಗೆ ಲಿಂಗಪೂಜೆ



ಆನೆಗೆಲ್ಲ ಜ್ಞಾನಪೂಜೆ ಕುದುರೆಗೆಲ್ಲ ಧ್ಯಾನಪೂಜೆ
ಸೇನೆಗೆಲ್ಲ ಶಿವನ ಪೂಜೆ ಕಾಣ್ಬುದೆಲ್ಲ ಹರನ ಪೂಜೆ
ಕೇಳ್ವುದೆಲ್ಲ ಶಿವನ ಪೂಜೆ ಮಾಳ್ಪುದೆಲ್ಲ ಶಿವನ ಪೂಜೆ
ಬಾಳ್ವುದೆಲ್ಲ ಶಿವನ ಪೂಜೆ ಬಯಸಿತೆಲ್ಲ ಶಿವನ ಪೂಜೆ
ಸಕಲ ಜೀವರಾಶಿಗೆಲ್ಲಗಣ್ಯ ಪೂಜೆ ಪುಣ್ಯ ಪೂಜೆ
ಸಕಲ ದೇಶದಲ್ಲಿ ಸೊಗಯಿಪಗ್ರ ಪೂಜೆ ಯುಗ್ರಪೂಜೆ
ಜಾವವಿಲ್ಲ ಘಳಿಗೆ ಇಲ್ಲ ದಿವಸವಿಲ್ಲ ನಿತ್ಯಪೂಜೆ
ಆವ ನೇಮವಿಲ್ಲ ಸಂಶಯಂಗಳಿಲ್ಲ ನಿಜದಪೂಜೆ
ತರ್ಕವಿಲ್ಲ ಬೆರಿಕೆಯಿಲ್ಲ ಬಚ್ಚ ಬರೆಯ ಶಿವನ ಪೂಜೆ
ಕರ್ಕಶಂಗಳಿಲ್ಲ ಬಾಧೆಯಿಲ್ಲದಭವನಚ್ಚ ಪೂಜೆ
ದೇಶದೊಳಗೆ ಗಂಟೆಗಳ ರವಂಗಳಲ್ಲದಿಲ್ಲ ಮತ್ತೆ
ದೇಶದೊಳಗೆ ಧೂಪ ಪರಿಮಳಂಗಳಲ್ಲದಿಲ್ಲ ಮತ್ತೆ
ಮರ್ತ್ಯಲೋಕದೊಳಗೆ ರುದ್ರಲೋಕವಿರ್ಪ ತೆರದೊಳಿರ್ದು
ಮರ್ತ್ಯದೊಳಗೆ ದೇವಗಣ ಸಮೂಹವಿರ್ಪ ತೆಂದೊಳಿರ್ದು

ಇಂತು ತನ್ನ ನವಮಲಕ್ಷ ದೇಶದೊಳಗೆ ಪೂಜೆ ಮಸಗೆ
ಕಂತುಹರನ ಶಿವನ ಭವನ ಮಹಿಮೆ ದೇಶದೊಳಗೆ ಮಸಗೆ
ಅಲ್ಲಿಯಲ್ಲಿ ಹೊಕ್ಕು ಹೊಕ್ಕು ನೋಡಿ ನೋಡಿ ನಲಿದು ನಲಿದು
ನಿಲ್ಲದುಕ್ಕಿ ಯಾಡಿಪಾಡಿ ಮಿಕ್ಕು ಮೀರಿ ಕುಣಿದು ತಣಿದು
ಮೆಚ್ಚನಿತ್ತು ಭಕ್ತಜನಕೆಯಗಲದಪ್ಪಿಯಪ್ಪಿಕೊಂಡು
ನಚ್ಚಿ ನಲಿದು ಮಚ್ಚಿ ಮಣಿದು ಹೆಚ್ಚಿ ಹಿಗ್ಗಿ ಸುಗ್ಗಿಕೊಂಡು

ಮಲಯವತಿಗೆ ಮರಳಿ ಬಂದ ಶಿವನ ನಿಳಯದೊಳಗೆ ಪೊಕ್ಕು
ಕುಲವೆ ಛಲವೆ ಬಲವೆಯೊಲವೆ ನಿಲವೆ ಎಂದು ಸಲುಗೆ ಮಿಕ್ಕು
ಮಳೆಯ ರಾಜನಲ್ಲಿ ಪುಷ್ಪರಾಶಿ ತಣಿಯೆ ಪೂಜೆ ಮಾಡಿ
ತಿಳಿವ ಸಲಿಲವೆಯ್ದೆ ತಣಿದು ತಣಿದು ಪೂಜೆ ಮಾಡಿ ನೋಡಿ
ದೆಸೆಗಳೆಲ್ಲ ತಣಿಯೆ ಲೋಕವೆಲ್ಲ ತಣಿಯೆ ಪೂಜೆ ಮಾಡಿ
ಎಸೆಯಲಷ್ಟಲೋಕಪಾಲರೆಲ್ಲ ತಣಿಯೆ ಪೂಜೆ ಮಾಡಿ
ರಸೆ ಜಲಾಗ್ನಿ ವಾಯು ಗಗನವೆಯ್ದೆ ತಣಿಯೆ ಪೂಜೆ ಮಾಡಿ
ಶಶಿಸಹಸ್ರ ಕಿರಣನಾತ್ಮನೊಲ್ದು ತಣಿಯೆ ಪೂಜೆ ಮಾಡಿ

ನೂರು ಬರಿಸವೆಂಬುದೆಲ್ಲ ನಿಮಿಷವಾಗಿ ಪೂಜೆಗೆಯ್ದು
ತೋರಲಿಲ್ಲ ಬೇರಲಿಲ್ಲದಷ್ಟ ಸುಖದ ಪೂಜೆಗೆಯ್ದು
ಅಂತರಂಗವಂ ಶಿವಂಗೆ ಸೂರೆಗೊಟ್ಟು ಪೂಜೆಗೆಯ್ದು
ಸಂತತಂ ಹರಂಗೆ ತನ್ನನೊಪ್ಪುಗೊಟ್ಟು ಪೂಜೆಗೆಯ್ದು
ಇಂತು ನೂರು ವತ್ಸರಂ ವಿಳಾಸದಿಂದ ಪೂಜೆಗೆಯ್ದು
ಕಂತುಮರ್ದನಂಗೆ ಚಿತ್ತವಿತ್ತು ತಣಿಯೆ ಪೂಜೆಗೆಯ್ದು

ದೇವ ಮರ್ತ್ಯದೊಳಗೆ ಸುಖದೊಳಿರ್ಪುದಿನ್ನು ಸಾಲ್ವುದಯ್ಯಾ
ದೇವ ರಜತಗಿರಿಗೆ ಹರುಷದಿಂದೆ ಕೊಂಡು ಪೋಪುದಯ್ಯ
ಎಂದ ಬಿನ್ನಪಕ್ಕೆ ಶಂಭುಲಿಂಗದಿಂದಲೊಗೆದು ಬಂದು
ಸಂದ ಪಂಚವದನ ದಶಭುಜಂ ತ್ರಿಣೇತ್ರದಿಂದೆ ಬಂದು
ತನ್ನ ದೇವಗಣ ಸಮೂಹಮಂ ವಿಳಾಸದಿಂದ ನೆನೆಯೆ
ತನ್ನ ಬಂಧುಬಳಗವಪ್ಪ ಸಕಳ ಗಣವನೊಲಿದು ನೆನೆಯೆ
ನೆನೆವುದಕ್ಕೆ ಮುನ್ನಮೆಯ್ದಿ ಬಂದುದಲ್ಲಿ ದೇವಕೋಟಿ
ಘನ ಪೊದರ್ಪನಪ್ಪುಗೈದು ಹಾದಿಗೊಂಡು ಮಕುಟಕೋಟಿ
ಬೇರೆ ಬೇರೆ ನೊಸಲಕಣ್ಣ ನಂದಿವಾಹರಲ್ಲಿ ಕೋಟಿ
ಬೇರೆ ಬೇರೆ ಡಮರುಗ ತ್ರಿಶೂಲ ಹಸ್ತರಲ್ಲಿ ಕೋಟಿ
ದೆಸೆಯನೊತ್ತಿ ಬಸೆಯನೆತ್ತಿ ಜಗವನುಡುಗಿ ಮುಗಿಲು ಕೊಳ್ವ
ಎಸೆವ ದಿಗ್ಗಜಂಗಳಲ್ಲಿ ಮಿಸುಪ ಕೋಡನುಡಿಗಿಕೊಳ್ವ
ಉಡುಗಣಂಗಳಂ ಸಮಂತುದುರ್ಚಿ ನೆಲದೊಳಾಯ್ದುಕೊಳ್ವ
ನಡೆವ ಚಂದ್ರ ರವಿಗಳಂ ತೆರಳ್ಚಿ ಬೊಟ್ಟನಿಟ್ಟುಕೊಳ್ವ
ಗಣಸಮೂಹಮಂ ಪುರಾರಿ ಕಂಡು ಹರುಷ ಚಿತ್ತನಾಗಿ
ತ್ರಿಣಯನುಂ ಪ್ರಮೋದ ಉಕ್ಕಿ ಭಕ್ತಿಯೊಳ್ಪ್ರಸನ್ನನಾಗಿ
ಮಳೆಯರಾಜದೇವನಂ ಪ್ರಸಿದ್ಧ ಗಣ ಕುಲಕ್ಕೆ ತೋರಿ
ಇಳೆಗೆ ಪೊಸತೆನಲ್ಕೆ ದೇಶಸಹಿತಲೊಯ್ವೆನೆಂದು ಸಾರಿ
ನೆಗೆಯವೇಳೆನಲ್ಕೆ ನೆಗೆದವಲ್ಲಿ ನವಮಲಕ್ಷದೇಶ

ಒಗೆದವಲ್ಲಿ ಪುಷ್ಪವೃಷ್ಟಿ ದುಂದುಭಿ ಪ್ರಣಾದ ಘೋಷ
ಎಸೆಯೆ ಮೃದು ಮೃದಂಗ ಪಟಹ ದಿವ್ಯ ಶಂಖನಾದವಲ್ಲಿ
ಎಸೆವ ಬಿರುದನೆತ್ತಿ ಕರೆವ ಕಹಳೆಗಳ ಸುನಾದವಲ್ಲಿ



ಗಿರಿಗಳೆದ್ದು ದೇವಲೋಕದತ್ತ ಬಾಳಿ ಇಡುವ ತೆರದಿ
ಧರಣಿ ದೇವಲೋಕಮಂ ಪರೀಕ್ಷಿಸಲ್ಕೆ ನೆಗೆವ ತೆರದಿ
ನೆಗೆದವಲ್ಲಿ ಪಟ್ಟಣಂ ಪುರಂ ತಟಾಕ ನದಿಗಳೆಯ್ದಿ
ನೆಗೆದವಲ್ಲಿರುಂಪೆಯಾನೆಯಾದಿ ಜೀವರಾಶಿಯೆಯ್ದಿ
ನೆಗೆದುದೊಂದುಗೂಡಿ ಮೆರೆವ ಮಳೆಯದೇಶವಳಯವೆಯ್ದಿ
ನೆಗೆದುದಲ್ಲಿ ಗಗನಮಿಂಬುಗೆಟ್ಟು ಕೂಡೆ ಶೀವಳ್ಕೆಯ್ದಿ
ಗುಳಿದುದಿತ್ತ ಗಣಸಮೂಹವೆಯ್ದಿ ಕೊಳನನೆತ್ತಿದಂತೆ
ಗುಳಿದುದಲ್ಲಿ ಮಳೆಯದೇಶವಳಯವಿಳೆಯ ಹೊಕ್ಕಳಂತೆ
ಮೇಲೆ ಮೀರಿ ಮೇಗೆ ಯಡರ್ದು ನೆಗೆದವೇರಿ ನೆಗೆದವತ್ತ
ಮೇಲೆ ಮೇಲೆ ಕಾಣಬಾರದಂತೆ ನೆಗೆದವತ್ತಲತ್ತ
ಅಮರರೆಲ್ಲ ಕಂಡು ಕೌತುಕಂ ಮುಸುಂಕೆ ಕವಿದು ನೋಡೆ
ಅಮರಪತಿಗೆ ಕೌತುಕಕ್ಕೆ ಕೌತುಕಂಗಳಡಸಿ ಮೂಡೆ
ದೇವಲೋಕವೆಯ್ದೆ ಧೂಪ ಧೂಮ್ನದಿಂದೆ ಮುಸುಕಿ ಪೋಗೆ
ದೇವಲೋಕ ಮರ್ತ್ಯಲೋಕ ಪರಿಯಬಾರದಂದವಾಗೆ
ನೆಗೆದು ರಜತಗಿರಿಯ ನಂದಿನಾಥನಿರ್ಪ ಬಾಗಿಲಲ್ಲಿ
ಬಗೆಗೆ ಚಿತ್ರವಾಗಿ ನವಮಲಕ್ಷದೇಶ ಒಪ್ಪಲಲ್ಲಿ
ಅಗಜೆಯರಸನೆಯ್ದಿ ತನ್ನ ನಿಜ ನಿವಾಸನಾಗುತಲ್ಲಿ
ರಜತ ಗಿರಿಯ ಸಿಂಹ ವಿಷ್ಟರ ಪ್ರತಿಷ್ಠನಾಗುತಲ್ಲಿ
ಅರರೆ ನಂದಿನಾಥ ನೋಡು ತಂದೆ ಮಕ್ಕಳಿಬ್ಬರಿರವ
ಅರರೆ ದೇಶವೆರಸಿಯೆಯ್ದು ಭಕ್ತಿಯುಕ್ತರಾದರಿರವ
ಎನ್ನ ಭಕ್ತಿನಿಧಿಯ. ಮಳೆಯರಾಜ ಬಾರ ಬಾರೆನುತ್ತೆ
ತನ್ನ ಕೆಯ್ಯೊಳೆತ್ತಿ ತೆಗೆವುತಪ್ಪಿ ಸಭೆಗೆ ರಂಜಿಸುತ್ತೆ
ತಂದೆಗಂ ಮಗಂಗೆ ಗಣಪದಂಗಳಿತ್ತು ನೋಡಿ ನಲಿವು
ಬಂದ ಮಳೆಯದೇಶಮಂ ಸುವರ್ಣಗಿರಿಯೊಳಿರಿಸಿ ಮೆರೆದು
ಭಕ್ತಜನಮನೋರಥಪ್ರದುನ್ನತ ಪ್ರಿಯಂ ಕಪಾಲಿ
ಭಕ್ತನಿಕರ ವಾರ್ಧಿ ವರ್ಧನೇಂದು ಸನ್ನಿಭಂ ತ್ರಿಶೂಲಿ
ಕಾಮವೈರಿ ಪುಣ್ಯಕಾರಿ ಯರ್ಧನಾರಿ ಚಂದ್ರಧಾರಿ
ಭೀಮನಮಳಧಾಮನತುಳಸೀಮನಭವನಂತಕಾರಿ
ದೇವನೊಲಿದಡೀವನೆನಿಪನಾವನರಿಯೆ ಕಾಪನಮಮ
ಆವಗಂ ಪುರಾರಿಯಲ್ಲದಾವನುಂಟು ನೋಡಲಮಮ

ಶೂಲಿಯುಸ್ತ್ರಿಮಾಲಿಯುಜ ಕಪಾಲಿ ಚಂದ್ರಮೌಳಿಯುರರೆ
ಕಾಳಿಯುಂಕಪಾಲನುಗ್ರ ಭೀಕನಚಲ ಶೀಲನರರೆ
ನಾವ ನಿಳಯನುರಗವಳಯನಿಂದು ಕಳೆಯ ನೆಸೆದನಲ್ಲಿ
ವೇದಪರಿಯುವಾದಿಯುಂತ್ಯ ಭೇದರಹಿತ ನೆಸೆದನಲ್ಲಿ
ಇಂದ್ರಮುಕುಟಮಣಿವಿರಾಜಮಾನ ಚರಣನೊಪ್ಪುತಿರ್ದ
ಚಂದ್ರಮೌಳಿ ಶೂಲಿ ಹಂಪೆಯರಸ ವಿರುಪ ನೊಪ್ಪುತಿರ್ದ

ಕಂದ॥ ಒಂದೂರೋ ಎರಡೂರೋ
ಸಂದಿಸಿ ನವಲಕ್ಷ ದೇಶಮಂ ಕೈಲಾಸ ।
ಕ್ಷಂಮೊಯ್ದ ಮಳೆಯರಾಜನ
ಕಂದನೆಯಾಂ ಕರುಣಿಸೆನಗೆ ಹಂಪೆಯರಾಯಾ

**ಮಳೆಯರಾಜ ಮಹಾತ್ಮೆ ಸಂಪೂರ್ಣ.**

# ಓಹಿಲಯ್ಯ ಮಹಾತ್ಮೆ

ಕಂದ॥ ಎಲೆಲೆ ಪರಶಿವನು ಮೆರೆದಂ
ನಲಿನಲಿದು ಧರಾತಳಾಗ್ರದೊಳ್ಸನತೇಜೋ
ಜ್ವಲದಿಂ ಕರುಣಾಕರನೋ
ಹಿಲದೇವನನೆಮ್ಮ ಹಂಪೆಯ ವಿರೂಪಾಕ್ಷಂ॥

## ರಗಳೆ.

ಶ್ರೀಗೆ ನೆಲೆಯೆನಿಸುವುತ್ತರ ದಿಶಾಭಾಗದೊಳು
ಭೂಗೆ. ಮಂಗಳವೆನಿಪ ಪುರವಿರ್ಪುದೊಪ್ಪದೊಳು
ಧರಣಿಗೆ ವಿಳಾಸವೆಂದೆನಿಪ ಪೆರ್ಮೆಯ ಪುರಂ
ನರಲೋಕದೊಳಗದರ ಮಹಿಮೆಯತಿ ವಿಸ್ತರಂ
ಆ ಪಟ್ಟಣಕ್ಕಧಿಕನೆನಿಸಿಕೊಂಡೊಪ್ಪುವಂ
ಭೂಪರೊಳ್ನಿಃಕುಂಭರಾಜನೆನಲೊಪ್ಪುವಂ
ಕರಿ ತುರಗರಥಪದಾತಿ ಪ್ರಬಲ ಸಂಪದಂ
ನರಪ ಕುಲಮಣಿಮುಕುಟ ನಿಕರ ಸೇವಿತಪದಂ
ಪಲಕೆಲವು ವತ್ಸರಂ ರಾಜ್ಯಸುಖದಿಂದಿರ್ದು
ನೆಲದೊಳಗೆ ಮಾರ್ಮಲೆವರಿಲ್ಲದರಸಾಗಿರ್ದು
ಮಕ್ಕಳಿಲ್ಲದೆ ಮನದೊಳುಮ್ಮಳಂ ಪಿರಿದಾಗಿ
ತಕ್ಕರಂ ಪಿರಿಯರಂ ಕೂಡಿಕೊಂಡೊಂದಾಗಿ
ದೇವತೋಪಾಸ್ತಿಯಂ ಮಾಡಲ್ಮನಂದಂದು
ದೇವಾಲಯಕ್ಕೆ ಶುಚಿಭೂತನಾಗುತೆ ಬಂದು
ಶಿವಲಿಂಗಮಂ ಸಕಲ ಮುಖದೊಳರ್ಚಿಸುತಮಿರೆ
ಸವೆಯದಭಿಷೇಕಂಗಳಿಂದಲರ್ಚಿಸುತಮಿರೆ

ಕರುಣದಿಂದೀಶ್ವರಂ ಪ್ರತ್ಯಕ್ಷನಾಗುತುಂ
ಹರುಷಂ ಮನಂ ಮಿಕ್ಕು ಸಂತುಷ್ಟನಾಗುತುಂ
ಜ್ಞಾನತನುಮಯನಪ್ಪ ನಿರುಪಮಾನಂದನಂ

ಸ್ವಾನುಭವ ಒಡಲಾದ ಪರಮಸುಖವೃಂದನಂ
ಮಾಯಾ ವಿಕಾರಮಂ ಸಾರದ ಸಮರ್ಥನಂ
ಕಾಯಗುಣವಳಿದು ಸುಖ ಉಳಿದ ಪರಮಾರ್ಥನಂ
ತಾಪತ್ರಯಂಗಳಿಲ್ಲದ ಸಚ್ಚರಿತ್ರನಂ
ಭೂಪತಿಗೆ ಕೊಟ್ಟನಚ್ಚರಿ ಮಿಗಲ್ಪುತ್ರನಂ
ಕೊಟ್ಟು ಶಿವಲಿಂಗದೊಳ್ಪುಗೆ ಸದಾಶಿವನಂದು

ಮುಟ್ಟಿದೊಲವಿಂದರಸನರಮನೆಗೆ ನಡೆತಂದು
ಕೃತಕೃತ್ಯ ಮನನಾಗಿ ಪರಿಣಾಮವೆಡೆಗೊಂಡು
ಅತಿಶಯ ಸುಖಂಗಳಂ ಚಿತ್ತದೊಳ್ಕೈಳಿಗೊಂಡು
ಸುಲಲಿತ ರಸಾನಂದ ಗೇಯಮಂ ಕೇಳುತಂ
ಕೆಲವುಂ ದಿನಂಗಳಂ ಸುಖದಿಂದೆ ಕಳೆಯುತಂ
ಇರೆ ಪಟ್ಟದರಸಿ ಗರ್ಭಿಣಿಯಾದಳೊಪ್ಪದಿಂ
ಒರೆವರಲ್ನವಮಾಸವಾಗಲಾನಂದದಿಂ
ಸುಮುಹೂರ್ತದೊಳ್ಪಡೆದಳಾನಂದ ಕಂದನಂ
ಅಮೃತರಸಚ್ಚರಿತ ವಿಮಳ ಗುಣವೃಂದನಂ
ಪಡೆಯೆ ನಿಃಕುಂಭರಾಜಂ ಮನದೆ ಗುಡಿಗಟ್ಟಿ
ಕಡು ಸಂತಸಂಬಟ್ಟು ಸುಖರಸಂ ಮಡುಗಟ್ಟಿ
ಪ್ರೇಮದಿಂ ಜಾತಕರ್ಮಂ ಮಾಡಿ ಮುದ್ದಿಟ್ಟು
ನಾಮವಾತಂಗೋಹಿಲಯ್ಯನೆಂಬುದನಿಟ್ಟು

ಇರೆ ಬೆಳೆಯುತಿರ್ದಂ ವಿರಕ್ತಿ ಬೆಳೆವಂದದಿಂ
ಹರಭಕ್ತಿಯವಯವಂಬೆತ್ತು ಬಳೆವಂದದಿಂ
ಬಳೆದನೊಂದುವನರಿಯದೀ ಮಾಯೆಯಂದಮಂ
ಘುಳುಘುಳಿಪ ಸಂಸಾರದಲಿರ್ಪೊಂದು ಚಂದಮಂ
ನುಡಿವುದೊಂದರಿಯನುಣ್ಬುದವೆಂದು ತಾನರಿಯ
ಎಡಬಲಂ ಹಿಂದುಮುಂದಾವುದೇನೆಂದರಿಯ
ಇಂತಿವತರ್ಾಯ್ತುಂದೆ ಬಂಧುಕುಲವೆಂದರಿಯ
ಇಂತಿರ್ದು ಸುಖದುಃಖವೆಂದು ಮೊದಲಿಂಗರಿಯ
ಈಶ್ವರಂ ಕರುಣಿಸಿದ ವೈರಾಗ್ಯವೆಡೆಗೊಂಡು



ಶಾಶ್ವತಂ ಶಂಕರನ ಭಾವಮಂ ಕೆಳೆಗೊಂಡು
ಮುನ್ನಿಂದುವರಿಯದೀ ಸಂಸಾರವಂ ಕಂಡು
ತನ್ನ ಮನದೊಳ್ಸೇರದಿರುತಿರೆ ಭಯಂಗೊಂಡು
ಮೃಗ ಶಿಶುವನೂರೊಳಗೆ ಬಿಟ್ಟಂತೆ ಬೆಚ್ಚುತಂ
ಪಗಲಿರುಳ್ಬೇಗುದಿಯನೆಂದರಿಯದೊಪ್ಪುತಂ
ದೇವ ಬಿಜಯಂಗೆಯ್ವುದೆನೆ ಸುಮ್ಮನಿರುತಿರ್ಪ
ನಾವುದಂ ಸಂಜ್ಞೆಯರಿಯದೆ ಮೌನದಿಂದಿರ್ಪ
ಅರಿಯದಂತರಿಯದಂತಿರ್ಪನೊಮ್ಮೆಯುಂ
ಮರೆದಂತೆ ತೋರದಂತಿರುತಿರ್ಪನೊಮ್ಮೆಯುಂ
ತಾನಾಗಿ ಹಸಿದೆನೆಂಬಾ ಮಾತು ತನಗಿಲ್ಲ
ತಾನಾಗಿ ಬೇಕು ಬೇಡೆಂಬುದಂ ಮುನ್ನಿಲ್ಲ
ಜನನಿಯುಣಿಡಿದೊಡುಂಡು ದಾದಿಯೂಡಿದೊಡುಂಡು
ಮನದೊಳಗೆ ಪುಸಿಯ ಪಸರಕ್ಕೆ ಬೆಬ್ಬಳಿಗೊಂಡು
ಇಂತಿರಲ್ಪರಿಜನಂ ಮುಗುದನೆಂದೇ ಬಗೆದು
ಸಂತತಂ ಕೊಂಡಾಡುತಿರ್ಪರುತ್ಸವ ಒಗೆದು
ಜಾನ್ಹ ತನುಮಯನೆಂದು ತಾನರಿಯರಂತಲ್ಲಿ
ಭೂನಾಥನಂ ಮುಗುದನೆಂದಿರ್ಪರಂತಲ್ಲಿ

ಇರೆ ಕುಮಾರಂಗೆ ಪದಿನಾರು ವತ್ಸರವಾಗೆ
ಪುರಜನದ ಚಿತ್ತಕ್ಕೆ ಪಿರಿದು ಸಂತಸವಾಗೆ
ಅರಸು ನಿಃಕುಂಭರಾಜಂ ರುಜೆಯ ನೆವದಿಂದೆ
ಪರಲೋಕಮಂ ನೋಡಲೆಯ್ದಿದಂ ನೆಪದಿಂದೆ
ಎಯ್ದೆ ಜನವೆಯ್ದೆ ಚೇತನಗೆಟ್ಟು ಬಾಯ್ಬಿಟ್ಟು
ಮೆಯ್ದೆಗೆದು ಶೋಕದೆ ಪಲುಂಬಿ ಹರಣಂ ಗೆಟ್ಟು
ಘೋಳೆಂದು ಪುರಜನಂ ಮೊದೆಗೆಡೆದು ಹಳಯಿಸುತೆ
ಆಳಿಯಿಟ್ಟಳಲಿಂದೆ ಮೊರೆ ಇಡುತೆ ಕೂಗಿಡುತೆ
ಹಡಪಕ್ಕೆ ಚಾಮರಕೆ ಸೀಗುರಿಗೆ ಪೇಳುತಂ
ಕಡು ನೀರೆಯಮರ್ಾಲಗು ಗದ್ದುಗೆಗೆ ಪೇಳುತಂ
ಒಲಿದರಗಿಳಿ ಹಂಸೆ ಕೋಗಿಲೆಗೆ ಪೇಳುತಂ
ಅಲ್ಲಿ ಬೆಳಸಿದ ಮಲ್ಲಿಕಾಲತೆಗೆ ಪೇಳುತಂ

ಪೂಗೊಳವೆ ಪೆಡುಳಮಿರು ಹೋಗಿ ಬಂದಪೆವೆಂದು
ನಾಗಲತೆ ಕೊರಗದಿರು ಪೋಗಿ ಬಂದಪೆವೆಂದು
ಕಡು ಶೋಕದಿಂದೊಟ್ಟೈ ಯೊರಲಿ ಬೀಳ್ವುದು ಜನಂ
ಎಡೆಗೊಂಡ ದುಃಖದಿಂ ಕೆಡೆದು ಬೀಳ್ವುದು ಜನಂ
ಭೂಮಿ ಕಣ್ಣೀರಿಂದೆ ಕೆಸರಪ್ಪ ಮಾಳ್ಕೆ ಇರೆ
ಪ್ರೇಮದ ಜನಂ ನೆರೆದು ನಿಂದಳುತ ಪಲಬುತಿರೆ
ಪುರಜನಂ ಶೋಕದಿಂ ವೈಗರೆವುತಿರುತಮಿರೆ
ಪರಿಜನಂ ಬಾಯ್ಬಿಟ್ಟು ಕೆಟ್ಟೆವೆಂದೆನುತಮಿರೆ
ಮಂತ್ರಿಗಳ್ಸಾಮಂತರೆದೆಯೊಡೆದು ಬೀಳುತಿರೆ
ತಂತ್ರಿಗಳ್ರಾಜಪುತ್ರರ್ಮರುಗಿ ಮುಗ್ಗುತಿರೆ
ಇಪ್ಪರುಂ ಬಂಧುಗಳ್ಮೂರ್ಛೆಯೊಳ್ ಸಂದಿರಲ್
ಶಿಪ್ಪರುಂ ಸೇವ್ಯರುಂ ಕಣ್ಗೆಟ್ಟು ನಿಂದಿರಲ್

ನಡೆಮಾಡನೆತ್ತಿತ್ತು ಗೋಳಿಡುತ್ತಿರಲಂದು
ನುಡಿದರ್ಕೈತಂದೋಹಿಲಯ್ಯನಲ್ಲಿಗೆ ಬಂದು
ನಿನ್ನ ಜನಕಂ ದೇವಲೋಕಕ್ಕೆ ಪೋದನೆನೆ
ನಿನ್ನಯ ಪಿತಂ ಸತ್ತನೇಳಲೆ ಕುಮಾರ ಎನೆ
ಸತ್ತೆನೆಂತೆಂಬ ಪರಿ ಏನೆಂದು ಬೆಸಗೊಳಲ್
ಉತ್ತಮನ ಮುಗ್ಧತೆಗೆ ಮಂತ್ರಿಗಳ್ಮತ್ತಳಲ್
ಕಡೆವುತ್ತ ಓಹಿಲಯ್ಯನ ನೋಡುತಳುತಲ್ಲಿ
ಒಡನಳುತ ಬರೆ ಸಕಲ ಪರಿವಾರಮಂತಲ್ಲಿ
ಬಾಳೆಯ ಬನಂ ನಡೆದು ಬರ್ಪಂತೆ ನಡೆದು ಬರೆ
ಬಾಲೆಯರ್ಕೈಯೆತ್ತಿ ಬಡಿದುಕೊಳುತ್ತೈಯ್ದೆ ಬರೆ
ಲೆಂಕರೊಂದೆಸೆಗೆ ಭಾಷೆಯ ಸತಿಯರೊಂದೆಸೆಗೆ
ಬಿಂಕದಿಂದಾಳ್ಕುದುರೆ ಗಜಘಟೆಗಳೊಂದೆಸೆಗೆ
ಎಣ್ಣೆ ತುಪ್ಪದ ಕೊಡಂಗಳ ಸಾಲ್ಗಳೊಂದೆಸೆಗೆ
ತಿಣ್ಣವೆನಿಸುವ ಪಳಿಯ ದಿಂಡುಗಳು ಒಂದೆಸೆಗೆ
ಮರುಗಿ ಬರುತಿರೆ ಬಂದು ರುದ್ರಭೂಮಿಯ ಕಂಡು
ತೆರ ಹರಿದು ಶೋಧಿಸಿದ ದುಃಖದಿ ಮನಂಗೊಂಡು
ಚಂದನದ ತರುಗಳಂ ಇತ್ತರದಿ ಪರಿಕಲಿಸಿ
ಕಂದಗಿಲ ದಿಂಡುಗಳನೆಡೆಗೆಡೆಗೆ ಕೈಗೊಳಿಸಿ



ಮಾಡಿರ್ದ ಚಿತೆಯ ಮೇಲೆಯರಸನಂ ಪಟ್ಟಿರಿಸಿ
ಕೂಡೆ ಚಂದನ ಜವಾಜಿಯನಲ್ಲಿ ಮೇಳೈಸಿ
ವರ ಕುಮಾರಕನಿಂದೆ ತಲೆಕೊಳ್ಳಿಯಂ ಕೊಡಿಸಿ
ಭರದಿಂದ ತಂದೊಂದು ನೆಳಲೊಳಗೆ ಕುಳ್ಳಿರಿಸಿ
ಕೂಡೆ ನೆರೆದೋಹಿಲಯ್ಯನ ಸಮೀಪದೊಳಿರಲ್
ನೋಡೆ ಶಬವಂ ಪೆರ್ಚಿ ಕಿಚ್ಚು ಹತ್ತುತ್ತಿರಲ್
ಭರದಿಂ ಕಪಾಲ ಮೋಕ್ಷವನಾಲಿಸುತ್ತಿರಲ್
ನೆರೆನೆರೆದು ತನತನಗೆ ನಿಂದು ಶೋಕಿಸುತಿರಲ್
ಆಗಳಾ ಪರಮ ವೈರಾಗ್ಯನಿಧಿ ಎಂದೆನಿಪ
ನಾಗಭೂಷಣನ ಪರಮಜ್ಞಾನಿ ಎಂದೆನಿಪ
ಓಹಿಲಯ್ಯಂ ನುಡಿದನೊಂದು ಮಾತಂ ನೋಡ
ಆಹಾ ಶಿವಜ್ಞಾನಿ ತಿಳಿದು ನುಡಿದಂ ನೋಡ

ಎಂದು ಬರ್ಪಂ ತನ್ನ ತಂದೆ ಎಂದೆನುತಮಿರೆ
ಮುಂದುಗೆಟ್ಟೆಲ್ಲರುಂ ಮುಗ್ಧತೆಗೆ ನೋವುತಿರೆ
ಅಲ್ಲಲ್ಲ ಪೇಳಿರೇ ಕೆಳ್ದಪೆನಿದೊಂದುವಂ
ತಲ್ಲಣಿಸಬೇಡ ತಿಳಿಪಿರಿ ಮಾತಿದೊಂದುವಂ
ಎನುತುಮಿನ್ನೇನಪ್ಪನೆಂದು ಬರ್ಪಂ ಪಿತಂ
ಎನಗೆ ನೀವರಿಪಿರೇ ಕಂಡರಿಯೆ ವಿಶ್ರುತಂ
ಎನಲಲ್ಲಿ ಪಿರಿಯರಿರ್ದೇಲೆ ಕುಮಾರಕ ಕೇಳ
ಮನದೊಳೆರಡಿಲ್ಲದತ್ಯಂತ ಮುಗ್ಧನೆ ಕೇಳ
ನಿಮ್ಮಯ್ಯನೆಂದುಮುಂ ಬಾರನೈ ಎಲೆ ಕಂದ
ನಿಮ್ಮರಸನುರಿದುಪೋದಂ ಬಾರನೆಲೆ ಕಂದ
ಸತ್ತನುರಿದಂ ಭಸ್ಮವಾದನಿನ್ನುಂ ಬಾರ
ಉತ್ತಮ ಗುಣಾಭರಣನೆಂದುಮಿನ್ನುಂ ಬಾರ
ಎನೆ ಕುಮಾರಕನಲ್ಲಿ ನೆರೆ ಕೌತುಕಂಗೊಂಡು
ಮನದೊಳ್ಮಹಾ ವಿರಕ್ತಿಯನೊಚ್ಚತಂಗೊಂಡು
ಮುಂದಿರ್ದ ಪಡಿಯರಂಗೆಂತೆನಲವಂಗಿಂತೆ
ಪಿಂದಿರ್ದ ಹಡಪಿಗಂಗೆಂತೆನಲವಂಗಿಂತೆ
ಕೆಲದವರ್ಗೆಂತೆಂದಡವರ್ಗೆ ಇಂತೀ ತೆರಂ
ಬಲದವರ್ಗೆಂತೆನಲವರ್ಗೆ ಇಂತೀ ತೆರಂ

ಎಲ್ಲರಂ ಕೇಳಲೆಲ್ಲರ್ಗೆ ಇಂತೀ ಪರಿಯೆ
ಬಲ್ಲರಂ ಕೇಳಲೆಲ್ಲರ್ಗೆ ಇಂತೀ ಪರಿಯೆ

ಎಂದು ಕೇಳ್ವಾಗಳೋರ್ವಂ ಭಕ್ತನರಿದಲ್ಲಿ
ಎಂದು ಕಂಡರಿಯನಂತೀ ಭವನೆ ತಾನಿಲ್ಲಿ
ಅತಿ ವಿರಕ್ತಂ ಶಿವಸ್ನೇಹಿ ನಿಸ್ಪೃಹರಂ
ಅತಿಶಯ ಶಿವೈಕ್ಯ ಸಮ್ಯಜ್ಞಾನಿ ತತ್ಪರಂ
ಧರೆಗೆ ಪೊಸತೀ ಕುಮಾರಂ ಕೇಳ್ದ ಪರಿ ಎನಗೆ
ಅರಸು ಮಕ್ಕಳ ನುಡಿ ಇದಲ್ಲ ಕೌತುಕವೆನಗೆ
ಇಲ್ಲಿ ಸತ್ಯವನೆ ನುಡಿದಪೆನಾದುದಕ್ಕೆಂದು
ಇಲ್ಲಿ ಮನದೊಳಗೆ ಭಕ್ತಂ ನೆನೆಯುತಿರಲಂದು
ತನಗೆಂತೆನುತ್ತಾ ಕುಮಾರಕಂ ಕೇಳ್ವುತಿರೆ
ನಿನಗೆ ಈ ವಿಧಿ ಎಂದು ಭಕ್ತನುಳ್ಳುದನುಸುರೆ
ಈ ಸಾವುದಂ ಮಾಣಿಸಲ್ಕೆ ಬಲ್ಲವರುಂಟೆ
ಈ ಸಮರ್ಥಿಕೆಯುಳ್ಳ ನಿತ್ಯ ಸಂಪದರುಂಟೆ
ಎನೆ ಭಕ್ತನುಂಟೆಂಬ ಮಾತು ಸತ್ಯಂ ಮಾತು
ನಿನಗೆ ಪೇಳ್ವೆಂ ನಂಬು ಎನ್ನ ಮಾತೇ ಮಾತು
ಸಕಲ ವೇದಂ ಪೊಗಳ್ವ ಶಂಭುಶಂಕರನುಂಟು
ಸಕಲ ಸುರ ನಿಕರವರಿಯದ ಚಂದ್ರಧರನುಂಟು
ತ್ರಿಪುರವಂ ನೊಸಲಕಣ್ಣಿಂ ಸುಟ್ಟ ಹರನುಂಟು
ಕುಪಿತದಿಂ ಕಾಮನಂ ಭರದಿಯುರುಪಿದರುಂಟು
ಕಾಲನಂ ಸುಟ್ಟು ಬೊಟ್ಟಿಟ್ಟ ವಿಷಧರನುಂಟು
ಮೇಲೆನಿಪ ಪುಲಿದೊವಲ ಸುಟ್ಟ ಪಶುಪತಿಯುಂಟು
ಭಕ್ತಸಂಕುಳವನಗಲದ ಕೃಪಾಕರನುಂಟು
ಭಕ್ತರೊಡನೊಡನೆ ತಿರುಗುವ ದಯಾಪರನುಂಟು
ಸತ್ಯನುಂಟಭವನುಂಟಾನಂದಮಯನುಂಟು
ನಿತ್ಯನುಂಟುಗ್ರನುಂಟಪ್ರತಿಮ ಶಿವನುಂಟು
ಗೌರೀವರಂ ಗುಣಾತೀತನಹಿಧರನುಂಟು
ಸೌರಾಷ್ಟ್ರಪತಿ ಸೋಮನಾಥನುಂಟೈಯುಂಟು
ಇಲ್ಲಿಗಿಪ್ಪತ್ತು ಯೋಜನದೊಳಿರ್ದಪನೆಂದು
ಸಲ್ಲೀಲೆಯಿಂದೆ ಭಕ್ತಂ ಪೇಳುತಿರಲಂದು



ಪೇಳ್ದವರ ಹಸ್ತಮಂ ತನ್ನ ಶಿರದೊಳಗಿಟ್ಟು
ತಾಳ್ದವರ ವಚನಮಂ ಚಿತ್ತದೊಳಗಿಂಬಿಟ್ಟು
ಅವರೆ ಗುರುವಾಗಿ ಕೈಕೊಂಡನೋಹಿಲದೇವ
ಅವರ ನುಡಿಯಿಂ ಧನ್ಯನಾದನೋಹಿಲದೇವ

ಉಟ್ಟ ಸಪುರಮನಲ್ಲಿ ಪೀಳ್ದನೆಲ್ಲಂ ನೋಡ
ಬಿಟ್ಟನಾ ರಾಜ್ಯಮಂ ಹಾರಲೊಡೆದಂ ನೋಡ
ನಿಂದು ಕೌಪೀನನಾದಂ ಪುರಜನಂ ನೋಡೆ
ಬಂದ ಪರಿಜನವೆಲ್ಲವಳಲುತ್ತಮಿರೆ ಕೂಡೆ
ಭಸಿತಮಂ ಕಾಯದೊಳಗುದ್ಧೂಳನಂ ಮಾಡಿ
ಶಶಿಧರನ ಸೋಮನಾಥನ ರೂಪನೊಡಗೂಡಿ
ಮನದೊಳಜ್ಯೋತಿ ಬೂದಿಯೊಳಗಲಂತಿರಿಸಿ
ನೆನಹಿಂದ ನೆಮ್ಮಿ ಚಿತ್ತದೊಳಪ್ಪಿ ನೆರೆ ಬೆರಸಿ
ಪೊರಮಟ್ಟನಮ್ಮಮ್ಮ ಮಾಯಾ ವಿಮರ್ದನಂ
ತೆರಹಳಿದು ನಿಜವುಳಿದ ವೈರಾಗ್ಯವರ್ಧನಂ
ಕಾಲೊಳೊರಳ್ವ ಮಂತ್ರಿಗಳನುಲ್ಲಂಘಿಸುತೆ
ಲೀಲೆಗೊಟ್ಟೊರಲುವಬಲೆಯರನೀಕ್ಷಿಸಿ ನಗುತೆ
ಹಳಿವಳಿಸಿ ಪಲುಂಬುವ ದಾದಿಯಂ ಮನ್ನಿಸದೆ
ತಿಳಿವಳಿದು ಕಳವಳಿಪ ಸಚಿವರಂ ಸಾಗಿಸದೆ
ನಡೆತಂದನುತ್ತಮ ವಿರಕ್ತನತಿ ನಿಷ್ಠೆಯಿಂ
ನಡೆತಂದನಲ್ಲಿ ಸುಖಮುಖ ಶೈವ ನಿಷ್ಠೆಯಿಂ
ಕಾಲ್ಗಳೊಳ್ಪರಳೊತ್ತಿ ಬೊಕ್ಕೆಗಳ್ಮಿಗೆ ನೆಗೆಯೆ
ಸಾಲ್ಗೊಂಡು ಕಾಲಬೆರಳಿಂ ನೆತ್ತರಂ ಒಗೆಯೆ
ಬಿಸಿಲೊಳಂ ನೆಳಲೊಳಂ ಮಳೆಗಳೊಳ್ಚಳಿಗಳೊಳ್
ಪಸಿವಿನೊಳ್ತೃಷೆಯೊಳ್ಗಾಳಿಯೊಳ್ಧೂಳಿಯೊಳ್
ಶಿವನ ರೂಪಂ ಮನದೊಳಿಟ್ಟು ನೋವಂ ಮರೆದು
ಭವನ ಮೂರ್ತಿಯ ಮನದೊಳಿರಿಸಿ ತನ್ನಂ ಮರೆದು
ಬರುತಿರ್ದನೋಹಿಲಯ್ಯಂ ಶಿವಮಹೋತ್ಸಾಹಿ
ಬರುತಿರ್ದನೇಕ ನಿಷ್ಠಂ ಶಂಕರಸ್ನೇಹಿ

ಬರುತಲ್ಲಿ ಸೋಮನಾಥನ ಕಳಶಮಂ ಕಂಡು
ಧರೆಯೊಳಗನಾಥ ನಾಥನ ಕಳಶಮಂ ಕಂಡು

ಮೆಯ್ಯಿಕ್ಕಿ ಮೆಯ್ಯಿಕ್ಕಿ ಪುಳಕಮಂ ಹೇರುತುಂ
ಕೆಯ್ಯೆತ್ತಿ ಕೆಯ್ಯೆತ್ತಿ ಕರುಣಮಂ ತೋರುತುಂ
ಕೃತಕೃತ್ಯನಾಗುತುಂ ಬಂದು ಪುರಮಂ ಪೊಕ್ಕು
ಅತಿ ಚೆಲ್ವ ವೀಥಿಯಂ ನೋಡುತೆ ಮನಂ ಮಿಕ್ಕು
ಬಂದು ಶಿವನಿಳಯಮಂ ಪುಗುತಂದು ನಲವಿಂದೆ
ಸಂವಣಿಪ ನೇಹದಿಂ ಪರಿತಂದು ಭರದಿಂದೆ
ದೇವಪತಿಯಂ ದೇವಕುಲಚಕ್ರವರ್ತಿಯಂ
ದೇವಗುರುವಂ ಭಕ್ತಜನಮನೋಮೂರ್ತಿಯಂ
ಏಕನಂ ಸಾಕಾರನಂ ಲೋಕನಾಥನಂ
ಶ್ರೀಕಂಠನುನ್ನತಾನೇಕ ಪರರೂಪನಂ
ಶೂಲಿಯಂ ಕಾಪಾಲಿಯಂ ಶಿರೋಮಾಲಿಯಂ
ಭಾಲಾಕ್ಷನಂ ತ್ರ್ಯಕ್ಷನಂ ಚಂದ್ರಮೌಳಿಯಂ
ಕಾಮಹರನಂ ವ್ಯೋಮಕೇಶನಂ ಭೀಮನಂ
ಪ್ರೇಮಜನಕಾಮಿತಸ್ತೋಮನಂ ಸೋಮನಂ
ಮನ್ಮಥನಂ ಖ್ಯಾತನಂ ಶರಣಯೂಥನಂ
ಅಮ್ಮಮ್ಮ ಸೌರಾಷ್ಟ್ರಪತಿ ಸೋಮನಾಥನಂ
ಕಂಡು ನಡೆಗೊಂಡು ನೆಲೆಗೊಂಡ ನೇಹದೊಳಪ್ಪಿ
ತಂಡತಂಡದ ಪುಳಕ ದಿಂಡೆಗೊಳುತಿರಲಪ್ಪಿ
ಬಿಗಿದಪ್ಪಿ ಬಿಡದಪ್ಪಿ ಕೊಂಡಪ್ಪಿ ಮತ್ತಪ್ಪಿ
ತೆಗೆದಪ್ಪಿ ಕೊಂಡಾಡಿ ಮುಂಡಾಡಿಸುತ್ತಪ್ಪಿ
ನೀನೊಡೆಯನೆನಗೆ ನಿನಗಾಳು ನಾಂ ಶಂಕರಾ
ಏನೆಂಬೆ ಎನ್ನ ಪುಣ್ಯದ ನೆಲೆಯ ಶಶಿಧರಾ
ಸಾವಿಂಗೆ ಭೀತಿಗೊಂಡೈತಂದೆನೆಲೆ ತಂದೆ
ಸಾವರಂ ಕಂಡಂಜಿ ಬಂದೆ ನಾನೆಲೆ ತಂದೆ
ನಂಬಿ ನಿನ್ನಂಘ್ರಿಯಂ ಮರೆಯೊಕ್ಕೆನೆಲೆ ತಂದೆ
ನಂಬಿದೆಂ ನಂಬಿವೆಂ ತೊಳ್ತಾದೆನೆಲೆ ತಂದೆ
ಸಾಯುಲೀಯದೆ ಸಲಹು ಸತ್ಯನೇ ನಿತ್ಯನೇ
ಸಾಯಲಾರೆಂ ಕರುಣಿ ಸತ್ಯಾಧಿಸತ್ಯನೇ
ಎಂದು ಕಡು ಭೀತಿಯಿಂ ನೊಂದು ಬಿನ್ನೈಸುತಿರೆ
ಮುಂದೆ ಕುಳ್ಳಿರ್ದೋಹಿಲಯ್ಯನೊಪ್ಪುತ್ತುಮಿರೆ

ಪ್ರಥಮಸ್ಥಲ ಸಂಪೂರ್ಣಂ



## ದ್ವಿತೀಯ ಸ್ಥಲ

**ವೃತ್ತ॥** ನೋಡದೆ ರಾಜ್ಯಮಂ ಸಕಲ ಸಂಪದಮಂ ಬಿಸುಟೆನ್ನ ಚಿಂತೆಯಿಂ।
ಕೂಡಿದ ಚಿತ್ತದಿಂ ನಡೆದು ಬಂದನಿವಂ ಭಲಿಯೆಂದು ಸಂತಸಂ॥
ಮಾಡುತ ತನ್ನ ಮುಂದೆ ಮೆರೆದೋಹಿಲದೇವನ ಮುಗ್ಧಭಾವಮಂ।
ನೋಡುತ ಸೋಮನಾಥನೆಸೆದಂ ನಿಜ ಭಕ್ತಮನೋರಥ ಪ್ರದಂ॥

**ಗದ್ಯ॥** ಇಂತು ಸೋಮನಾಥನ ಮುಂದೆ ಕುಳ್ಳಿರ್ದೋಹಿಲಯ್ಯ ತಂದೆಗೆ ಮುದ್ದಿಸುವ ಕಂದನಂತೆ ದೇವ ದೇವ ಜನನ ಮರಣಕ್ಕಂಜಿದೆಂ ಮಾಯೆಗೆ ಮಲ್ಲಳಿಗೊಂಡೆಂ ತಾಪತ್ರಯಕ್ಕೆ ತಲ್ಲಣಿಸಿದೆಂ ನೋವಿಂ ನಾಣ್ಚಿದೆಂ ಸಾವಿಂಗೆ ಸೆಡೆದೆಂ ಅಜಾತ ನಿರ್ಮಾಯ ನಿರ್ಗುಣ ನಿರ್ಮಳ ನಿತ್ಯ ಶಿವಶಿವ ಕರುಣಿ ಸಾಯಲೀಯ್ಯದೆ ಸಲಹೆನ್ನ ಸಲಹೆಂದು ಜಿನುಗಿ ಜಿನುಗಿ ಅತ್ತತ್ತು ಬಿಕ್ಕಿ ಬಿಕ್ಕಿ ಬಿಲ್ಲೆಗರೆವ ಪರಮ ಭಕ್ತನ ಮುದ್ದು ನುಡಿಗಳಂ ಕೇಳುತ್ತಿರಲಿರುಳಾಗ ಶಿವಪರಿಚಾರಕ ಮುಖ್ಯಂ ಕೆಯ್ದೀವಿಗೆವೆರಸು ಶಿವಾಂಗಣ ರಂಗಮಂಟಪಂ ಶುಕನಾಸಮಂ ಶೋಧಿಸುತ್ತುಂ ಗರ್ಭಗೃಹಕ್ಕೆ ಬಂದು ಶಿವಲಿಂಗದ ಕೆಲಬಲನಂ ನೋಡುತ್ತುಂ ಬರ್ಪಾಗಳೋಹಿಲಯ್ಯಂ ಬಾಡಿದ ಲತೆಯಂತೆ ಬಿದಿಗೆಯ ಚಂದ್ರನಂತೆ ಬಳಲ್ದ ಚಕೋರನಂತೆ ಮಾಗಿಯ ಕೋಗಿಲೆಯಂತೆ ಮಳೆಗಾಲದ ಹಂಸನಂತೆ ಚಂದ್ರಧರನ ಮುಂದೆ ನಿಬ್ಬರಗಾಗಿ ಕುಳ್ಳಿರ್ದ ಓಹಿಲೈಯ್ಯನಂ ಕಂಡು ಇರುಳಿಲ್ಲಿ ಏಕಿರ್ದಪೆ ಎಂದು ನುಡಿಯೆ ನುಡಿಯದಿರೆ ಕೈವಿಡಿದೆತ್ತಿ ತೆಗೆವಾಗ ಶಿವಲಿಂಗಮಂ ಬಿಡದೆ ಬಿಗಿಯಪ್ಪಿಯೊಡೆಯನಂ ಬಿಡೆಂ ಬಿಡೆಂ ಅಗಲಲಾರೆನಾರೆನೆನಲ್ಬಲ್ಪಿಂದೆ ಳತಪರ್ಗಳಭವಾ ಶಂಕರಾ ಶಿವನೆ ಭವನೆ ಗುರುವೆ ತಾಯೆ ತಂದೆಯೆ ತವರೆ ಪುಣ್ಯನೆ ಗತಿಯೆ ಮತಿಯೆ ಪತಿಯೆ ಕಣ್ಣೆ ಶಿವಘೋಮೊರೆಯೋ ಎಂದಳಲುತ್ತುಂ ಬಳಲುತುಂ ಬಾಯ್ವಿಡುತಿರಲದಂ ನೋಡದೆ ಶಿವಜ್ಞಾನ ಸೂತ್ರಮಂ ತಪ್ಪದಂತೆ ಪೊರಮಡಿಸಿ ಕವಾಟಂಗಳಂ ಮುಚ್ಚಿ ಮುದ್ರಿಸಿ ಪೂಜಾರಿ ಪೋಗಲಿತ್ತಲು,

ಓಹಿಲ ದೇವಂ ಪೊರಗಿರ್ದು ಎಲೆ ಅಯ್ಯ ಎಲೆ ತಂದೆ ಎಲೆ ದೇವ ನಿನ್ನಂ ನೋಡದೆಂತು ನಿಲಲಾರ್ಪೆಂ ನಿನ್ನಂ ನುಡಿಸದೆಂತು ಬರ್ದುಂಕುವೆಂ ನಿನ್ನಂ ಸೋಂಕದೆಂತು ಸೈರಿಪೆಂ ನಂಬಿದನನಗಲ್ಚುವರೆ ನಚ್ಚಿದನಂ

ಬೆರ್ಚಿಸುವರೆ ಕಾಲ್ಪಿಡಿವವನಂ ಕಾಣದಂತಿರ್ಪರೆ ಪೊರ್ದಿದನಂ ಪೊರ
ಮಡಿಸರೆ ಕೂಡಿದನಂ ಕೊಲ್ವರೆ ಎನುತುಂ ಬಾಗಿಲಂ ನೆಮ್ಮಿ ಪೊಸಂ
ತಿಲೊಳ್ ತಲೆಯಿಟ್ಟು ಕರುಣವುಂ ಪತ್ತಿ ವಿರಹಾಗ್ನಿ ಎತ್ತಿ ಹರಣಂ
ಹೊತ್ತಿ ಕರಣಂ ಕಲಂಕಿ ಮನ ಉಕ್ಕಿ ತನು ಬೆಂದು ಅಳಲಾವರಿಸಿ
ಕಾಣದ ಜಾತಿ ಕಣ್ಗೆಡಿಸಿ ಮಾಣದಳ್ಕಿ ಮುಂದುಗೆಡಿಸಿ ಒದರುತಂ
ಬೆದರುತಂ ಇರ್ಪ ನಿಜ ಭಕ್ತನ ಶಂಕುವಾರ್ಣಂ ವಿಕ್ಕಿ ಪತ್ತಿದ
ಶೋಕವುಂ ಕೇಳಲಾರದೆ ಭಕ್ತಜನಬಾಂಧವಂ ಕರುಣೆಗಳರಸಂ
ಕೂಡಿದರ ಕಾಮಧೇನು ನೋಡಿದರ ಕಣ್ಣ ಪುಣ್ಯ ಬೇಡಿದರ ಕಲ್ಪಭೂಜಂ
ಸಾರ್ದರ ಸಿದ್ಧರಸಂ ಪಾರ್ದರ ಪರಮ ಗುರು ನೆನೆವರ ನಿಧಾನಂ
ಅರ್ಚಿಸುವರಾಯುಂ ಶ್ರೀಯುಮೆನಿಪ ಸೌರಾಷ್ಟ್ರಪತಿ ಸೋಮನಾಥಂ
ಕದವಂ ತೆರೆಯಲನುವಾನಿಸುತ್ತೊಲ್ಲದೆ ತಾಂ ಮಾಡಿದ ಶಿವಾಜ್ಞೆ ತಪ್ಪ
ಲಾಗದೆಂದೆನ್ನ ಭಕ್ತನನೆಲ್ಲರ್ಗರುಪಿ ತೋರುವೆನೆಂದು ನಡೆತಂದು ನಟ್ಟಿರು
ಳೊಳ್ಪಟ್ಟಿರ್ದ ಶಿವನಿಯೋಗಕ್ಕೆ ಮುಖ್ಯನಪ್ಪ ರಾಜಮುದ್ರಾಹಸ್ತನಪ್ಪ
ನನಂ ಗಂಟಿಲಂ ತ್ರಿಶೂಲದೊಳೊತ್ತಿ ಎನ್ನಣುಗಂ ಎನ್ನ ಭಕ್ತಂ
ಓಹಿಲ ದೇವನಂ ಪೊರಗಿರಿಸಿ ಕದವಂ ಜಾಚಲಾಗದು ಬೇಗಂ ತಂದೊ
ಳಪುಗಿಸೆಂದು ಕನಸಿನೊಳ್ಬೆಸಸಿ ಪೋಗೆ

ಪೂಜಾರಿಯೋಜೆಗೆಟ್ಟೆಚ್ಚತ್ತು ಮೂರ್ಛೆವೋಗಿ ಬೆಚ್ಚಿ ಬೆದರಿಯುಂ
ತಿಂತು ನಡನಡುಗಿ ಎಂತಕ್ಕೆ ನಿಂದು ಹೋದ ಹರಣವುಂ ಹಸರಿಸಿಕೊಂಡಾ
ಗಳೆ ಪೊರಮಟ್ಟು ಒಡನೆಯೆ ಪರಿಚಾರಕರ್ಗರಿಪುತ್ತುಂ ಕೂಡಿಕೊಂಡು
ಮಧ್ಯರಾತ್ರಿಯೊಳ್ ಜೋದ್ಯಂಬಡುತುಂ ಶಿವನಿಳಯಕ್ಕೆ ಬಂದು ಮುದ್ರೆ
ಯನೊಡೆದು ಕದವಂ ತೆರೆದು ಓಹಿಲಯ್ಯನಂ ನೋಡಿ ಸಾಮರ್ಥ್ಯದ
ಸಿರಿಯೆ ಭಕ್ತಿಭರಿತನೆ ಮುಕ್ತಿಚರಿತನೆ ಒಳಗೆ ಪೋಗೆಂದೊಳಪೊಗಿಸಿ
ಮತ್ತೆ ಕದವನಿಕ್ಕಿ ಬಿಯ್ಯಗಂಗೊಳಿಸಿ ಮುದ್ರೆಯನಿಕ್ಕಿ ಇಂತಪ್ಪ
ಕಾರಣಿಕನಂ ಕಂಡು ಕಂತುಹರನ ಕೂಡೆಂತಿರ್ಪನೋ ಎಂದು ತಮತಮಗೆ
ಗವಾಕ್ಷೆಯ ವಿವರದೊಳ್ಮೆಲ್ಲನೆ ನೋಡಿ ಮನವಿಟ್ಟು ನೋಡುತ್ತಿರಲೋಹಿ
ಲದೇವನೊಳಪೊಕ್ಕು ಜೀವಂ ಬಂದಂತೆ ಕಣ್ಪಡೆದಂತೆ ಪರಿತಂದು ಸೋಮ
ನಾಥನಂ ತೆಗೆದಪ್ಪಿ ಬಿಗಿಯಪ್ಪಿಯಮರ್ದಪ್ಪಿ ಸೋಂಕಿನೊಳಪ್ಪಿ ಮೆಯ್ಯೊ
ಳಪ್ಪಿ ಕಣ್ಣೊಳಪ್ಪಿ ಮನದೊಳಪ್ಪಿ ಚಿತ್ತದೊಳಪ್ಪಿ ತಣಿವಿಡಿದು ಸುಖಂ
ಬಡೆದು ಕಂಡು ಕಂಡು ಶಿವ ಮರುಳ್ಗೊಂಡು ಆಲಿಂಗನವುಂ ಸಡಿಲ್ಚಿ



ಪುಟವೆಳ್ದು ಹೊಮ್ಮಿ ಹೊರಳ್ದು ಜುಮ್ಮನೆ ಬೆಮರ್ತು ಕೊರ್ಬಿ ಕೊನರ್ತು
ಉಬ್ಬಿ ಯುರುಳ್ದುಬ್ಬರಿಸುತಿರ್ಪ ಓಹಿಲಯ್ಯನಂ ಶ್ರೀ ಹಸ್ತದಿಂ
ಸೋಮನಾಥಂ ಬರತೆಗೆದು ಮುಂದಿರಿಸಿಕೊಂಡು ಸವಿ ನುಡಿಗಳಿಂ ಸಂತ
ವಿಡುತ್ತಮಿರೆ ಪೂಜಾರಿಗಳ್ಕಂಡು ಸೋಜಿಗಂಬಡುತ್ತುಂ ಬೆರಗಾಗಿ ನೋಡ
ಲಣ್ಮದೆ ಪೊರಮಡುತ್ತಿರಲಾದಿತ್ಯೋದಯವಾಗಲ್,

ಎಂದಿನಂದದೆ ಸುಪ್ರಭಾತ ಸಮಯ ಸಮುದ್ಭೂತ ಮೃದು ಮೃದಂಗ
ಭೇರೀರವ ಪಟಹಶಂಖ ಕಹಳಾನಾದಂಗಳುಂ ಸಮಸ್ತಭಕ್ತಜನ ಭಜಿತ
ಶುದ್ಧ ಸಂಕೀರ್ತನ ಸಂಯುಕ್ತ ಗಂಭೀರಧ್ವಾನಪುರಾತನ ಗೀತರವಂಗಳುಂ
ಬುಧನಿಕರವದನೋದ್ಗತ ಮಧುರತರ ಗದ್ಯಪದ್ಯ ಸೇವ್ಯಕಾವ್ಯ ನಾಟಕ
ಪ್ರಸಂಗಂಗಳುಂ ಶುದ್ಧ ರಸಭರಿತ ಶಿವಧರ್ಮೋತ್ತರಾದಿ ಮಹಾಪುರಾ
ಣಂಗಳುಂ ವಿವಿಧ ಋಷಿಚರಿತ ಋಗ್ಯಜುಃ ಸಾಮಾದಿವೇದಘೋಷಂ
ಗಳುಂ ಪುಣ್ಯಪಾಠಕ ಪ್ರಕರ ರವಸ್ತೋತ್ರ ರಸಾಳಾಪಂಗಳುಂ ನವರಸ
ಪ್ರಜ್ವಲಿತ ಸಂಜನಿತ ತೂರ್ಯತ್ರಯಾರಂಭ ನರ್ತಕ ನರ್ತಕೀಲಾಸ್ಯಂಗಳುಂ
ಸೌರಾಷ್ಟ್ರಪತಿ ಸೋಮನಾಥನಾಲಯ ದೊಳ್ಬೋರೆಂದೋರಂತೆ ನೆಗಳೆ
ಶಿವಂಗೆ ಸುಖ ಮಜ್ಜನಂ ಮಾಡಿಸಿ ಸಕಲ ಸುಕುಮಾರಕರ ಕುಸುಮ ಪ್ರಕ
ರದಿಂ ಸಿಂಗರಂ ಮಾಡಿ ಧೂಪದ ಸವಿಯನಿತ್ತಾರತಿಗಳಂ ಬೆಳಗಿ ಅಮೃ
ತಾನ್ನವನಾರೋಗಿಸಲಿತ್ತು ರಸಪೊಸರ್ವ ತಾಂಬೂಲಮನಿತ್ತು ಲೋಕೋ
ನ್ನತಾಧಿಕಾರಿ ಮುಖ್ಯರೆಲ್ಲರುಂ ರಂಗಮಂಟಪದೊಳ್ನೆರದಿರಲೋಹಿಲಯ್ಯನಂ
ಶಿವಂಗೆ ಬಿನ್ನಪಂ ಮಾಳ್ಪನಂ ಸಾವಿಂಗಂಜ ಶರಣ್ಬೊಕ್ಕನಂ ಕಾರುಣ್ಯ
ಕಟಾಕ್ಷದಿಂ ನೋಡಿ ರಕ್ಷಿಸೆಂಬ ಮಗನ ಬಿನ್ನಪಮಂ ಸೋಮನಾಥ
ಕೇಳ್ದು ಎಲೆ ಕಂದ ನಿನ್ನ ಮನವಾರೆ ಪನ್ನೆರಡು ಬರಿಸಂ ಹಿಗ್ಗಿ ಪೊರೆ
ಯೇರಿ ಗುಗ್ಗುಳವುಂ ತಂದೆಮಗಿಕ್ಕೆ ಸಗ್ಗದವರುಂ ಬೆರಗಾಗೆ ಶರೀರಂ
ಬೆರಸು ಕೊಂಡೊಯ್ದಪೆವೆನೆ ಹೊಂಗಿ ಹೊರೆಯೇರಿ ನೋಡಿ ನಲಮೇರಿ
ಹಿಗ್ಗಿ ಹರುಷಂದಳೆದೋಹಿಲಯ್ಯಂ ಸಾಹಸನಿಧಿ ಸೋಮನಾಥನಂ
ಬೀಳ್ಕೊಂಡು

ಧೂಪದ ನಿಮಿತ್ತಂ ದ್ವೀಪಾಂತರಕ್ಕೆ ಪೊರಮಡುವಾಗಳಲ್ಲಲ್ಲಿಯ
ಶಿಷ್ಯರುಂ ಸೇವ್ಯರುಂ ಬಲ್ಲಿದರುಂ ಪಸಾಯಿತರುಂ ಸಚಿವರುಂ ವಡ್ಡಬೆ
ವಹಾರಿಗಳುಂ ಭೂಪತಿಗಳುಂ ತಂದಾರಾಧಿಸಿದ ದಂಡಿಗೆಯ ಧವಳ
ಚಕ್ರದ ಸಿಗುರಿಯ ಚಾಮರದ ಕಮನೀಯ ಕಮಂಡಲದ ಹಡಪಿಗರ

ಬಾಹತ್ತರ ನಿಯೋಗಿಗಳ ಗುಗ್ಗುಳದ ಕಂಬಿಕಾರರ ಮಹಾ ಮಾಹೇಶ್ವರರ ಹೊಗಳ್ವ ಜನಂಗಳಂ ವಂದಿಗುಡುತ ತನ್ನ ಮುನ್ನಿನ ಪದವಿಯಿಂ ಬೇಱೊಂದು ಶೈವ ಸಾಮ್ರಾಜ್ಯಂ ನೂರ್ಮಡಿಸೆ ಪುರಮಂ ಪೊಱಮಟ್ಟೂರೂರ್ಗಳಂ ಕಳೆದು ನಾಡಂ ಪಾಯ್ದು ನದಿಗಳಂ ಮೀಱಿ ಬೆಟ್ಟಂಗಳನೇಱಿ ಗಟ್ಟದೊಳ್ನಡೆದು ಪಟ್ಟಣಂಗಳಂ ಬಿಟ್ಟು ಶಿವಕ್ಷೇತ್ರಂಗಳಂ ಕಂಡು ಪ್ರಸಾದಂಗಳಂ ಕೊಂಡು ವಿಂಧ್ಯಂಗಳಂ ಪೊಕ್ಕು ವ್ಯಾಳ ಮೃಗಂಗಳಂ ಮಿಕ್ಕು ದೇಶಂಗಳನುತ್ತರಿಸಿ ಸಮುದ್ರಂಗಳಂ ಮೀಱಿ ದ್ವೀಪಂಗಳಂ ಕಳೆದು ರಸ ಒಸರ್ವ ಧೂಪಕ್ಕೆ ಧೂಪಾರತಿಯಂ ಕೊಟ್ಟು ಅಡಿಗಡಿಗೆ ಮೆಯ್ಯಿಕ್ಕುತಂ ತೂಗುತುಂ ತೇಗುತುಂ ಬಳಲುತುಂ ಬರ್ದುಂಕುತುಂ ಪಲವೆಡೆಗೆಯ್ದಿ ಧೂಪದ ಬಲಂ ಭೋಱೆಂದು ಬರೆ ಸೌರಾಷ್ಟ್ರ ಪುರಜನಂ ಬೆರಸಿಯುಲ್ಲಿಯ ರಸಂ ಇದಿರ್ಗೊಳುತ್ತಿರೆ ಭಕ್ತರ್ಗುಡಿಗಟ್ಟೆ ಬೌದ್ಧಬಾರ್ಯಾರೆ ಜೈನರ್ಜವಂಗುಂದೆ ಚಾರ್ವಾಕರ್ಚೆಲ್ಲಿಪೊಗೆ ಪರಮ ಹರುಷದಿಂ ಪುರಮಂ ಪೊಕ್ಕು ಶಿವನಿಳಯಕ್ಕೆ ಬಂದು ಸಮಸ್ತ ದೇವರ್ಕಳ ಗುರುವಂ ನಿರುಪಾಧಿಕ ಜ್ಯೋತಿಯಂ ಪರಿಮಳರೂಪನಂ ಭುವನಪ್ರದೀಪನಂ ದಿವ್ಯರೂಪನಂ ಶುದ್ಧಜನ ಸಮೀಪನಂ ವ್ಯೋಮಕೇಶನಂ ಕಾಮಹರನಂ ಸೋಮನಾಥನಂ ಕಂಡು ಮೆಯ್ಯಿಕ್ಕಿ ನಿಂದು ತಂದ ಧೂಪಮಂ ಸೋಮನಾಥಂಗೊಪ್ಪಿಸಿ ಸರ್ವಾಭರಣನ ಮುಂದಿರಿಸಿ ಭಂಡಾರದ ಮನೆಗೆ ತೆಗೆಯುವೇಳ್ವು ಮುಂದಿರ್ದ ಸಜ್ಜುಗವೆರಸಿದ ಗುಗ್ಗುಳದೊಳ್ ರಸಮುಯ್ಯವೆನಿಪ ಕೆನೆದಿರುಳಧೂಪಮಂ ಕೊಂಡು ಶರ್ಕರೆಯೊಳುಂ ಜೇನುತುಪ್ಪದೊಳುಂ ನವಘೃತದೊಳುಂ ತೊಯ್ದು ಸೋಮನಾಥಂಗೆ ಕುಡೆ ಶಿವಲಿಂಗದಿಂ ಶ್ರೀಹಸ್ತ ಪೊಱಮಟ್ಟು ತಳೆಗು ಕೊಳುತ್ತಿರಲಿತ್ತಂ ಶಿವನಿಳೆಯದ ಸಕಳ ದ್ವಾರಮಂ ಮುಚ್ಚಿ ತಾನುಂ ಸೋಮನಾಥನುಂ ಧೂಪಮಿಲ್ಲದಿರೆ ಪಾತ್ರೆಯಂ ತಂದು ಮುಂದಿರಿಸಿ ಸಿಡಿಲಕಿಡಿಯಂತಿರ್ಪ ಕೆಂಡಂಗಳಂ ಕುಪ್ಪಳಿಸಿ ಗುಗ್ಗುಳಮಂ ಮೇಲೆ ತಂದು ಸುರಿಯೆ ಗಳಗಳನರಳ್ದು ಚಿಮಿಚಿಮಿಸಿ ಕಾಯ್ದು ಧೂಪಂ ಸವಿಯ ಹೊಗೆಯನುಗುಳೆ ಬೀಸುವಾಗಳುಂ ಅಮೃತರಸದ ತುಂತುರು ತೆರಳ್ವಂತೆ ಧೂಪಪೆತ್ತಿ ಕಂಪುತೆರೆ ಮಸಗಿ ತೀಡುತ್ತೆ ಪರಿಮಳದ ಮಂಜು ಕವಿವಂತೆ ಸವಿಯ ತುಷಾರವನೊತ್ತುವಂತೆ ಧೂಪದ ಸವಿಯು ಸರ್ವಾಂಗಮಂ ಪುಗೆ ಶಿವನ ಮೆಯ್ಯೆಲ್ಲಂ ಮುಖವಾಗೆ ನಾಸಿಕಕ್ಕೆ ನಾಲಿಗೆ ಬಂದಂತಾಘ್ರಾಣಿಸುತ್ತುಂ



ಸವಿಯುತ್ತುಂ ಪುಳಕಿಸುತ್ತುಂ ಮೆಚ್ಚುತಿರಲಿಂತು ಪೊಕ್ಕ ದ್ವೀಪಂಗಳಂ ಮರಲ್ದು ಪುಗದೆ ಲೇಸಿಂಗೆ ಲೇಸನರಸಿ ತಂದಿಕ್ಕುವ ಧೂಪದ ಸೊಗಸಿನ ಸೊಕ್ಕು ಸವಿಯ ಸಾಲಿಡೆ ಧೂಪದೋಹಿಲನೆಂಬ ಪೆಸರ ಪುಣ್ಯಕೀರ್ತಿ ಸಕಳ ಜಗಮಂ ತೀವೆ,

ಪನ್ನಗಧರಂಗೆ ಪನ್ನೆರಡು ಬರಿಸಂ ಗುಗ್ಗುಳಮಂ ಸಲಿಸಿ ಪಾವನ ಪರಿಮಳವನಿನಿತು ದಿನವಿತ್ತೆ ಇನ್ನು ಶರೀರಂಬೆರಸು ಪೋಪೆನೆಂಬ ಗರ್ವ ಬಲವಂ ಕೂಡಿಕೊಂಡು ಸೋಮನಾಥನಲ್ಲಿಗೆ ಬಂದು ಎಲೆ ದೇವ ನಿಮ್ಮಡಿಗಳ್ಕರುಣಿಸಿದ ಪನ್ನೆರಡು ಬರಿಸಂ ನಿರ್ಮುಕ್ತವಾದುದಿನ್ನೆನಗೆ ಕರುಣಿಸೆಂದು ಬಿನ್ನವಿಸಿದ ಓಹಿಲದೇವಂಗೆ ಸಕಲಜೀವ ಸೂತ್ರಧಾರನನವರತ ಲೀಲಾಲೋಲಚಿತ್ತನಪ್ಪ ಸೋಮನಾಥಂ ತಣಿವಿಲ್ಲದೆ ಭಕ್ತನ ಕಯ್ಯೊಳಿನ್ನು ಧೂಪನಿಕ್ಕಿಸಿಕೊಳ್ವ ಸ್ನೇಹ ಪರಿಮಳದ ಸವಿಗೆ ಮನದ ಬಾಯೊರೆಯೆ ಮುಂತಿರ್ದೋಹಿಲಯ್ಯಂಗಿಂತೆಂದಂ ಎಲೆ ಮಗನೆ ನಿನಗಿನ್ನೆಮ್ಮ ಚಿಂತೆ ಏಕೆ ನಿನ್ನ ಮುನ್ನಿನ ರಾಜ್ಯದ ನೂರ್ಮಡಿ ಸಂಪದವಾಯ್ತು ಸುಖಿಯಾದೆ ಸುಕುಮಾರನಾದೆ ಅರಸಾದೆ ಸಂತಸದೊಳಿರು ಎನೆ ಕೇಳ್ದು ದೆಸೆಗೆಟ್ಟು ಕಂಗೆಟ್ಟು ಬಾಯ್ಬಿಟ್ಟು ಬೆಬ್ಬಳಿಸಿ ಪನ್ನೆರಡು ಬರಿಸ ದುಮ್ಮಾಳಂ ಒರ್ಮೆ ಕವಿದು ದುಮ್ಮಾನಂ ಕಾಹೇರಿ ಆಪತ್ತೆಡೆಗೊಂಡು ಮೆಯ್ಗುಂದಿ ಮನಂ ತಾರಿ ಬುದ್ಧಿ ಕಾವುಳಂ ಮಸಗಿ ಅಹಂಕಾರವನರಿತು ಚಿತ್ತಂ ಕೊರೆದು ಜೀವಂ ಜೆಂಡು ಘಳಿಲನೆ ಬೀಳ್ದು ನೆಲದೊಳ್ಪೊರಳ್ದು ಕಂಬಮಂ ಪಾಯ್ದು ಕಯ್ಯೆತ್ತಿ ಮೊರೆಯಿಟ್ಟು ಬಾಯಿ ಬತ್ತೆ ಶಿವದಿಟ್ಟು ದೇವ ದೇವ ಇನ್ನೆಂತು ಜೀವಿಪೆಂ ಎನ್ನ ಪುಟ್ಟಿಸುವಲ್ಲಿಯುಂ ರಾಜ್ಯದೊಳಿರಿಸುವಲ್ಲಿಯುಂ ವಿರಕ್ತಿಯಂ ಕೊಂಡೆಳ್ದು ಬರಿಸುವಲ್ಲಿಯುಂ ಸಕಲಸುಖವನೀವಲ್ಲಿಯುಂ ಅಭವನುಂ ಮೃಡನುಂ ಗಿರೀಶನುಂ ಯಂತ್ರವಾಹಕನಾಗಿಯುಂ ಮಾಡಿದವನುಂ ನೀನೆ ಮತ್ತಿದೆಲ್ಲಮನಲ್ಲೆಂಬುವನುಂ ನೀನೆ ಎನ್ನ ಮೇಲೆಳ್ಪನಿತು 'ತಪ್ಪಿಲ್ಲ ಯಂತ್ರವಾಹಕ ನೀನೆ ಎನ್ನೊಳಿರ್ದು ನಡೆಯಿಸುವಲ್ಲಿಯುಂ ನೀನಿರಲಾನೊಂದು ರೂಪುಂಟೆ ದೇವ ದೇವ ಎನ್ನೊಳಿನಿತೇಕೆ ಒಡೆದೊಡಂ ನೂಂಕಿದೊಡಂ ನೀಳ್ದೊಡಂ ಬಡಿದೊಡಂ ಬಿಡೆಂ ಬಿಡೆಂ ಅಭವಾ ಶಂಭುವೇ ಗುರುವೇ ಗತಿಯೇ ಮತಿಯೇ ಶಿವಧೋ ಶಿವಧೋ ಎಂದು ತನು ಒಡೆಯುಲೊಟ್ಟಿ ಒರಲ್ದು ತನ್ನ ಕಾಲಂ ಪತ್ತಿ ಕಣ್ಣೊಳು ಹರಣಂ ಕಯ್ಯೊಳು ಕಾಯುಮಾಗಿರ್ದೋಹಿಲ ದೇವನಂ ಪ್ರಾಣ

ನಾಥನಪ್ಪ ಸೋಮನಾಥಂ ಬರ ತೆಗೆದು ಕಣ್ಣ ನೀರಂ ತೊಡೆದು ಮುಂದ ತಾಪವನಾರಿಸುತ್ತಂ.

ಅಂಜದಿರಂಜದಿರೆಲೋ ಮಗನೆ ನಿನಗೊಂದು ಹಿತೋಪದೇಶಮಂ ಕೊಟ್ಟಪೆಂ ಸಕಲ ಜಗವೆಲ್ಲೆನ್ನ ಸೊಮ್ಮಾದೊಡಂ ಪರರಂ ಪ್ರೇರಿಸಿದೆ ಪರ ಸೊಮ್ಮಂಕೊಳ್ವರಾಗರ್ಂ ನಿರೋಧವಿಲ್ಲದೆನ್ನ ಸೊಮ್ಮನೆನಗಿತ್ತು ಪ್ರಸಾದಮಂ ಕೊಂಬ ಪರಿಯಂ ಕೇಳ್ಮಗನೆ ಕಟ್ಟಿದ ಕೆರೆ ಇಟ್ಟಿರಪೆ ಬಿತ್ತಿದ ಬೆಳೆ ಮಾಡಿದ ಮನೆ ಪರರ ವಸ್ತು ನೀರಂ ಕುಡಿಯದೆ ನೆಳಲಂ ಸೇರದೆ ಫಲಮನುಣ್ಣದೆ ಮರೆದು ಪಟ್ಟಿರದೆ ಪರಿವ ತೊರೆಯ ನೀರ್ಗುಡಿಯುತ್ತುಂ ಕಾಡ ಮರಂಗಳ ನೆಳಲೊಳ್ನಿಂದು ಫಲಂಗೊಳ್ಳುತ್ತುಂ ಹೊಡೆ ಹುಲ್ಲ ಬತ್ತಮನುಣುತ್ತುಂ ಮೆಳೆ ಗುಹೆಗಳ ತಳದೊಳ್ಪಟ್ಟಿರುತ್ತುಂ ಪೋಗಿ ಎಲ್ಲರ್ಗೆ ಸಮಮಪ್ಪ ವಸುಧಾತಳಂಗಳ ಪೊನ್ನಂ ಕೊಂಡು ದ್ವೀಪಕ್ಕೆ ನಡೆದುಂ ಧೂಪಕ್ಕೆ ಕೊಟ್ಟು ನಾನಾ ವಿಧದಿಂ ಹೊತ್ತು ಹೊತ್ತೀ ತೆರದಿಂದಿನ್ನೊಮ್ಮೆ ಪನ್ನೆರಡು ವತ್ಸರಂ ಹಿಗ್ಗಿ ಹೊರೆಯೇರಿ ಗುಗ್ಗುಳಮನೆಮಗ್ಗಿಕ್ಕಿ ಬಳಿಕ್ಕೆ ನಿನ್ನ ಮನೋರಥಮಂ ಮಾಳ್ಪೆನೆಂದು ಭಕ್ತಜನ ಸಂತುಷ್ಟ ವಿನೋದಂ ಶರಣ ಕುಲ ಗೀತಾಮೃತ ರಸಾವಗಾಹ ಚಿತ್ತಂ ಭೃತ್ಯ ಸಂಕುಳ ಪ್ರೇಮಂ ವಿವಿಧವಾಕ್ಯ ಕುಸುಮ ಕರ್ಣಾವತಂಸಂ ಶರಣ ಪರಿಣತ ಸ್ತೋಮ ಸನ್ನಿಹಿತಂ ನತನಿಕರ ಗೋಷ್ಠಿ ಸುಲಭಂ ದೇವ ದೇವಂ ಸೋಮನಾಥಂ ಬೆಸಸುತ್ತಮಿರೆ ಇರೆ.

**ದ್ವಿತೀಯಸ್ಥಲಂ ಸಮಾಪ್ತಂ**



## ತೃತೀಯ ಸ್ಥಲ.

ವೃ॥ ಶಿವಭಕ್ತಂ ಭಕ್ತಿರೂಪಂ ಕಲಿಭಲಿಯಚಲಂ ಸ್ನೇಹದಿಂದೋಹಿಲಯ್ಯಂ।
ಶಿವನೊಳ್ನಿರ್ಲೇಪಮಪ್ಪೊಂದನುಪಮಹಿತಮಂ ಬುದ್ಧಿಗಲ್ತೋಜೆಯಿಂದಂ॥
ಭವನಂ ಭಾಳಾಕ್ಷನಂ ಭರ್ಗನನಘಹರನಂ ಭೀಮನಂ ಭಕ್ತವೃಂದೋ।
ತ್ಸವನಂ ಶ್ರೀಸೋಮನಾಥಪ್ರಭುವನಮಮ ಬೀಳ್ಕೊಂಡನಾನಂದದಿಂದಂ॥

### ರಗಳೆ.

ಇಂತು ಬೀಳ್ಕೊಂಡು ಬಂದೋಹಿಲಯ್ಯಂ ನಿಂದು
ಕಂತು ಮದಹರಣಂಗೆ ಮತ್ತೆ ಪೊಡಮಡುತಂದು
ಭಸಿತಮಂ ಕಾಯದೊಳಗುದ್ಧೂಳನಂ ಮಾಡಿ
ಎಸೆವ ರುದ್ರಾಕ್ಷಿಗಳನವಯವದೊಳೊಡಗೂಡಿ
ಹೊಸ ಸಪುರ ವಸ್ತ್ರದಿಂ ಕೌಪೀನನಾಗುತುಂ
ಮಿಸುಪ ಪಟ್ಟಿಗಳ ತೆಗೆದಿಟ್ಟು ಹೊದೆದೊಪ್ಪುತುಂ
ಕಾವಡಿಯ ಕಂಬಿಯೊಳ್ಘನ ಪಾತ್ರೆಗಳನಿರಿಸಿ
ಕಾವಿಗಳ ಸಪುರ ವಸ್ತ್ರಂಗಳಿಂ ಬಾಸಣಿಸಿ
ದೇವಲೋಕಕ್ಕಿದು ಪರಸ್ಥಾನವೆಂಬಂತೆ
ದೇವ ಶಿವಭಕ್ತಿಯಂ ಹೆಗಲೊಳಾಂತಿರ್ಪಂತೆ
ಎತ್ತಿದಂ ಪರಿಮಳದ ಕಂಬಿಯಂ ನೂತನಂ
ಮುತ್ತಿದಂ ಕರಣಂಗಳಿಂ ಸೋಮನಾಥನಂ
ನಡೆಯುತೊಂದಡಿಯನಿಟ್ಟಗಲಲಾರದೆ ತಿರುಗಿ
ಮೃಡನೆ ಎನ್ನಯ್ಯ ಎನ್ನರಸ ಎನುತುಂ ಮರುಗಿ
ಕಂಬಿ ಸಹಿತಂ ಬಂದು ಬಿಗಿಯಪ್ಪಿ ನಿಂದಿರ್ದ
ಶಂಭುವೇ ಶಂಕರನೆ ಶಿವಶಿವಾ ಎನುತಿರ್ದ
ಬರುತೆ ಪೂಜಾರಿಗಳನೆಂದನೋಹಿಲದೇವ
ಎರಡಿಲ್ಲದೇಕನಿಷ್ಠೆಯ ಶಿವನ ಸದ್ಭಾವ
ಅಭವಂಗೆ ಧೂಪಮಂ ಕೊರತೆ ಮಾಡಲ್ವೇಡ
ವಿಭವದಿಂ ಬೆಳ್ಪನಿತನೀವುದಂಜಲ್ವೇಡ
ಬಡವ ಮಾಡದಿರೀಶನಂ ಸೋಮನಾಥನಂ

ಮೃಡನಂ ಮಹೇಶನಂ ಸುರನಾಥನಾಥನಂ
ಎಂದೆನುತೆ ಎಲ್ಲರೊಳ್ನಂಬುಗೆಗಳಂ ಪಡೆದು
ನಿಂದವರ ಕಯ್ಗಳಂ ಬೇಡಿಕೊಳುತುಂ ಪಿಡಿದು
ಅಂದಲ್ಲಿ ಬಿಳ್ಕೊಂಡು ಪೊರಮಟ್ಟು ಬರುತಿರಲ್
ಬಂದ ಪರಿಜನವೆಲ್ಲ ಮುನ್ನಿನಂದದೋರಲ್
ನೋಡಿ ಬೆರಗಾಗುತ್ತೆಯೋಹಿಲಯ್ಯಂ ಬಂದು
ಬೇಡ ಬೇಡೆಲೆ ಜನಂಗಳಿರ ಬೇಡೆನುತ್ತಂದು
ಮುನ್ನಿನಂತಲ್ಲ ಜನವಂ ಶಿವಂ ಸೈರಿಸಂ
ಪನ್ನಗಧರಂ ಪುರುಡಿಗಂ ಬೇರೆ ಪೊರ್ದಿಸಂ
ಮನದೊಳಗೆ ಹೊರೆಯಾಗದೊಳಗಾಗದೊಲ್ಲೆನೆ
ಮನುಜರ್ಪಲಂಬರಿರೆಸಂದಣಿಯ ಸೈರಿಪನ
ಎಂದಲ್ಲಿ ಹೋಗನೊಲ್ಲದೆ ಮನುಜರಂ ಕಳಿಪಿ
ಬಂದನೆಮ್ಮಯ್ಯಂ ವಿರಕ್ತಿಭಾವಕ್ಕಳಿಪಿ

ಬರೆ ಶಿವಪ್ರಚ್ಛನ್ನವೇಷದಿಂದೊಡನೊಡನೆ
ಬರುತಲಿರ್ದಂ ಪುತ್ರನೇಹದಿಂದೊಡನೊಡನೆ
ಇಂತು ಬರೆ ಬಂದನೋಹಿಲದೇವನೊಲ್ಮೆಯಿಂ
ಸಂತಸದೆ ರೂಪಪಿಕ್ಕುವ ಚಿತ್ತದಳ್ತಿಯಿಂ
ಪಾದಕ್ಕೆ ರಕ್ಷೆ ನಡೆವುದೆ ರಕ್ಷೆಯಾಗುತಿರೆ
ಸಾದರಂ ಮಿಗೆ ಬಂದಸಭವನಲ್ಲಾಡುತಿರಿ
ಎಲ್ಲೆಯುಂ ಸಿಲ್ಲನಾರೊಡನೆಯುಂ ನುಡಿಯಿಲ್ಲ
ತಲ್ಲಣಿಸಲಿಲ್ಲ ತನಗೊಂದುವುಂ ಭಯವಿಲ್ಲ
ಕಲ್ಲ್ಗಳಂ ಪರಳೊಳಂ ಮುಳ್ಳ್ಗಳಂ ನಡೆನಡೆದು
ಅಲ್ಲಲ್ಲಿಯೂರ್ಗಳಂ ದಾಂಟುತಂ ನಡೆನಡೆದು
ಬಿಸಿಲನರಿಯದೆ ಗಾಳಿಗೋಸರಿಸದೈಯ್ತಂದು
ಪಸಿವನರಿಯದೆ ನಿದ್ರೆಯನರಿಯದೈತಂದು
ಪಗಲೆನ್ನದಿರುಳೆನ್ನದಕ್ಕರಿಂದೈತಂದು
ಮೃಗವೆನ್ನದಡವಿ ಎನ್ನದೆ ನಿಷ್ಠೆಯಿಂ ನಡೆದು
ದೇಶಂಗಳಂ ಕಳೆದೆರಡು ದಿನಂ ಪಸಿದಿರ್ದು
ಆಸುಂದದ ಪೇರಡವಿಯಂ ಪೊಕ್ಕು ನಲಿದಿರ್ದು



ಒಂದೊಂದು ಕಾಡಮರದಡಿಯೊಳೊಯ್ಯನೆ ನಿಂದು
ಸಂದ ಕಾವಡಿಯ ನಿಳುಪುತ್ತೆ ಭರದಿಂ ಬಂದು
ಆರ ಹಂಗಿಲ್ಲದೆ ನಡೆಯುವೇಳ್ದನುನ್ನತಂ
ಸೀರೆ ಕಾಪೇಕೆನುತೆ ಬಿಸುಟಂ ಜಗವನಾತಂ
ನಾರಸೀರೆಯನುಟ್ಟು ಹೊದೆದನಾನಂದದಿಂ
ಮಾರಾರಿ ಮೆಚ್ಚೆ ಒಡನೊಡನೆ ಬರೆ ಹರುಷದಿಂ

ಹರಿವ ನದಿಯುದಕಮಂ ಶಂಕರಂಗರ್ಪಿಸುತೆ
ತರುಕುಲದ ಫಲಮುಮಂ ಶಶಿಧರಂಗರ್ಪಿಸುತೆ
ನೆಳಲ ತಣ್ಪೆನೊಳಿರ್ದು ಸೋಮನಾಥಂಗೆನುತೆ
ಸುಳಿವೆರಲನೆಮ್ಮ ಸೋಮಯ್ಯದೇವಂಗೆನುತೆ
ಕಂಪು ಶೀಡಿದೊಡೆ ಸೌರಾಷ್ಟ್ರಪತಿಗೆಂದೆನುತೆ
ಹೆಂಪುಳ್ಳ ಕೊಳನಿರಲ್ ಸೋಮನಾಥಂಗೆನುತೆ
ಜಲಜಂಗಳಿರೆ ಚನ್ನ ಸೊಡ್ಡಳಂಗೆಂದೆನುತೆ
ಫಲವಿರಲ್ ಸೋಮಯ್ಯ ತಂದೆಗರ್ಪಿತವೆನುತೆ
ಹೊಡೆಹುಲ್ಲೊಳಾದ ಪ್ರಸಾದಮಂ ಕೈಕೊಳುತೆ
ತಡೆವಿಡಿದು ನದಿಯ ಲಿಂಗೋದಕಮನನುಗೊಳುತೆ
ಪೊಸ ಪಣ್ಗಳಂ ಶಿವಂಗರ್ಪಿಸುತೆ ಸವಿಸವಿದು
ಹಸರುಳ್ಳ ಬಿಲ್ವಪತ್ರೆಯನರ್ಪಿಸುತ್ತಂದು
ಕಂಬಿಯಂ ಕೊಂಡೇಳ್ದು ನಡೆನಡೆದು ಪರಿತಂದು
ಶಂಭು ಶರಣೆನುತಡವಿಯೊಳಗೊರ್ವನೆಯ್ತಂದು
ಹರಿಣನಂ ಮಾವು ಮರಿಹುಲ್ಲೆಗಳ ನೋತುತುಂ
ಕರಡಿ ಕಾಳ್ಪಂದಿ ಕಾಡಾನೆಗಳ ನೋಡುತುಂ
ಪೆರ್ಬಾವುಗಳ್ಪೆರ್ಬಿದಡವಿಗಳ ನೋಡುತುಂ
ಮುಬರ್ ಕರ್ಬರಿಸಿ ಕವಿದೆಡೆಗಳಂ ನೋಡುತುಂ
ಗಗನಕ್ಕೆ ನೆಗೆವ ಸಿಂಹಂಗಳಂ ನೋಡುತುಂ
ಜಗಕೆ ಪೊಸತೆನಿಪ ಭೇರುಂಡನಂ ಕಾಣುತುಂ
ಪರುಷ ಮೃಗಮಂ ಕಂಡು ಪೊಡಮಟ್ಟು ನಡೆಯುತುಂ
ಶರಭಂಗಳಂ ಕಂಡು ಮೆಯ್ಯಿಕ್ಕಿ ನಡೆಯುತುಂ

ಧೂಪದ ದ್ವೀಪದಲ್ಲಿಗೆ ಸಾರಿಯಾಗುತಿರೆ
ಕಾಪಾಲಿ ಕೊಟ್ಟ ನೆನಕೆಚ್ಚರಂ ತೋರುತಿರೆ

ಭೂಮಿ: ನೀಂ ಕಲಶ ವಸುಮತಿ ಹೊನ್ನನೀಯುವ್ವ
ಸೋಮನಾಥನ ಗುಗ್ಗುಳಕ್ಕೆ ಬೆಸಕೆಯ್ಯುವ್ವ
ಎನೆ ದರಿವಿಸೊಳಗೊಂಮ ಕೊಪ್ಪಂಕೆ ಹೊನ್ನಿರಲ್
ಮನವಾರೆ ಪಾತ್ರೆಯೊಳ್ತೀವುತಂ ನೊರೆದಿರಲ್
ಕೊಂಡು ಬಂದಂ ಧೂಪವಿರ್ದೆಡೆಗೆ ಪೊಂಗಳಂ
ತಂಡತಂಡದೆ ಹರ್ಷದಿಂ ಕೊಟ್ಟ ಪೊಂಗಳಂ
ಪಾತ್ರೆಯೊಳಗಳ್ಕರಿಂ ಧೂಪಮಂ ತೀವುತಂ
ನೇತ್ರತ್ರಯನ ಸುತಂ ಬಾಸಣಿಸಿಯೋವುತಂ
ಕಟ್ಟಿ ಮುದ್ರಿಸಿ ಕಂಬಿಗಿಂಬಿನಿಂ ಪೊಡಮಾಟ್ಟ
ನಿಟ್ಟೆ ನೆಲೆಗೊಂಡು ಘನ ಪುಳಕಮಂ ಮುಂದಿಟ್ಟು
ಸರಿಭಾಗಮಂ ನೋಡಿ ತೂಗಿ ತೂಕಮನರಿದು
ಹರುಷದಿಂ ಚಂದನಮನಿಕ್ಕಿ ತೂಕಮನರಿದು
ಬಾಳ್ಗಿನ್ನ ಸೌರಾಷ್ಟ್ರಪತಿ ಎನುತ್ತೆತ್ತಿದಂ
ಬಾಳ್ಗಿನ್ನ ಸೋಮಯ್ಯ ತಂದೆ ಎನುತೆತ್ತಿದಂ
ಧೂಪಮಂ ಪೊತ್ತು ಜನನದ ಹೊರೆಯನಿಳುಪಿದಂ
ಧೂಪಮಂ ಹೆಗಲನೇರಿಸಿ ಸಾವನಿಳುಪಿದಂ
ನಡೆದು ಬಂದಂ ತಿರುಗಿ ನವಧೂಪಮಂ ಪೊತ್ತು
ವೃಡನ ನವಪರಿಮಳದ ಗುರುಭಾರಮಂ ಪೊತ್ತು

ಧೂಪದೊಂದಡಿಯನಿಳೆ ತಾಳಲಾರದಿರೆ
ಧೂಪಮಂ ಪೊತ್ತಡಿಯನಿಟ್ಟನೊಪ್ಪುತ್ತಮಿರೆ
ಒಂದಡಿಯನಿಡೆ ನಿಜ ಪದಕಿಂದ್ರನಂಜಿದಂ
ಮುಂದಡಿಯನಿಡಲಿಂದ್ರನುಳಿದನಜನಂಜಿದಂ
ಮೂರನೆಯ ಪದದೊಳಜನುಳಿದಂ ಹರಿಯಂಜಿದಂ
ಮೀರಿ ನಾಲ್ಕರೊಳ್ಹರಿಯುಳಿದ ಶಿವನಂಜಿದಂ
ಅಯ್ದನೆಯ ಪದಕಯ್ದು ಮುಖವನಿತೆ ಮಿಗಿಲಿಲ್ಲ
ಅಯ್ದೆ ನಡೆದೊಡೆ ಕುಡುವ ಪದವಿಗಳ ಪೆಸರಿಲ್ಲ



ಎಂದೊಡನೆ ಸೋಮನಾಥಂ ಚಿಂತಿಸುತ್ತಮಿರೆ
ಒಂದು ಪದಕೊಂದೊಂದು ಪದವಿಗಳ್ತೀರುತಿರೆ
ಪದದೊಳಗೆ ಮುಗ್ಗಿದ ಪ್ರಾಣಿ ಸಂತತಿ ಕೂಡೆ
ಪದವಿಯಂ ಪಡೆದು ಸಗ್ಗಕ್ಕೆ ನಡೆದವು ಕೂಡೆ
ನೋಡಿದ ಮರಂಗಳುಂ ಸೋಂಕಿದ ಮರಂಗಳುಂ
ಕೂಡೆ ಭವಮಂ ನೀಗುವವು ಪರ್ವತಂಗಳುಂ
ಬರ್ದುಕುತಿರೆ ನಡೆತಂದನಪ್ರತಿಮನಮ್ಮಮ್ಮ
ಮುದದಿಂದಲೋಹಿಲಯ್ಯಂ ಧೀರನಮ್ಮಮ್ಮ
ಕಂಬಿ ಹೆಗಲೊಳಗಾಳೆ ಕುಸಿದುಂ ಕಾಯಂ ತಗ್ಗೆ
ಸಂಬಳಿಗೆ ತೆಗೆದು ಹೆಗಲೆಲುವುಗಳು ನೆರೆ ತಗ್ಗೆ
ಕೆಲವುಮಾಸಂ ಸತ್ತೆ ಕೆಲವು ಪಾರಣೆಯಾಗೆ
ಬಲವಳಿದು ಡೆಂಡಣಿಸಿ ಹಜ್ಜೆ ಹುಣ್ಣಾಂತಾಗೆ
ಅಂಗಾಲೊಳುರಿಗೆದ್ದ ಬೊಕ್ಕೆ ನೆತ್ತರನುಗುಳೆ
ಅಂಗದೊಳಗುಳ್ಳ ಸರ್ವ ತ್ರಾಣಮುಂ ಜಗುಳೆ
ಅನುಗೆಡುತ್ತವಯವಂಗಳ್ಸಡಿಲವಾದೊಡಂ
ತನು ಜರ್ಝರಂಬೋಗಿ ಜವವಳಿದು ನಿಂದೊಡಂ
ಮನವೆ ಕೈಕಾಲಾಗಿ ನಡೆವುತಿರ್ದಂ ನೋಡ
ನೆನಹು ಜೀವನವಾಗಿ ನಡೆವುತಿರ್ದಂ ನೋಡ
ಲೆಕ್ಕಿಸಂ ಕೈಕೊಳ್ಳದಳ್ಕರಿಂ ನಡೆನಡೆದು
ಮಿಕ್ಕ ನೇಹದ ನೆಳಲ ತಣ್ಪಿಂದೆ ನಡೆನಡೆದು
ಬೆಟ್ಟಂಗಳೊಳ್ನಡೆದು ನಡೆಯಲಾರದೆ ನಿಂದು
ಗಟ್ಟಂಗಳೊಳಗೆಡಹಿ ದಡದಡಿಸುತುಂ ನಿಂದು
ಬೀಳಬೀಳಲು ಶಿವಂ ಕೈಗೊಟ್ಟು ನೆಗೆವುತುಂ
ಜಾಳಿಸಲ್ಕಂಬಿಯಂ ಕೆಯ್ಗೊಟ್ಟು ನೆಗೆವುತುಂ
ಕಾಣಬಾರದ ತೆರದೆ ಕೆಯ್ಗೊಟ್ಟು ನೆಗೆವುತುಂ
ಕೇಣವಿಲ್ಲದೆ ಶರಣನೊಡನೊಡನೆ ಪೊಗಯಿಪಂ
ಕಡು ಬಳಲೆ ಕಂಬಿಯಂ ತಾನೆತ್ತಿ ನೆಗೆಯಿಪಂ
ನಡೆಯಲಾರದೊಡೆತ್ತಿಕೊಂಡೊಯ್ದು ನಡೆಯಿಪಂ
ಬಡವಾಗೆ ಬಡವಪ್ಪನೆಡಹೆ ತಾನೆಡಹುವಂ
ದಡದಡಿಸುವಾಗಳೊಡನೊಡನೆ ದಡದಡಿಸುವಂ

ಕೆಯ್ವಿಟ್ಟು ಬೀಳ್ವುದಂ ನೋಡಿದಲ್ಲದೆ ಪಿಡಿಯ
ಕೆಯ್ವಿಡಿದು ಕಾನನದೊಳೊಯ್ಯಾರದಿಂದಲೆಯ

ಇಂತು ನಿಜಭಕ್ತ ಹೊನ್ನಯ್ಯಂಗೆ ಕರುಣದಿಂ
ಕಂತುಮದಹರನು ಕಂಬಿಯನಿಂತು ಹರುಷದಿಂ
ಬಂದನೋಹಿಲದೇವ ನಟ್ಟಡವಿಯಂ ಕಳೆದು
ವಿಂಧ್ಯದೇಶಂ ಮಹಾ ವಿಂಧ್ಯಂಗಳಂ ಕಳೆದು
ಬರೆ ಬರಲ್ ಸೌರಾಷ್ಟ್ರವಲ್ಲಿ ಹತ್ತಿರೆಯಾಗಿ
ಪುರಜನಂ ದೂರದಿಂ ಕಂಡು ಕೌತುಕರಾಗಿ
ಭೇರಿ ಸಿಸ್ಸಾಳಮುರುಜಂಗಳಿಂದಿದಿರ್ಗೊಂಡು
ವಾರವನಿತಾಜನಂ ಭಕ್ತರಿಂದಿದಿರ್ಗೊಂಡು
ರನ್ನಗನ್ನಡಿ ಕಳಶ ಕನಕದಿಂದಿದಿರ್ಗೊಂಡು
ಸನ್ನುತ ವಿಳಾಸಿನೀ ಜನದಿಂದಮಿದಿರ್ಗೊಂಡು
ಬರಲಂದು ಪುರವರವನಾನಂದದಿಂ ಪೊಕ್ಕು
ತರತರದೆ ಪುಳಕಂಗಳೇಳೆ ಹರುಷದಿ ಮಿಕ್ಕು
ನಡೆತಂದು ಶಿವನಿಳಯದೊಳಗೆ ಕಂಬಿಯ ನಿಳುಪಿ

ಕಡು ನೇಹದಿಂ ಸೈಗೆಡೆದು ದುಃಖವ ನಿಳುಪಿ
ಎಳ್ದು ಬಂದಪ್ಪಿಕೊಂಡೈದಿಸದೆ ಮತ್ತಪ್ಪಿ
ಆಳ್ದಂತೆ ಲಿಂಗದೊಳ್ಪುಗುವಂತೆ ಬಿಗಿಯಪ್ಪಿ
ಏನಯ್ಯ ಸೌರಾಷ್ಟ್ರಪತಿಯೆ ಬಡವಾದಯ್ಯ
ಆನಿಂತು ತಡೆದನೆಂದುಮ್ಮಳಿಸುತಿರ್ದಯ್ಯ
ಎನ್ನಯ್ಯ ಎನ್ನರಸ ಎನ್ನ ಸಮಸುಖನಿಧಿಯೆ
ಎನ್ನ ಪರಮ ಸ್ನೇಹರಸ ಸುಗೀತಾಂಬುಧಿಯೆ

ಎನುತೆ ಬಂದಲ್ಲಿ ಕಂಬಿಯಂ ಮುದ್ರೆಯಂ ತೋರಿ
ಮನಸಿಜಾರಿಯ ಮುಂದೆ ಇಟ್ಟು ಸಂತಸವೇರಿ
ರಸಪೊಸರ್ವ ಶಿರುಳ ಧೂಪವನೆತ್ತಿಕೊಂಡಲ್ಲಿ
ಪೊಸ ತುಪ್ಪದಿಂ ಶರ್ಕರಾದಿಯಂ ತೋಯ್ದಲ್ಲಿ
ಸೋಮನಾಥಂಗಿತ್ತು ಕೊನೆದಾಡಿ ಕೂಗಾಡಿ



ಕಾಮಾರಿಗಿತ್ತಿತ್ತು ಕುಣಿದಾಡಿ ಮಣಿದಾಡಿ
ಪಾತ್ರೆಯೊಳ್ಕೆಂಡಮಂ ಸುರಿದು ಧೂಪವನಿಕ್ಕಿ
ನೇತ್ರದಿಂದಾನಂದ ಜಲಪೊಸರೆ ಮೆಯ್ಯಿಕ್ಕಿ
ಎಲ್ಲಾ ಕದಂಗಳ ಗವಾಕ್ಷೆಗಳ ಮುಚ್ಚುತುಂ
ಸಲ್ಲೀಲೆಯಿಂದ ಧೂಪವನಿಕ್ಕಿ ಪೆರ್ಚುತುಂ
ಸುತ್ತಿ ಬಂದಾಡುತುಂ ನವ ಧೂಪಮಂ ಬೀಸಿ
ಮುತ್ತಿಕೊಂಡೊಪ್ಪುತುಂ ನವ ಧೂಪಮಂ ಬೀಸಿ
ಸೋಮಯ್ಯದೇವ ಕೈಕೊಳ್ಳಯ್ಯ ಕೊಳ್ಳಯ್ಯ
ಸೋಮಯ್ಯದೇವ ಶರಣಾಗು ಶರಣಾಗೆನುತೆ
ಕೂಗಿಡುತ್ತಂ ಬೀಸಿ ಕುಣಿದಾಡುತಂ ಬೀಸಿ
ಬೀಗಿ ಬೆರೆವುತ ಬೀಸಿ ಆಡುತಾಡುತ ಬೀಸಿ
ಮುಟ್ಟಿ ನಾಲ್ದೆಸೆಗೆ ಪೊಗೆ ಮಸಗೆ ಬೀಸುತ್ತಮಿರೆ
ಇಟ್ಟಣಿಸಿ ಸೌರಾಷ್ಟ್ರ ದೇಶದೊಳ್ತೀವುತಿರೆ
ಕೇರಿಕೇರಿಗಳ ನಡುವೆಲ್ಲ ಧೂಪದ ಕಂಪು
ಊರೂರ ಹೊಲಹೊಲದೊಳೆಲ್ಲ ಧೂಪದ ಕಂಪು
ಕೆರೆಯೊಳಗೆ ಕೊಳನೊಳಗೆ ಗುಗ್ಗುಳದ ಸವಿಗಂಪು
ತೊರೆಯೊಳಗೆ ವನದೊಳಗೆ ಮೆರೆವ ಧೂಪದ ಕಂಪು
ತೀವುತಿರೆ ಪನ್ನೆರಡು ಬರಿಸಮೀ ತೆರದಿಂದೆ
ದೇವಂಗೆ ಬೀಸಿದಂ ಧೂಪಮಂ ಮುದದಿಂದೆ
ಮಾಗೆಯೊಳ್ಬೇಸಗೆಯೊಳುಬ್ಬರದ ಮಳೆಗಳೊಳ್
ರಾಗದೆ ವಸಂತ ಹೇಮಂತ ಋತುಕಾಲದೊಳ್
ತಂದು ತಂದೋಹಿಲಯ್ಯಂ ಧೂಪಮಂ ಬೀಸಿ
ಕುಂದದಕ್ಕದೆ ಸುಖದ ಸುಗ್ಗಿಯಿಂದಂ ಬೀಸಿ
ಹರುಷದಿಂ ಸೋಮನಾಥಂಗ ಬಿನ್ನವಿಸಿದಂ
ಕರುಣಾಕರಂಗೆ ಪರಮಂಗೆ ಬಿನ್ನವಿಸಿದಂ
ದೇವ ನಿಮ್ಮಡಿಗಳೆಂತೆಂತು ಬೆಸಸಿದಂತೆ
ದೇವ ನೀ ನಡೆಯಿಸಲ್ಕಡೆದು ಧೂಪವನಿಂತೆ
ತಂದೆ ನಾಂ ಪನ್ನೆರಡು ಬರಿಸವಾದುದು ದೇವ
ತಂದೆ ಕರುಣಿಪುದೆನಗೆ ನಿತ್ಯತ್ವಮಂ ದೇವ

ಎನುತಿರ್ದನತ್ತಲಿತ್ತಲ್ರಜತಗಿರಿಯೊಳಗೆ
ಮನಸಿಜಹರಂ ನಂದಿಗೆಂದನಿಂದಿಳೆಯೊಳಗೆ
ಓರ್ವ ಭಕ್ತಂ ಧೂಪವಿಕ್ಕಿದಂ ಎಮಗೆಂದು
ಸರ್ವ ಮುಖದಿಂ ನಿಷ್ಠೆಯಿಂ ನೇಹದಿಂದೊಲಿದು
ಸೌರಾಷ್ಟ್ರದೊಳಗೋಹಿಲಯ್ಯನೆಂಬಂ ಕೇಳ
ತಾರಾದ್ರಿಗಾತನಂ ಕೊಂಡು ಬರ್ಪುದು ಕೇಳ
ಎನೆ ನಂದಿ ವೀರಭದ್ರಾದಿಗಳ್ನಡೆತಂದು
ತನತನಗೆ ನಲಿವ ಗಣವೃಂದದಿಂ ನಡೆತಂದು
ಸೌರಾಷ್ಟ್ರಮಂ ಪೊಕ್ಕು ಶಿವನಿಳೆಯಕೈತಂದು
ಮಾರಮದ ಮಥನನರುಪಿರ್ದ ಕುರುಪಂ ನೆನೆದು
ಬರೆ ಶಿವಾಲಯದ ಕದವೆಲ್ಲವಿಕ್ಕಿರೆ ನೋಡಿ
ಹರಭವನಮಂ ಮುಟ್ಟಲಮ್ಮದೆ ಮನಂಗೂಡಿ
ತಿರುಗಿ ಗಣಸಮಿತಿ ಕೈಲಾಸಕ್ಕೆ ನಡೆತಂದು
ಹರನೆಯವಧಾರು ಮತ್ತೊಂದು ಬಿನ್ನಪವೆಂದು
ದೇವಾಲಯದ ಕದವನಿಕ್ಕಿಕೊಂಡಿರ್ದಪಂ
ದೇವ ಸುಖದಿಂದೆ ಧೂಪವನಿಕ್ಕುತಿರ್ದಪಂ
ದೇವ ಕದವಂ ತೆರೆಯೆ ಕೋಪಿಸುವನೆಂದಂಜಿ
ದೇವ ಧೂಪದ ಸುಖಂ ಕೆಡುವುದೆಂದಾವಂಜಿ
ಬಂದೆವೆನೆ ಶಶಿಧರಂ ನಗುತವರ್ಗೆ ಬೆಸಸಿದಂ
ಮುಂದುವರಿದಾನಂದ ಜಲದಿಂದೆ ಬೆಸಸಿದಂ
ರಂಗಮಂಟಪದ ಪೂವಿನ ಕಲ್ಲನೋಸರಿಸಿ
ಲಿಂಗಮಂತನನೆತ್ತಿಕೊಂಡು ಬನ್ನಿರೆ ಪರಸಿ
ಎಂದು ಬೆಸಸಿದೊಡನುಜ್ಞೆಯನಲ್ಲಿ ಕೈಕೊಂಡು
ನಂದೀಶ ವೀರಭದ್ರಾದಿಗಳ್ನಡೆಗೊಂಡು
ಬಂದರೊಳಪೊಕ್ಕರೆತ್ತಿದರೋಹಿಲಯ್ಯನಂ
ಸಂದ ಧೂಪದ ಪಾತ್ರೆವೆರಸು ಸದ್ಭಕ್ತನಂ
ನೆಗೆದು ಕೈಲಾಸ ಸೋಪಾನವೇರಲ್ಕಂತೆ
ನೆಗೆದು ತೆರೆಗೊಂಡು ಧೂಪವನಡರುತುಂ ಮುಂತೆ
ಪೂಮಾಲೆಗಳೆರಗೆ ದುಂದುಭಿರವಂಗಳ್ಪುಟ್ಟಿ



ಪ್ರೇಮದಿಂ ಸೌರಾಷ್ಟ್ರಪುರದೊಳಗೆ ಗುಡಿಗಟ್ಟಿ
ನೋಡಿ ಗುರ್ಜರದೇಶವೆಯ್ದೆ ಬೆರಗಾಗುತಿರೆ

ನೀಡಿ ನೆಗೆದುದು ಗಣಂ ಗಗನತಳ ಪೊಕ್ಕುತಿರೆ
ಬರೆ ದೇವಲೋಕದೊಳ್ಗಗ್ಗದ ಕಂಪಿಸೆಯೆ
ಸುರಗಿರಿಯು ರಜತಗಿರಿಯೊಳಗೆಲ್ಲ ಕಂಪಿಸೆಯೆ
ದೇವಿ ಕೇಳ್ದಳ್ದೇವ ಈ ಕಂಪಿದೆಲ್ಲಿಯದು
ಭಾವಿಪೊಡೆ ಪೊಸ ಪರಿಮಳಂ ತಾನಿದೆಲ್ಲಿಯದು
ಹೆಂಪುಳ್ಳ ನವಧೂಪದೋಹಿಲಂ ಬಂದಪಂ
ಕಂಪಾವುದೆನೆ ದೇವಿ ಓಹಿಲಂ ಬಂದಪಂ
ಎನ್ನಣುಗನೋಹಿಲಯ್ಯಂ ಬಂದಪಂ ಗೌರಿ
ಎನ್ನ ಸುಖಸಿಧಿಯೋಹಿಲಯ್ಯ ಬಂದಪಂ ಗೌರಿ
ಎಂದು ಬೆಸಸುತ್ತಮಿರೆ ಬಂದನೋಹಿಲದೇವ
ಅಂದು ಗಣಕುಲದ ನಡುವೊಪ್ಪಿ ಓಹಿಲದೇವ
ಎಯ್ತಂದು ಶರ್ವಂಗೆ ಶಂಕರಂಗೀಶಂಗೆ
ಸಯ್ತಾಗಿ ಭರ್ಗಂಗೆ ಶಶಿಧರಂಗಭವಂಗೆ
ದೇವಂಗೆ ದೇವರ ಶಿಖಾಮಣಿಗೆ ಪರಮಂಗೆ
ಭಾವಗಮ್ಯಂಗೆ ನಿಜಭಕ್ತೈಕ ವೇದ್ಯಂಗೆ
ಮೆಯ್ಯಿಕ್ಕಿವಲ್ಲಿಯುಂ ಧೂಪಮಂ ಬೀಸುತಿರೆ
ಮೆಯ್ಯಪುಳಕಂಗಳಿಮ್ಮಡಿಸುತಂ ಬೀಸುತಿರೆ
ಸರ್ಪಭೂಷಣನೊಲ್ದು ನೋಡಿ ಸಂತಸವಿಡಿದು
ಒಪ್ಪದಿಂ ತಳ್ಕೈಸಿ ಕಡು ನೇಹವಿಡಿದಿಡಿದು
ನೋಡು ನಂದೀಶ ರಾಜ್ಯವನೊದೆದರಿಂತುಂಟೆ
ಮಾಡಿತ್ತನಲ್ಲೆನಲ್ಕತ್ತೆ ಮಾಡಿದರುಂಟೆ
ನೋವನರಿಯದೆ ಹೊತ್ತ ನಿತ್ತರಿಸಿದವರುಂಟೆ
ಭೂವಳಯದೊಳಗೋಹಿಲಯ್ಯಂಗೆ ಪಡಿಯುಂಟೆ
ಎಂದೋಹಿಲಯ್ಯಂಗೆ ಗಣಪದವಿಯಂ ಕೊಟ್ಟು
ಸಂದ ಗಣಕುಲದ ನಡು ಓಹಿಲನ ಮುಂದಿಟ್ಟು
ಸುರಶಿರೋಮಾಲಿಯೊಪ್ಪಿದನಚಲನೊಪ್ಪಿದಂ
ಪುರಭೀಮಕಾಲ ಕಾನನದಾವನೊಪ್ಪಿದಂ
ತಪ್ಪಂಗೆ ತಪ್ಪೆನಿಪ ಚಂದ್ರಧರನೊಪ್ಪಿದಂ

ಗುಡ್ಡಂಗೆ ಗುಪ್ಪೆಸಿದ ಗಂಭೀರನೊಪ್ಪಿದಂ
ಹಂಪ್ರಕ್ಕೆ ಕೆಚ್ಚಿಕ್ಕೆ ಸುಖನಿತ್ಯನೊಪ್ಪಿದಂ
ಹಂಪೆಯ ವಿರೂಪಾಕ್ಷದೇವನಿಂತೊಪ್ಪಿದಂ

ಕಂದ|| ಪರಮವಿರಕ್ತಿಯೊಳ್ಪೆತಂ
ಪರವರಿಸವೆ ನಿಮಗೆ ಧೂಪಮಂ ತಂದಿತ್ತಾ
ಪರದಿಂ ಸಂದೋಹಿಲದೇ
ಪರಸುತ ನಾಂ ದೇವ ಹಂಪೆಯ ವಿರೂಪಾಕ್ಷಂ